ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ - 583 276


ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ-2017-18

ವಿಷಯ :

# ಕನ್ನಡ ದಲಿತ ಆತ್ಮಕಥೆಗಳ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವ : ಒಂದು ಅಧ್ಯಯನ


ಸಂಶೋಧನಾ ವಿದ್ಯಾರ್ಥಿ
ಶ್ರೀಮತಿ ಶಾರದ
ನೊಂ. ಸಂಖ್ಯೆ : 162001030073

ಮಾರ್ಗದರ್ಶಕರು
ಡಾ. ಶೀಲಾದೇವಿ ಎಸ್. ಮಳೀಮಠ
ಸಹ ಪ್ರಾಧ್ಯಾಪಕರು, ಸಂಶೋಧನಾ ಮಾರ್ಗದರ್ಶಕರು
ಕನ್ನಡ ವಿಭಾಗ, ಬಿ.ಎಂ.ಎಸ್. ಮಹಿಳಾ ವಿದ್ಯಾಲಯ
ಬಸವನಗುಡಿ, ಬೆಂಗಳೂರು – 560 004.

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾ ಕೇಂದ್ರ
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ - 583 276


ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ-2017-18

ವಿಷಯ :

# ಕನ್ನಡ ದಲಿತ ಆತ್ಮಕಥೆಗಳ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವ : ಒಂದು ಅಧ್ಯಯನ


ಸಂಶೋಧನಾ ವಿದ್ಯಾರ್ಥಿ

**ಶ್ರೀಮತಿ ಶಾರದ**

ನೊಂ. ಸಂಖ್ಯೆ : 162001030073

ಮಾರ್ಗದರ್ಶಕರು

**ಡಾ. ಶೀಲಾದೇವಿ ಎಸ್. ಮಳೀಮಠ**

ಸಹ ಪ್ರಾಧ್ಯಾಪಕರು, ಸಂಶೋಧನಾ ಮಾರ್ಗದರ್ಶಕರು

ಕನ್ನಡ ವಿಭಾಗ, ಬಿ.ಎಂ.ಎಸ್. ಮಹಿಳಾ ವಿದ್ಯಾಲಯ

ಬಸವನಗುಡಿ, ಬೆಂಗಳೂರು – 560 004.





ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಂಶೋಧನಾ ಕೇಂದ್ರ

ಪಂಪ ಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು – 560 018

# ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ **'ಕನ್ನಡ ದಲಿತ ಆತ್ಮಕಥೆಗಳ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವ : ಒಂದು ಅಧ್ಯಯನ'** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಶೀಲಾದೇವಿ ಎಸ್. ಮಳೀಮಠ, ಸಹ ಪ್ರಾಧ್ಯಾಪಕರು, ಸಂಶೋಧನಾ ಮಾರ್ಗದರ್ಶಕರು, ಕನ್ನಡ ವಿಭಾಗ, ಬಿ.ಎಂ.ಎಸ್. ಮಹಿಳಾ ವಿದ್ಯಾಲಯ, ಬಸವನಗುಡಿ, ಬೆಂಗಳೂರು – 560 004. ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಇತರೇ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

**ಶ್ರೀಮತಿ ಶಾರದ**
ಸಂಶೋಧನಾ ವಿದ್ಯಾರ್ಥಿ
ನೊಂ. ಸಂಖ್ಯೆ : 162001030073

ದಿನಾಂಕ : 3.10.2018
ಸ್ಥಳ : ಬೆಂಗಳೂರು

## ಮಾರ್ಗದರ್ಶಕರ ಧೃಡೀಕರಣ ಪತ್ರ

ಶ್ರೀಮತಿ ಶಾರದ ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **'ಕನ್ನಡ ದಲಿತ ಆತ್ಮಕಥೆಗಳ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವ : ಒಂದು ಅಧ್ಯಯನ'** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಶೀಲಾ ಮಳೀಮಠ

**ಡಾ. ಶೀಲಾದೇವಿ ಎಸ್. ಮಳೀಮಠ**
ಸಹ ಪ್ರಾಧ್ಯಾಪಕರು
ಸಂಶೋಧನಾ ಮಾರ್ಗದರ್ಶಕರು
ಕನ್ನಡ ವಿಭಾಗ, ಬಿ.ಎಂ.ಎಸ್. ಮಹಿಳಾ ವಿದ್ಯಾಲಯ
ಬಸವನಗುಡಿ, ಬೆಂಗಳೂರು – 560 004.

ದಿನಾಂಕ : 3.10.2018.
ಸ್ಥಳ : ಬೆಂಗಳೂರು.

ಡಾ. ಶೀಲಾದೇವಿ ಎಸ್. ಮಳೀಮಠ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ,
ಬಿಎಂಎಸ್ ಮಹಿಳಾ ವಿದ್ಯಾಲಯ,
ಬಸವನಗುಡಿ, ಬೆಂಗಳೂರು – 560004.

# ಕನ್ನಡ ದಲಿತ ಆತ್ಮಕಥೆಗಳ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವ : ಒಂದು ಅಧ್ಯಯನ

ಅಧ್ಯಾಯ – ೧

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

**ಪೀಠಿಕೆ :**

ಕನ್ನಡ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳು ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿವೆ. ಆತ್ಮಕಥೆಗಳು ರಚಿಸಿದವರ ಜೀವನದ ಏಳು–ಬೀಳುಗಳೊಂದಿಗೆ ನಡೆದು ಬಂದ ಹಲವು ಘಟನೆಗಳನ್ನು ಹೇಳುತ್ತವೆ. ಆಯಾ ವ್ಯಕ್ತಿಗಳ ಬದುಕಿನ ದಾರಿಯಲ್ಲಿನ ಏರಿಳಿತಗಳ ವಿಚಾರಗಳು ಮಿಳಿತವಾಗಿ ಅವರ ಆತ್ಮಕಥೆಗಳಲ್ಲಿ ಮೂಡಿ ಬರುತ್ತವೆ. ಘಟನೆಗಳನ್ನು ಹೇಳುವಾಗ ನಡೆದದ್ದನ್ನು ವಾಸ್ತವದ ನೆಲೆಯಲ್ಲಿ ಕಾಣಬಹುದು.

ಕಥೆ ಮತ್ತು ಕಾದಂಬರಿಯಲ್ಲಿನ ಘಟನೆಗಳನ್ನು ಕಲ್ಪನೆಯೊಂದಿಗೆ ಮುಂದುವರೆಸಲಾಗುತ್ತದೆ. ಪಾತ್ರ ಮತ್ತು ಘಟನೆಗಳ ಸುತ್ತ ಚಿತ್ರಣ ಮೂಡಿ ಬರುತ್ತದೆ. ಅವುಗಳಲ್ಲಿ ಹೆಚ್ಚಿನ ಭಾಗ ಕಲ್ಪನೆಗಳು ಮೂಡಿರುವುದರಿಂದ ಅವು ವಿಭಿನ್ನವಾಗಿ ರಚನೆಯಾಗುತ್ತವೆ. ಆದರೆ ಆತ್ಮಕಥೆಗಳಲ್ಲಿ ವ್ಯಕ್ತಿಯ ವ್ಯಕ್ತಿತ್ವದೊಂದಿಗೆ ಅವರ ಸುತ್ತ ನಡೆಯುವ ಘಟನಾವಳಿಯ ಚಿತ್ರಣವನ್ನು ಕಾಣಬಹುದು. ಆತ್ಮಕಥೆಗಳು ಅವುಗಳನ್ನು ಓದಿದವರ ಬದುಕಿಗೆ ಸ್ಫೂರ್ತಿಯನ್ನು ನೀಡುತ್ತವೆ. ಆತ್ಮ ಕಥೆಗಳು ಹುಟ್ಟಿ ಬರಲು ಕಾರಣವೇನು? ಅವುಗಳಿಂದ ಬಹಳಷ್ಟು ಜನರಿಗೆ ನೋವುಂಟಾಗುವುದಿಲ್ಲವೆ? ಆತ್ಮಕಥೆಗಳ ರಚನೆಯ ಅಗತ್ಯವಿದೆಯೇ? ಇದರಿಂದ ಯಾರಿಗೆ ಅನುಕೂಲವಾಗುತ್ತದೆ? ಆತ್ಮಕಥೆಗಳ ಓದುಗರು ಯಾರು? ದಲಿತ ಆತ್ಮಕಥೆಗಳ ವಿಶೇಷತೆ ಏನು? ಎಂಬಂತಹ ಪ್ರಶ್ನೆಗಳು ಮೂಡುತ್ತವೆ. ಆತ್ಮಕಥೆಗಳು ಮತ್ತು ದಲಿತ ಆತ್ಮಕಥೆಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಎಲ್ಲರೂ ಜೀವನದ ಕಷ್ಟ ಸುಃಖಗಳನ್ನು ಅನುಭವಿಸುತ್ತಾ ಬದುಕನ್ನು ಕಟ್ಟಿಕೊಳ್ಳಲು ಅವರು ಪಡುವ ಕಷ್ಟವನ್ನು ವಿವರಿಸುತ್ತಾರೆ. ಆದರೆ ದಲಿತ ಆತ್ಮಕಥೆಗಳಲ್ಲಿ ಜೀವನದ ಪ್ರತಿಹಂತದಲ್ಲಿ ಹೋರಾಟವನ್ನು, ಸಂಘರ್ಷವನ್ನು, ಅವರು ಎದುರಿಸುವ ಹಲವು ಸಮಸ್ಯೆಗಳನ್ನು ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರತಿಭಟನೆಯನ್ನು ಕಾಣಬಹುದು.

ದಲಿತರದು ನಿತ್ಯವೂ ಸಂಘರ್ಷದ ಜೀವನವೇ, ಏಕೆಂದರೆ ಸಮಾಜದಲ್ಲಿ ಅವರಿಗಿರುವ ಸ್ಥಾನಮಾನ, ಮಾಡಿಕೊಂಡು ಬಂದ ಕೆಲಸ ಕಾರ್ಯಗಳು, ಬದುಕಿನ ರೀತಿ ಎಲ್ಲವೂ ಸಮಾಜ ಅವರಿಗೆ ವಿಧಿಸಿರುವಂಥ ಒಂದು ನಿಷೇಧ ಮತ್ತು ಚೌಕಟ್ಟು. ಅವರಿಗೆ ಸ್ವಾತಂತ್ರ್ಯವಿಲ್ಲ. ಸ್ವತಂತ್ರವಾಗಿ ಏನನ್ನೂ ಮಾಡುವ ಹಾಗಿಲ್ಲ. ತಮಗಿಷ್ಟವಾದ ಬದುಕನ್ನು ಬದುಕುವ ಅವಕಾಶವು ಅವರಿಗಿಲ್ಲ.

ಅವರ ಊಟ, ವೇಷಭೂಷಣ, ನಡೆ–ನುಡಿ, ವರ್ತನೆ ಅವರು ಮಾಡಬೇಕಾದ ಕಾರ್ಯವನ್ನು ನಿರ್ಧರಿಸುವವರು, ಮೇಲುವರ್ಗದವರು, ಜಮೀನ್ದಾರರು, ಶ್ರೀಮಂತರು ಅನಿಸಿಕೊಂಡವರು ಎಲ್ಲವನ್ನು ಹಾಕಿಕೊಟ್ಟಿದ್ದರು. ಅದನ್ನು ಹಾಗೆಯೇ ಮುಂದುವರೆಸುವಂತೆ ವ್ಯವಸ್ಥೆ ಮಾಡಲಾಗಿದೆ. ಇವೆಲ್ಲವನ್ನು ಸಹಿಸಿಕೊಂಡು, ದೇವರು, ಧರ್ಮ ಎಂಬ ಭಯ ಭಕ್ತಿಯಿಂದ ದಲಿತರು ಬದುಕಿದ್ದರು. ಇದಕ್ಕೆ ಪ್ರಮುಖ ಕಾರಣವೆಂದರೆ ಅವರಲ್ಲಿನ ಮೌಢ್ಯತೆಗಳು. ಇವರಲ್ಲಿ ವಿದ್ಯೆ, ವಿವೇಕವಿಲ್ಲದೆ, ಯಾವುದನ್ನು ಪ್ರಶ್ನಿಸದೇ ಬದುಕುವ ಪರಿಸ್ಥಿತಿ ಇವರಿಗಿತ್ತು. ಹಾಗೇ ಬದುಕಬೇಕೆಂಬ ನಿಯಮವನ್ನು ಒತ್ತಾಯವಾಗಿ ಹೇರಿದ್ದರಿಂದ ಅವರೆಲ್ಲರೂ ಶತಮಾನಗಳ ಕಾಲ ಅದೇ ಸ್ಥಿತಿಯಲ್ಲಿ ಬದುಕಿದ್ದರು. ಶ್ರೀಮಂತವರ್ಗ, ಜಮೀನ್ದಾರರು, ಹೇಳಿದ್ದನ್ನು ಕೇಳುತ್ತಾ ಅವರ ಮನೆಯ ಕೆಲಸ ಕಾರ್ಯಗಳನ್ನು ಮಾಡುತ್ತಾ, ಅವರಿಗಾಗಿಯೇ ದುಡಿಯುತ್ತಾ. ಕೊಟ್ಟಿದ್ದನ್ನು ತಿಂದು ಬದುಕಿದ್ದರು. ಇವರೆಲ್ಲರೂ ದಲಿತರೇ ಆಗಿದ್ದರು. ದಲಿತರ ಬದುಕಿನ ಚಿತ್ರಣ ದೇಶದ ಎಲ್ಲಾ ಭಾಗದಲ್ಲಿಯೂ ಹೀಗೇ ಇತ್ತು. ಯಾರೂ ಯಾವುದನ್ನೂ ಪ್ರಶ್ನಿಸುತ್ತಿರಲಿಲ್ಲ. ಅವರು ಏನೇ ಕೆಲಸ ಹೇಳಿದರೂ ಮರು ಮಾತಿಲ್ಲದೇ ಮಾಡಿಕೊಂಡು ಹೋಗುವುದಷ್ಟನ್ನೇ ಅವರೆಲ್ಲರೂ ರೂಢಿಸಿಕೊಂಡು ಬಂದಿದ್ದರು. ಬ್ರಿಟೀಷರು ಭಾರತದಲ್ಲಿ ಆಳ್ವಿಕೆ ನಡೆಸುವ ಸಂದರ್ಭದಲ್ಲಿ ಶಿಕ್ಷಣ ಕೊಡಿಸಲು ಮುಂದಾದರು. ಆ ವೇಳೆಗಾಗಲೇ ದಲಿತ ಜನರ ಸ್ಥಿತಿಯನ್ನು ಕಂಡಿದ್ದ ಸುಧಾರಕರು ಅವರ ಸಮಾನತೆಯ ಹಕ್ಕಿಗಾಗಿ ಹಾಗೂ ಬದುಕಿನ ರೀತಿಯನ್ನು ಬದಲಿಸುವುದಕ್ಕಾಗಿ ಹೋರಾಟವನ್ನು ಮಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ದೇಶದ ಬೇರೆ ಬೇರೆ ಭಾಗಗಳಲ್ಲಿಯೂ ಜನರು ವರ್ಗ, ಜಾತಿ, ಮತ, ಧರ್ಮ ಎಂಬ ಭೇದಕ್ಕೆ ಒಳಗಾಗಿದ್ದರು. ಬಡವರು, ನಿರ್ಗತಿಕರು, ಅಸ್ಪೃಶ್ಯರು, ವಸತಿಹೀನರು ಆಗಿ ಬದುಕಿದ್ದ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇದನ್ನು ಗಮನಿಸಿದ ಹಲವು ಮಹನೀಯರು ಅವರೆಲ್ಲರ ಸಮಾನತೆಯ ಶಿಕ್ಷಣ ಮತ್ತು ಬದುಕಿನ ಹಕ್ಕಿಗಾಗಿ ಹೋರಾಟ ನಡೆಸಿದರು. ಬಾಬಾಸಾಹೇಬ್ ಡಾ. ಅಂಬೇಡ್ಕರ್ ಅವರು ೧೯ನೇ ಶತಮಾನದ ಕೊನೆಯಲ್ಲಿ ಹುಟ್ಟಿ ಬಂದರು. ಅವರು ತಮ್ಮ ಬದುಕಿನುದ್ದಕ್ಕೂ ದಲಿತರ, ಅಸ್ಪೃಶ್ಯರ ಪರವಾಗಿಯೇ ಹೋರಾಟವನ್ನು ಮಾಡಿಕೊಂಡು ಬಂದರು.

ಅಂಬೇಡ್ಕರ್ ಅವರ ಪ್ರಭಾವದಿಂದ ಚಳುವಳಿ ಮತ್ತು ಹೋರಾಟಗಳಲ್ಲಿ ಮಾತ್ರವಲ್ಲದೆ, ಬಹಳಷ್ಟು ಜನರ ಜೀವನದಲ್ಲಿಯೂ ಬದಲಾವಣೆಗಳಾದವು. ಶ್ರೇಣೀಕೃತವಾದ ಸಮಾಜದ ಚಿತ್ರಣವನ್ನು, ವ್ಯವಸ್ಥೆ ನೀಡುತ್ತಿರುವ ಸ್ಥಾನಮಾನವನ್ನು ಎಲ್ಲರಿಗೂ ಅರಿವಾಗುವ ರೀತಿಯಲ್ಲಿ ಹೇಳಿ ಅವರಲ್ಲಿ ಜಾಗೃತಿಯನ್ನುಂಟು ಮಾಡಿದರು. ಅವರ ಹೋರಾಟಗಳಿಗೆ ಬುದ್ಧ, ಬಸವ, ಜ್ಯೋತಿಬಾ ಫುಲೆ, ಸಾವಿತ್ರಿ ಬಾಯಿ ಫುಲೆ ಮುಂತಾದವರು ಸ್ಫೂರ್ತಿಯಾಗಿದ್ದರು. ಅವರ ದಾರಿಯಲ್ಲಿಯೇ ಸಾಗಿ ಅವರೆಲ್ಲರ ಹೋರಾಟವನ್ನು ಅರ್ಥಪೂರ್ಣ ಹಾಗೂ ಸಾರ್ಥಕವಾಗಿಸಿದ ಕೀರ್ತಿ ಡಾ. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ.

ಶಿಕ್ಷಣವಿಲ್ಲದೆ ಕತ್ತಲಲ್ಲಿ ಬದುಕಿದ್ದ ಜನರಿಗೆ ಅಕ್ಷರ ಕಲಿಸಲು ಮುಂದಾದ ಮಹನೀಯರಿಂದ ಕೆಲವರು ಶಿಕ್ಷಣ ಪಡೆದರು. ಅವರೆಲ್ಲರೂ ಅಂಬೇಡ್ಕರ್ ಅವರು ನೀಡಿದ ಸಾಮಾಜಿಕ, ಶೈಕ್ಷಣಿಕ,

ರಾಜಕೀಯ ಹಾಗೂ ಆರ್ಥಿಕತೆಯ ಜಾಗೃತಿಯನ್ನು ಅರಿತುಕೊಂಡರು. ಸಮಾನತೆ, ಸ್ವಾತಂತ್ರ್ಯದ ಹಕ್ಕುಗಳು ಎಲ್ಲರಿಗೂ ಸಿಗುವಂತಾಗಲು ಶ್ರಮಿಸಿದರು. ಇವರೆಲ್ಲರಿಂದ ಒಂದು ಶೈಕ್ಷಣಿಕ ಹಾಗೂ ಸಾಮಾಜಿಕ ಕ್ರಾಂತಿಯೇ ಉಂಟಾಯಿತು. ಇವರ ಫಲವೇ ಬಂಡಾಯ ಸಾಹಿತ್ಯ ರಚನೆಯಾಗಲು ಕಾರಣವಾಯಿತು. ನೋವುಂಡ ಜನತೆ ಜನರನ್ನು ಒಗ್ಗೂಡಿಸಲು, ಸಾಹಿತ್ಯವನ್ನು ಒಂದು ಮಾಧ್ಯಮದ ರೀತಿ ಬಳಸಿಕೊಂಡರು. ಸಮಾಜದ ಸ್ಥಿತಿಗತಿಯನ್ನು, ಸಮಸ್ಯೆಯನ್ನು ತಿಳಿಸಲು ಸಾಧ್ಯವಾದದ್ದೇ ಬರವಣಿಗೆಯಿಂದ ಆದ್ದರಿಂದ ಎಲ್ಲರಿಗೂ ಅದು ಪೂರಕವಾಯಿತು. ಹೆಚ್ಚಿನ ದಲಿತ ಬರಹಗಾರರು ಚಳುವಳಿಯಲ್ಲಿ ಭಾಗಿಯಾಗಿದ್ದವರೇ ಆಗಿದ್ದರು. ಅವರಿಗೆ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕವಾದ ಹಕ್ಕುಗಳನ್ನು ಪಡೆಯುವ ಜಾಗೃತಿಯುಂಟಾಗಿತ್ತು. ಆದರೆ ಅದರೊಂದಿಗೆ ದಲಿತ ಸಮುದಾಯಗಳ ಮೇಲೆ, ಮಹಿಳೆಯರ ಮೇಲೆ ನಡೆಯುತ್ತಿದ್ದ ಶೋಷಣೆ, ದೌರ್ಜನ್ಯ, ಅತ್ಯಾಚಾರದಂಥ ಪ್ರಕರಣಗಳನ್ನು ಮೇಲ್ವರ್ಗದವರು ನಿರಂತರವಾಗಿ ಮುಂದುವರಿಸುತ್ತಲೇ ಇದ್ದರು. ತಾತ ಮುತ್ತಾತರ ಕಾಲದಿಂದ ಮಾಡಿಕೊಂಡು ಬರುತ್ತಿದ್ದ ಜೀತ ಪದ್ಧತಿಗೆ ಒತ್ತಾಯ ಮಾಡುತ್ತಿದ್ದರು. ಶಾಲೆಗಳಲ್ಲಿ ಅವರನ್ನು ಸೇರಿಸದೆ ಇರುವುದು, ಶಾಲೆಗೆ ಹೋದರೂ ಅವರಿಗೆ ವಿದ್ಯೆ ಕಲಿಸಲು ಉಪಾಧ್ಯಾಯರು ಹಿಂಜರಿಯುತ್ತಿರುವುದು, ಅವರನ್ನು ನೋಡುವುದು, ಮಾತಾಡುವುದು ಮೈಲಿಗೆ ಎಂಬಂತೆ ವರ್ತಿಸುತ್ತಿರುವುದು ಇವೆಲ್ಲ ನಡೆಯುತ್ತಿದ್ದುವು. ಇವೆಲ್ಲವನ್ನು ಕಂಡ ದಲಿತ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ತಾವೇ ಹೋರಾಟ ಮಾಡಲು ಪ್ರಾರಂಭಿಸಿದರು. ಆದರೆ ಇವೆಲ್ಲವೂ ಸಾಧ್ಯವಾಗಿದ್ದು ಅಂಬೇಡ್ಕರ್ ಅವರ ವಿಚಾರಧಾರೆಯಿಂದಲೇ. ಅವರ ಚಿಂತನೆ, ಹೋರಾಟ, ಜನರನ್ನು ಉದ್ದೇಶಿಸಿ ಮಾಡುತ್ತಿದ್ದ ಭಾಷಣಗಳು, ಸಾಮಾಜಿಕವಾಗಿ ಗುರುತಿಸಿದ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿದ್ದರು. ಜನತೆ ಸಮಾನತೆಯ ತತ್ವಗಳನ್ನು ಅಳವಡಿಸಿಕೊಂಡು ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿಯೇ ನಡೆದರು. ಅವರ ಚಿಂತನೆಗಳನ್ನು ಅರ್ಥೈಸಿಕೊಂಡು ಅನುಷ್ಠಾನಗೊಳಿಸುವಲ್ಲಿ ನಡೆದ ಚಳುವಳಿಗಳಲ್ಲಿ ಎಲ್ಲರೂ ಭಾಗವಹಿಸಿದರು. ಅಂಬೇಡ್ಕರ್ ಅವರೂ ಅದೇ ಮಾರ್ಗವನ್ನು ಅನುಸರಿಸಿದ್ದರು. ಜನರಿಗೆ ಸಮಾಜದ ಬಗೆಗಿನ ವಿಚಾರಗಳನ್ನು ತಿಳಿಸಲು ಪತ್ರಿಕೆಗಳಿಗೆ ಲೇಖನ ಬರೆಯಲು ಪ್ರಾರಂಭಿಸಿದ್ದರು. ಅಂಬೇಡ್ಕರ್ ಅವರು ವಿದೇಶದಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿದ್ದಾಗಲೂ ಭಾರತದಲ್ಲಿನ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ಆಚರಣೆಯನ್ನು ಕುರಿತು ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಕಳುಹಿಸುತ್ತಿದ್ದರು. ಪತ್ರಿಕೆಗಳು ವಿಷಯಗಳನ್ನು ತಲುಪಿಸುವ ಕೆಲಸವನ್ನು ಮಾಡುತ್ತಿದ್ದವು. ಅಂದಿಗೆ ವಿಷಯವನ್ನು ತಿಳಿಸುವ ಕೆಲಸವನ್ನು ಮಾಡುತ್ತಿದ್ದ ಮಾಧ್ಯಮವೇ ಪತ್ರಿಕೆಗಳು. ಅಂಬೇಡ್ಕರ್ ಅವರು ಭಾರತೀಯ ಸಮಾಜದ ಸಂಪೂರ್ಣ ಚಿತ್ರಣವನ್ನು ತಿಳಿಸುವ ರೀತಿಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಇದರಿಂದಾಗಿ ಅಕ್ಷರ ಕಲಿತ ಮೊದಲ ತಲೆಮಾರಿನ ದಲಿತರು ಅಂಬೇಡ್ಕರ್ ಅವರ ವಿಚಾರಗಳನ್ನು ಓದಿ ಅರ್ಥೈಸಿಕೊಳ್ಳಲು ಪ್ರಾರಂಭಿಸಿದರು. ಇದರಿಂದಾಗಿ ಸಮಾಜದ ವ್ಯವಸ್ಥೆಯನ್ನು ಅರಿತುಕೊಳ್ಳಲು ತಾವು ತಮ್ಮನ್ನು ಹೋರಾಟಕ್ಕೆ ಸಜ್ಜುಗೊಳಿಸಿಕೊಳ್ಳಲು ಸಾಧ್ಯವಾಯಿತು.

ಅಂಬೇಡ್ಕರ್ ಅವರು ಮಾಡಿದ ಹೋರಾಟದ ಮನೋಭಾವ ದಲಿತ ಸಮುದಾಯದ ಬರಹಗಾರರ ಚಿಂತನೆಗಳನ್ನು ಉದ್ದೀಪಿಸಿದುವು. ಜೊತೆಗೆ ಅವರೆಲ್ಲರೂ ಬರವಣಿಗೆಯಲ್ಲಿ ತಮ್ಮನ್ನು

ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಹೋರಾಟದ ಜೊತೆ ಜೊತೆಗೆ ಬರವಣಿಗೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಶೋಷಣೆಗೆ ಒಳಗಾಗಿ ಬದುಕುತ್ತಿದ್ದ ಜನರ ಪರವಾಗಿ ಚಳುವಳಿಯಲ್ಲೂ ತೊಡಗಿಕೊಂಡರು. ದಲಿತರ ಪರವಾದ ಅವರ ಕಾಳಜಿಯಿಂದ ಬರವಣಿಗೆಯೂ ತೀವ್ರವಾಗಿಯೇ ಸಾಗಿತ್ತು. ದಲಿತರು ಅಥವಾ ತಳಸಮುದಾಯದವರ ಹೋರಾಟಕ್ಕೆ ಹಾಗೂ ಅಕ್ಷರದ ಬರವಣಿಗೆಗೆ ಕಾರಣವಾದವರು ಅಂಬೇಡ್ಕರ್. ಅವರು ತಮ್ಮ ಪ್ರಭಾವವನ್ನು ಜಾತಿಭೇದವಿಲ್ಲದೆ ಎಲ್ಲರ ಮೇಲೂ ಹರಿಸಿದ್ದರೆಂದರೆ ತಪ್ಪಾಗಲಾರದು. ಏಕೆಂದರೆ ಆ ಕಾಲಘಟ್ಟದಲ್ಲಿ ಬರೆಯುತ್ತಿದ್ದವರು ಒಂದೇ ವರ್ಗ ಅಥವಾ ಜಾತಿಗೆ ಸೀಮಿತವಾಗಿರಲಿಲ್ಲ. ದಲಿತರ ಬಗೆಗಿನ ಕಾಳಜಿಯಿಂದ ಇರುವ ಸಮಸ್ಯೆಗಳನ್ನು ಕುರಿತು ಕಥೆ, ಕಾದಂಬರಿ, ನಾಟಕಗಳನ್ನು ಬರೆದರು. ಆದರೆ ಅವರೆಲ್ಲರೂ ಸಮಸ್ಯೆಗಳನ್ನು ತೋರಿಸುವಲ್ಲಿ ಮುಂದಾದರು. ಅಂಬೇಡ್ಕರ್ ಅವರು ತಮ್ಮ ಬರವಣಿಗೆಗಳಲ್ಲಿ ಸಮಸ್ಯೆಗಳಿಗೆ ಕಾರಣಗಳು ಹಾಗೂ ಅದಕ್ಕೆ ಪರಿಹಾರವನ್ನು ಸೂಚಿಸುವ ಕೆಲಸವನ್ನು ಮಾಡಿದರು.

ದಲಿತರ ಹೋರಾಟದ ಮನೋಭಾವ ಗಟ್ಟಿಯಾಗತೊಡಗಿದಂತೆ ಅವರಲ್ಲಿನ ಪ್ರತಿಭಟನಾ ಮನೋಭಾವವು ಹೆಚ್ಚಾಗತೊಡಗಿತು. ಅದರ ಫಲವಾಗಿಯೇ ದಲಿತ ಬಂಡಾಯ ಸಾಹಿತ್ಯವು ರಚನೆಯಾಗಲು ಪ್ರಾರಂಭವಾಯಿತು. ಪ್ರಗತಿಶೀಲ ಚಿಂತಕರ ಆಲೋಚನಾ ದಾಟಿಯಲ್ಲಾದ ಬದಲಾವಣೆ ಬಂಡಾಯ ಸಾಹಿತ್ಯಕ್ಕೆ ಮುನ್ನುಡಿಯಾಯಿತು. ಬಂಡಾಯ ಸಾಹಿತ್ಯ ರಚನೆಗೆ ಮುಂದಾದವರೆಲ್ಲರೂ ದಲಿತರೇ ಆಗಿದ್ದರು. ದಲಿತರು ಬಂಡಾಯ ಮಾರ್ಗವನ್ನು ಅನುಸರಿಸಿ ಬರೆಯುತ್ತಿದ್ದ ಕಾವ್ಯ, ಕಥೆ, ನಾಟಕಗಳು ಜನರನ್ನು ಬಹುಬೇಗ ತಲುಪಿದವು. ಇವುಗಳ ಹಿನ್ನೆಲೆಯನ್ನು ಅವಲೋಕಿಸಿದಾಗ ಮುಖ್ಯವಾಗಿ ಕಂಡು ಬರುವ ಅಂಶವೇ ಅಂಬೇಡ್ಕರ್ ಅವರ ವಿಚಾರಧಾರೆಯಾಗಿದೆ.

ಪ್ರಸ್ತುತ ಕನ್ನಡ ದಲಿತ ಆತ್ಮಕಥೆಗಳ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವ ಈ ವಿಷಯವನ್ನು ಕುರಿತಂತೆ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆತ್ಮಕಥೆಗಳನ್ನು ಕುರಿತಂತೆ ಅಧ್ಯಯನಗಳು ನಡೆದಿವೆ. ಆದರೆ ದಲಿತ ಆತ್ಮಕಥೆಗಳ ಮೇಲೆ ಅಂಬೇಡ್ಕರ್ ಅವರ ಪ್ರಭಾವವನ್ನು ಗುರುತಿಸುವುದು ನನ್ನ ಅಧ್ಯಯನದ ಉದ್ದೇಶವಾಗಿದೆ. ದಲಿತ ಆತ್ಮಕಥೆಗಳಲ್ಲಿ ಅಸ್ಪೃಶ್ಯರ ಮತ್ತು ಸ್ಪೃಶ್ಯರ ಆತ್ಮಕಥೆಗಳಿದ್ದು ಇವುಗಳಲ್ಲಿ ಅಸ್ಪೃಶ್ಯರ ಕೆಲವು ಆತ್ಮಕಥೆಗಳನ್ನು ನನ್ನ ಅಧ್ಯಯನಕ್ಕೆ ತೆಗೆದುಕೊಂಡಿದ್ದೇನೆ. ಇನ್ನುಳಿದ ಕೆಲವು ಕೃತಿ ದೊರೆಯದಿರುವ ಕಾರಣದಿಂದ ದೊರೆತ ಕೆಲವು ಆತ್ಮಕಥೆಗಳನ್ನು ಕುರಿತು ವಿವರಿಸಿದ್ದೇನೆ.

**ಅಧ್ಯಯನದ ವಿಧಾನ :**

ಕನ್ನಡ ಸಾಹಿತ್ಯ ಪ್ರಕಾರದಲ್ಲಿ ದಲಿತ ಆತ್ಮಕಥೆಗಳದು ಪ್ರಮುಖ ಸ್ಥಾನ. ಏಕೆಂದರೆ ಆತ್ಮಕಥೆಗಳು, ನಡೆದು ಬಂದ ದಾರಿಯ ಕಡೆ ತಿರುಗಿ ನೋಡುವ ಕ್ರಮ ಮಾತ್ರವೇ ಅಲ್ಲ. ಮತ್ತೊಬ್ಬರಿಗೆ ಮಾರ್ಗದರ್ಶನವನ್ನು, ಬದುಕಿನ ಹಲವು ಮುಖಗಳನ್ನು ಪರಿಚಯ ಮಾಡಿಕೊಡುತ್ತವೆ. ನೊಂದವರ ನೋವಿಗೆ ದನಿಯಾಗುವ ಬದುಕಿನ ಭರವಸೆಯನ್ನು ನೀಡುತ್ತವೆ. ಛಲದಿಂದ ಬದುಕನ್ನು ಎದುರಿಸುವ

ಸವಾಲುಗಳನ್ನು ಸ್ವೀಕರಿಸಿ ಸಾಗುವ ಕ್ರಮವನ್ನು ಕಾಣಬಹುದು. ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ನರಳುವವರಿಗೆ ಅದರಿಂದ ಹೊರಬರುವ ಪರಿಹಾರರೂಪದ ಮಾರ್ಗವನ್ನು ಆತ್ಮಕಥೆಗಳು ಕಟ್ಟಿಕೊಡುತ್ತವೆ. ಅದರಲ್ಲೂ ದಲಿತ ಆತ್ಮಕಥೆಗಳು ನೋವಿನ ಹಿಂಸೆಯ, ಅವಮಾನದ ಪ್ರತಿರೂಪಗಳೆನಿಸುತ್ತವೆ. ಹಾಗೆಯೇ ಎಲ್ಲವನ್ನು ಸಹಿಸಿ ಸಾಧನೆಯ ಕಡೆಗೆ ಸಾಗುವ ದಾರಿಯನ್ನೂ ಸೂಚಿಸುತ್ತವೆ.

**ವಿಶ್ಲೇಷಣಾತ್ಮಕ ವಿಧಾನ :**

ಈ ನಿಬಂಧದಲ್ಲಿ ವಿಶ್ಲೇಷಣಾತ್ಮಕ ಸಂಶೋಧನಾ ವೈಧಾನಿಕತೆಯನ್ನು ಅಳವಡಿಸಿಕೊಂಡಿದ್ದೇನೆ.

ಆತ್ಮಕಥೆಗಳಿಗೆ ಸಂಬಂಧಿಸಿದ ಮೂಲ ಆಕರಗಳನ್ನು ಪುಸ್ತಕಗಳಿಂದ ಹಾಗೂ ಅವುಗಳನ್ನು ರಚಿಸಿದ ಕೆಲವರಿಂದ ನೇರವಾಗಿ ಪಡೆದಿರುತ್ತೇನೆ.

**ಅಧ್ಯಯನದ ಉದ್ದೇಶ :** ಆತ್ಮಕಥೆಗಳನ್ನು ವಿಷಯಗಳ ಅವಲೋಕನದ ಮೂಲಕ ಅಧ್ಯಯನಕ್ಕೆ ಒಳಪಡಿಸುವ ಕೆಲವು ಉದ್ದೇಶಗಳನ್ನು ಒಳಗೊಂಡು ವಿವರಿಸಿದ್ದೇನೆ.

- ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಕಥೆಗಳ ಸ್ಥಾನವನ್ನು ಗುರುತಿಸುವುದು.
- ಕನ್ನಡ ದಲಿತ ಆತ್ಮಕಥೆಗಳ ಮಹತ್ವವನ್ನು ವಿವರಿಸುವುದು.
- ಅಂಬೇಡ್ಕರ್ ಅವರ ಸಾಹಿತ್ಯ ಆತ್ಮಕಥೆಗಳಿಗೆ ನೀಡಿದ ಗಟ್ಟಿತನವನ್ನು ತಿಳಿಸುವುದು.
- ಅಂಬೇಡ್ಕರ್ ಅವರ ಹೋರಾಟವನ್ನು ಆತ್ಮಕಥೆಗಳು ಹೇಗೆ ಪ್ರತಿಬಿಂಬಿಸಿವೆ ಎಂಬುದನ್ನು ಅವಲೋಕಿಸುವುದು.
- ದಲಿತ ಆತ್ಮಕಥೆಗಳಲ್ಲಿ ಅಂಬೇಡ್ಕರ್ ಅವರ ಪ್ರಭಾವವನ್ನು ಗುರುತಿಸುವುದು.

ಈ ಎಲ್ಲಾ ಉದ್ದೇಶಗಳನ್ನು ಒಳಗೊಂಡು ಅಧ್ಯಯನವನ್ನು ಮುಂದುವರೆಸುವ ಪ್ರಯತ್ನವನ್ನು ಮಾಡಿದ್ದೇನೆ.

**ಅಧ್ಯಯನದ ವ್ಯಾಪ್ತಿ :**

ವಿಷಯಕ್ಕನುಗುಣವಾಗಿ ಅಧ್ಯಯನವನ್ನು ಮುಂದುವರೆಸಲು ಅಧ್ಯಾಯಗಳ ವ್ಯಾಪ್ತಿಯನ್ನು ಹಾಕಿಕೊಂಡಿದ್ದೇನೆ. ಈ ಅಧ್ಯಯನದಲ್ಲಿ ಐದು ಅಧ್ಯಾಯಗಳಿದ್ದು ವಿಷಯ ವಿವರಣೆಯ ಕ್ರಮಕ್ಕೆ ಅನುಗುಣವಾಗಿ ಅವುಗಳನ್ನು ವಿವರಿಸಿದ್ದೇನೆ.

ಅಧ್ಯಾಯ ಒಂದು – ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯದ ಮುಖ್ಯ ಪ್ರಕಾರವಾದ ದಲಿತ ಆತ್ಮಕಥೆಗಳಿಗೆ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಭಾವವನ್ನು ಕುರಿತು ವಿವರಿಸಲಾಗಿದೆ. ಕನ್ನಡ ದಲಿತ ಆತ್ಮಕಥೆಗಳ ವಿಶೇಷತೆಯನ್ನು ಕುರಿತು ಅಧ್ಯಯನ ನಡೆಸಲಾಗಿದೆ. ದಲಿತ ಹೋರಾಟ ಮತ್ತು ಸಾಹಿತ್ಯಕ್ಕೆ ಅಂಬೇಡ್ಕರ್ ಅವರ ಹೋರಾಟಗಳು ಸ್ಫೂರ್ತಿಯಾದ ಸಂದರ್ಭವನ್ನು ಗುರುತಿಸಿದ್ದೇನೆ.

ಅಧ್ಯಾಯ ೨ – ದಲಿತ ವರ್ಗದ ಸಾಮಾಜಿಕ ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಬದುಕಿನ ಮೇಲೆ ಅಂಬೇಡ್ಕರ್ ಪ್ರಭಾವ : ಈ ಅಧ್ಯಾಯವು ದಲಿತರ ವರ್ಗ ಸಂಘರ್ಷವನ್ನು ಸಾಮಾಜಿಕವಾದ ಅಸಮಾನತೆಯನ್ನು, ಮೌಢ್ಯ ನಿಷೇಧವನ್ನು ಹಾಗೂ ಸಾಂಸ್ಕೃತಿಕವಾಗಿ ದಲಿತರ ಬದುಕು ಅವರ ಮಹತ್ವವನ್ನು ಹಾಗೂ ಶಿಕ್ಷಣದ ಅರಿವಿಲ್ಲದ ಬದುಕು, ಅಂಬೇಡ್ಕರ್ ಅವರ ಹೋರಾಟಗಳಿಂದ ಬದಲಾಗಿ ಅಕ್ಷರ ಕಲಿಯುವ ಜಾಗೃತಿಯುಂಟಾದ ಸಂದರ್ಭವನ್ನು ಮತ್ತು ರಾಜಕೀಯ ಅಧಿಕಾರವನ್ನು ಮತ್ತು ರಾಜಕೀಯದಿಂದ ಆಗುವ ಬದಲಾವಣೆಗಳನ್ನು ಕುರಿತು ಅಂಬೇಡ್ಕರ್ ವಿಚಾರಧಾರೆಗಳ ಮೂಲಕ ವಿವರಿಸಿದ್ದೇನೆ.

ಅಧ್ಯಾಯ ೩ – ಆತ್ಮಕಥೆಗಳಲ್ಲಿ ಸಾಮಾಜಿಕ ಹೋರಾಟದ ಚಿತ್ರಣ. ಈ ಅಧ್ಯಾಯವು ಕನ್ನಡ ಆತ್ಮಕಥೆಗಳನ್ನು ಅಂಬೇಡ್ಕರ್ ಅವರ ಶಿಕ್ಷಣ ಸಂಘಟನೆ ಮತ್ತು ಹೋರಾಟದ ಹಿನ್ನೆಲೆಯಲ್ಲಿ ವಿವರಿಸಿದ್ದೇನೆ. ಕನ್ನಡದ ಎಂಟು ದಲಿತ ಆತ್ಮಕಥೆಗಳನ್ನು ಈ ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ.

ಅಧ್ಯಾಯ ೪ – ಆತ್ಮಕಥೆಗಳಲ್ಲಿ ದಲಿತ ಸಂವೇದನೆ : ಈ ಅಧ್ಯಾಯದಲ್ಲಿ ದಲಿತವರ್ಗದ ಬದುಕಿನ ಸಂಘರ್ಷ ಮತ್ತು ಸಂವೇದನೆಯನ್ನು, ಆತ್ಮಕಥೆಗಳ ಹಿನ್ನೆಲೆಯಲ್ಲಿ ವಿವರಿಸಿದ್ದೇನೆ.

ಅಧ್ಯಾಯ ೫ – ಸಮಾರೋಪ – ಈ ಅಧ್ಯಾಯವು ದಲಿತ ಆತ್ಮಕಥೆಗಳ ಪ್ರಭಾವ ಪ್ರೇರಣೆಗಳನ್ನು ಹೇಳುವುದರೊಂದಿಗೆ ಅಂಬೇಡ್ಕರ್ ವಿಚಾರಧಾರೆಯ ಮಹತ್ವವನ್ನು ಹಾಗೂ ಅವರಿಂದ ಪ್ರಭಾವಕ್ಕೊಳಗಾದ ಜನಾಂಗದಲ್ಲಿ ಉಂಟಾದ ಜಾಗೃತಿಯನ್ನು, ಬದುಕಿನಲ್ಲಾದ ಪರಿವರ್ತನೆಯನ್ನು ವಿವರಿಸಿದ್ದೇನೆ.

ಕನ್ನಡ ದಲಿತ ಆತ್ಮಕಥೆಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷವಾಗಿವೆ. ಇದಕ್ಕೆ ಪ್ರಮುಖವಾದ ಕಾರಣವೆಂದರೆ ರಚಿಸಿದವರ ಬದುಕಿನ ಮೇಲೆ ಅಂಬೇಡ್ಕರ್ ಅವರ ವಿಚಾರಧಾರೆಗಳ ಸಂಪೂರ್ಣವಾದ ಪ್ರಭಾವವುಂಟಾಗಿತ್ತು ಎಂಬುದನ್ನು ಗ್ರಹಿಸಿಕೊಂಡು ಅಧ್ಯಯನವನ್ನು ಮುಂದುವರೆಸಿದ್ದೇನೆ.

ಅಧ್ಯಾಯ - ೨

# ದಲಿತ ವರ್ಗದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದುಕಿನ ಮೇಲೆ ಅಂಬೇಡ್ಕರ್ ಅವರ ಪ್ರಭಾವ

ಭಾರತೀಯ ಇತಿಹಾಸದಲ್ಲಿ ಅನೇಕ ರೀತಿಯ ಸಮಸ್ಯೆಗಳು, ಅಡೆತಡೆಗಳು ಅವುಗಳೊಂದಿಗೆ ಪರಿಹಾರಗಳು ಆಯಾ ಕಾಲಕ್ಕನುಗುಣವಾಗಿ ಬದಲಾಗುತ್ತಾ ಸಾಗುತ್ತಿವೆ. ಇವೆಲ್ಲವನ್ನು ಒಳಗೊಂಡಿರುವುದು ಸಮಾಜ. ಈ ಸಮಾಜವು ಬಗೆಹರಿಸಲಾಗದ ಹಲವು ಸಮಸ್ಯೆಗಳನ್ನು ಹೊತ್ತು ಸಾಗುತ್ತಿದೆ. ಅದರಲ್ಲಿನ ಎಲ್ಲವೂ ವ್ಯವಸ್ಥೆಯ ಚೌಕಟ್ಟಿನೊಳಗೆ ಕಾಣುತ್ತಿದೆ. ಈ ಎಲ್ಲಾ ಚಿತ್ರಣವನ್ನು ನೀಡುವುದು ಕನ್ನಡ ಸಾಹಿತ್ಯ ಪ್ರಕಾರ. ಅದರಲ್ಲಿ ಮುಖ್ಯವಾಗಿರುವುದು ಆತ್ಮಕಥೆ. ಬದುಕಿನ ಹಲವು ಮುಖಗಳ ಪರಿಚಯವನ್ನು ಆತ್ಮಕಥೆಗಳು ಮಾಡಿಕೊಡುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ದಲಿತರ ಶೋಷಿತರ ಅನುಭವಗಳನ್ನು ಪರಿಚಯಿಸುತ್ತದೆ. ದಲಿತರ ನೋವುಗಳಿಗೆ ದನಿಯಾದವರು ಅವರ ನೋವಿನ ಅನುಭವಗಳನ್ನು ಹೇಳಿಕೊಳ್ಳಲು ಅವರಲ್ಲಿ ಗಟ್ಟಿತನವನ್ನು ನೀಡಿದವರು ಅಂಬೇಡ್ಕರ್ ಅವರು. ಅಂಬೇಡ್ಕರ್ ಅವರ ಬದುಕಿನ ಎಲ್ಲಾ ಘಟನೆಗಳನ್ನು ಎಲ್ಲರಿಗಾಗಿ ಅವರು ಸ್ಪಂದಿಸಿದ ರೀತಿಯನ್ನು, ಕಾಳಜಿಯನ್ನು ಕಂಡ ಜನರು ಅವರನ್ನು ಅನುಸರಿಸಿ ಹೋರಾಟ ಮತ್ತು ಚಳುವಳಿಯಲ್ಲಿ ಭಾಗವಹಿಸಿದರು. ಬದುಕಿನುದ್ದಕ್ಕೂ ನಡೆದ ಘಟನೆಗಳನ್ನು ದಾಖಲಿಸಲು ಪ್ರಾರಂಭಿಸಿದರು. ಅವರೆಲ್ಲರ ಬದುಕಿನ ಸಂಘರ್ಷ ಮತ್ತು ಹೋರಾಟದ ದಾಖಲೆಯ ರೂಪವೇ ಆತ್ಮಕಥೆಗಳು.

ಪ್ರತಿಯೊಬ್ಬರು ಒಂದೊಂದು ರೀತಿಯಲ್ಲಿ ಸಾಧನೆಯ ಕಡೆಗೆ ಸಾಗುತ್ತಿರುತ್ತಾರೆ. ಅವರು ಕಂಡುಂಡ ಏಳು ಬೀಳುಗಳನ್ನು ದಾಟಿ ಗುರಿಯನ್ನು ತಲುಪುತ್ತಾರೆ. ತಾವು ತಮಗಾಗಿ ಕಟ್ಟಿಕೊಳ್ಳುವ ಬದುಕು ಹಾಗೂ ಸಮಾಜವನ್ನು ಕಟ್ಟುವಲ್ಲಿ ತಮ್ಮನ್ನು ತೊಡಗಿಸುವಿಕೆಯ ಶ್ರಮ ಎಲ್ಲವು ಆತ್ಮಕಥೆಗಳಲ್ಲಿ ದಾಖಲಾಗುತ್ತದೆ. ದಲಿತ ಬರಹಗಾರರು ಎಲ್ಲ ರೀತಿಯ ದಾಖಲೆ, ಬದುಕಿನ ರೀತಿ, ಅವರು ಎದುರಿಸುವ ಸವಾಲುಗಳು ಎಲ್ಲವೂ ಅಂಬೇಡ್ಕರ್ ಅವರ ವಿಚಾರಧಾರೆಯಿಂದಲೇ ಬಂದದ್ದು ಎಂಬುದು ಅಷ್ಟೇ ಮುಖ್ಯವಾದ ಹಾಗೂ ಮಹತ್ವದ ವಿಚಾರವಾಗಿದೆ.

ಅಂಬೇಡ್ಕರ್ ಅವರ ಚಿಂತನೆಯನ್ನು ಅಧ್ಯಯನ ಮಾಡುವಾಗ ಕಂಡುಬರುವ ಅಂಶಗಳೆಂದರೆ. ಭಾರತೀಯ ಸಮಾಜದ ಕ್ರೂರ ವ್ಯವಸ್ಥೆಯ ಚಿತ್ರಣ. ಭಾರತದ ಬಹುಮುಖ್ಯ ಹಿಂದುಳಿದ ವರ್ಗಗಳ ಆಯೋಗವೆನಿಸಿಕೊಂಡಿರುವ ಮಂಡಲ ಆಯೋಗವು (೧೯೮೦) ಈ ಕುರಿತಂತೆ

"ಜಾತಿ ಪದ್ಧತಿಯು ಒಂದು ದೊಡ್ಡ ಮನೋನಿಯಂತ್ರಕವಾಗಿದೆ ಮತ್ತು ವ್ಯಕ್ತಿಯ ಸಾಮಾಜಿಕ ಪ್ರಜ್ಞೆಯ ಹಾಗೂ ಸಾಂಸ್ಕೃತಿಕ ಲಕ್ಷಣದ ಮೇಲೆ ಅಳಿಸಲಾಗದ ಗುರುತನ್ನು ಉಳಿಸುತ್ತದೆ"[1] ಎಂದು ಹೇಳುತ್ತದೆ. ಇದರ ವಾರಸುದಾರರು ಪುರೋಹಿತಶಾಹಿ ಶ್ರೀಮಂತ, ಜಮೀನ್ದಾರಿ ವರ್ಗವಾಗಿದೆ. ಸಮಾಜದ ಜನರನ್ನು ಹರಿದು ಹಂಚಿ ಅವರನ್ನೆಲ್ಲ ಪ್ರತ್ಯೇಕಗೊಳಿಸಿ ತಾವು ಹೇಳಿದಂತೆ ಕೇಳಿಕೊಂಡಿರಬೇಕು ಎಂಬ ನಿಯಮವನ್ನು ರೂಪಿಸಿದ್ದು ಪುರೋಹಿತಶಾಹಿ ವರ್ಗ. ತಮ್ಮ ಶ್ರೀಮಂತಿಕೆಯಲ್ಲಿ ಎಲ್ಲವನ್ನು ಹಾಗೂ ಎಲ್ಲರನ್ನು ಕೊಂಡುಕೊಂಡು ವಿಜೃಂಭಿಸಿದ್ದು ಶ್ರೀಮಂತವರ್ಗ. ಉಳಿದವರನ್ನೆಲ್ಲ ಶೋಷಿಸುತ್ತಾ, ತಮ್ಮ ಎಲ್ಲ ಕೆಲಸಕಾರ್ಯಗಳನ್ನು ಒತ್ತಾಯ ಪೂರ್ವಕವಾಗಿ ಮಾಡಿಸಿಕೊಂಡು ಬಂದವರು ಜಮೀನ್ದಾರಿಗಳು. ಹೀಗೆ ಎಲ್ಲರೂ ಒಂದೇ ವರ್ಗವನ್ನು ದೃಷ್ಟಿಯಲ್ಲಿರಿಸಿಕೊಂಡು ಅವರನ್ನು ಶತಮಾನಗಳ ಕಾಲ ಶೋಷಣೆಗೆ ಒಳಪಡಿಸಿದರು. ಇವರೆಲ್ಲರಿಂದ ನೊಂದ ಜನಾಂಗವೇ ಶೂದ್ರರು ಹಾಗೂ ಅಸ್ಪೃಶ್ಯರು.

ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ಜನವರ್ಗಗಳನ್ನು ವೃತ್ತಿಗನುಗುಣವಾಗಿ ವಿಭಾಗಿಸಲಾಯಿತು. ಅಂಬೇಡ್ಕರ್ ಅವರು ಹೇಳುವ ಹಾಗೆ. ಪುರುಷಸೂಕ್ತವು ಎಲ್ಲವನ್ನು ನಿರ್ಧರಿಸುತ್ತದೆ. ಇದರ ಪ್ರಕಾರ ಪುರುಷನ ತಲೆಯಿಂದ ಜನಿಸಿದವನು ಬ್ರಾಹ್ಮಣ. ಇವನು ವಿದ್ಯೆಯನ್ನು ಕಲಿಸುವ ಹಾಗೂ ದೇವರನ್ನು ಪೂಜಿಸುವ ಹಕ್ಕನ್ನು ಪಡೆದವನೆಂದು ಅವರು ಹೇಳಿದಂತೆ ಉಳಿದವರು ಕೇಳಿಕೊಂಡಿರಬೇಕು ಎಂಬ ನಿಯಮವಿದ್ದು ಅದರ ಪಾಲನೆಯನ್ನು ಎಲ್ಲರೂ ಮಾಡಬೇಕು. ಹಾಗೆಯೇ ಪುರುಷನ ಭುಜಗಳಿಂದ ಜನಿಸಿದವನು ಕ್ಷತ್ರಿಯ. ಆತ ಪ್ರಜೆಗಳನ್ನು ಪರಿಪಾಲಿಸುವ ಹಾಗೂ ರಕ್ಷಿಸುವ ಕಾರ್ಯವನ್ನು ಮಾಡಬೇಕು. ಪುರುಷನ ತೊಡೆಗಳಿಂದ ಜನಿಸಿದವನು. ವೈಶ್ಯ, ವ್ಯಾಪಾರ, ವ್ಯವಹಾರಗಳನ್ನು ನೋಡಿಕೊಳ್ಳಬೇಕು. ಪಾದಗಳಿಂದ ಜನಿಸಿದವನು ಶೂದ್ರ. ಅವನು ಮೇಲಿನ ಮೂರು ವರ್ಗಗಳ ಸೇವೆಯನ್ನು ಮಾಡಿಕೊಂಡಿರಬೇಕು ಎಂಬುದಾಗಿ ನಿಯಮಗಳನ್ನು ರೂಪಿಸಿದ್ದರು. ಆದರೆ ಮತ್ತೊಂದು ವರ್ಗವಿದ್ದು ಅವರನ್ನು ಪಂಚಮರು, ಅಸ್ಪೃಶ್ಯರು, ಶೂದ್ರಾತಿಶೂದ್ರರು ಎಂದು ಕರೆಯಲಾಯಿತು. ಇವರು ಶೂದ್ರರಿಗಿಂತ ಕನಿಷ್ಠವಾದ ಕೆಲಸಗಳನ್ನು ಮಾಡಿಕೊಂಡಿದ್ದರು. ಇವರನ್ನು ನೋಡಿದರೆ ಮುಟ್ಟಿದರೆ, ನೆರಳು ಸೋಕಿದರೆ ಮೈಲಿಗೆಯಾಗುತ್ತದೆ ಎಂದು ಅವರನ್ನು ಪ್ರತ್ಯೇಕಗೊಳಿಸಿ ಊರನ್ನು ಸ್ವಚ್ಛಗೊಳಿಸುವ, ಮಲ ಹೊತ್ತೊಯ್ಯುವ, ಸತ್ತ ಪ್ರಾಣಿಗಳನ್ನು ಎಳೆದೊಯ್ಯುವ, ಯಾರಾದರೂ ಸಾವನ್ನಪ್ಪಿದರೆ ಆ ಸುದ್ದಿಯನ್ನು ಅವರ ಸಂಬಂಧಿಕರಿಗೆ ಮುಟ್ಟಿಸುವ ಕೆಲಸವನ್ನು ಮಾಡಿಕೊಂಡಿರಬೇಕು. ಅಸ್ಪೃಶ್ಯರು ಊರಿನ ಮುಖ್ಯಬೀದಿಗಳಲ್ಲಿ ನಡೆದಾಡುವಂತಿರಲಿಲ್ಲ. ಅವರು ನಡೆದಾಡಬೇಕೆಂದರೆ ಅವರು ತಮ್ಮ ಬೆನ್ನಿಗೆ ಒಂದು ಪೊರಕೆಯನ್ನು ಕಟ್ಟಿಕೊಂಡು, ಮುಂಭಾಗಕ್ಕೆ ಒಂದು ಮಡಕೆಯನ್ನು ನೇತು ಹಾಕಿಕೊಂಡು ಕೈಯಲ್ಲಿ ಒಂದು ಸಂಬಳಿಗೋಲನ್ನು ಹಿಡಿದು, ಅವರು ದಾರಿಯಲ್ಲಿ ನಡೆದು ಬರುವಾಗ ಆ ಕೋಲನ್ನು ನೆಲಕ್ಕೆ ಕುಟ್ಟುತ್ತಾ 'ಸಂಬಳಿ' ಎಂದು ಕೂಗುತ್ತಾ ಬರಬೇಕಾಗಿತ್ತು. ಅವರು ನಡೆದ ಹೆಜ್ಜೆಯ ಗುರುತು ಕಾಣಬಾರದು. ಅವರ ಹೆಜ್ಜೆಯನ್ನು ತುಳಿದವರಿಗೆ ಅದರಿಂದ ಮೈಲಿಗೆ ಯುಂಟಾಗುತ್ತದೆ ಎಂದು ಬೆನ್ನಿಗೆ ಪೊರಕೆಯನ್ನು ಕಟ್ಟಿಕೊಳ್ಳುತ್ತಿದ್ದರು. ಅದರಿಂದ ಅವರು ನಡೆದು

ಹೋದ ಹೆಜ್ಜೆಯ ಗುರುತನ್ನು ಪೊರಕೆ ಅಳಿಸಿ ಹಾಕುತ್ತಿತ್ತು. ತಮ್ಮ ಕೊರಳಿಗೆ ಕಟ್ಟಿಕೊಂಡ ಮಡಕೆಯಲ್ಲಿಯೇ ಅವರು ತಮ್ಮ ಎಂಜಲನ್ನು ಉಗಿಯಬೇಕು. ರಸ್ತೆಯಲ್ಲಿ ನಡೆದಾಡುವಾಗ ಎಲ್ಲೆಂದರಲ್ಲಿ ಉಗಿಯಬಾರದು ಎಂಬ ನಿಯಮವಿತ್ತು. ಇದನ್ನು ಅಸ್ಪೃಶ್ಯರು ಪಾಲಿಸುತ್ತಿದ್ದರು. ಊರಿನ ಕೆರೆ ಬಾವಿಗಳಿಂದ ನೀರನ್ನು ತಾವಾಗಿಯೇ ತೆಗೆದುಕೊಳ್ಳುವ ಅವಕಾಶವಿರಲಿಲ್ಲ. ಅವರು ಕೆರೆ ಬಾವಿಗಳಿಂದ ನೀರನ್ನು ಪಡೆಯಲು ದೂರದಲ್ಲಿ ಕುಳಿತು ಕಾಯುತ್ತಿದ್ದರು. ಯಾರಾದರೂ ಕರುಣೆ ಬಂದರೆ ತಮ್ಮ ಕೊಡಗಳಿಂದ ನೀರನ್ನು ತಂದು ಅಸ್ಪೃಶ್ಯರ ಕೊಡಗಳಿಗೆ ಮೇಲಿನಿಂದ ಸುರಿಯುತ್ತಿದ್ದರು. ಈ ರೀತಿ ನೀರು ಹಾಕುವವರೆಗೆ ಅಸ್ಪೃಶ್ಯರು ಕಾಯಬೇಕಿತ್ತು. ಊರಿನ ದೇವಾಲಯಗಳಿಗೆ ಪ್ರವೇಶವಿರಲಿಲ್ಲ. ಮೇಲ್ವರ್ಗದ ಮನೆಯವರ ಬಳಿ ಹೋಗುವಂತೆಯೂ ಇರಲಿಲ್ಲ. ಏನಿದ್ದರೂ ಮನೆಯ ಹಿಂಬಾಗದ ಬಾಗಿಲಿನಿಂದ ಸ್ವಲ್ಪದೂರದಲ್ಲಿ ನಿಂತಿರಬೇಕು. ತಾವು ಕೆಲಸ ಮಾಡಿದ ಕೂಲಿ ಪಡೆಯಲು ಸಹ ಅವರು ಅಲ್ಲಿಯೇ ನಿಂತಿರುತ್ತಿದ್ದರು. ಮೇಲ್ವರ್ಗದ ಮನೆಯ ಆಳು ಇವರಿಗೆ ಕೂಲಿಯ ಹಣವನ್ನು, ದವಸಧಾನ್ಯಗಳನ್ನು ನೀಡುತ್ತಿದ್ದನು. ಅವನು ಸಹ ಅವರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅಂಬೇಡ್ಕರ್ ಅವರು ಹೇಳುವ ಹಾಗೆ ಮೇಲ್ವರ್ಗದವರ ಮನೆಗಳಲ್ಲಿ ನಾಯಿ ಬೆಕ್ಕುಗಳು ಮನೆಯ ಅಂಗಳದಲ್ಲಿ ಓಡಾಡಬಹುದು. ಆದರೆ ಅಸ್ಪೃಶ್ಯರಿಗೆ ಮನೆಯ ಮುಂಭಾಗಕ್ಕೂ ಬಂದು ನಿಲ್ಲುವ ಅವಕಾಶವಿರಲಿಲ್ಲ. ಅವರ ಮನೆಯ ಪ್ರಾಣಿಗಳಿಗಿಂತಲೂ ಕಡೆಯಾಗಿ ಬದುಕಿದ್ದರು. ದುಡಿಯಲು ಭೂಮಿಯಿಲ್ಲದೆ, ಭೂಹೀನರಾಗಿ ಜಮೀನ್ದಾರರ ಭೂಮಿಗಳಲ್ಲಿ ದುಡಿಯುತ್ತಾ ಬದುಕಿದ್ದರು. ಅವರು ದುಡಿದ ದುಡಿಮೆಗೆ ಪ್ರತಿಫಲವಾಗಿ ಏನನ್ನು ಕೊಡುತ್ತಾರೋ ಅದನ್ನು ಮೌನವಾಗಿ ಸ್ವೀಕರಿಸಬೇಕು. ಪ್ರಶ್ನಿಸುವಂತಿಲ್ಲದ ಸ್ಥಿತಿಯಲ್ಲಿದ್ದರು. 'ಶ್ರೀಮಂತರ ಸಿರಿತನ ದರಿದ್ರರ ಬಡತನದಲ್ಲಿದೆ.'[2] ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲ ಒಂದಾಗಬೇಕು.

ಅತ್ಯಂತ ಹೀನಾಯವಾದ ಸ್ಥಿತಿಯಲ್ಲಿ ಅಸ್ಪೃಶ್ಯರು ಬದುಕಿದ್ದರು. ಉಳಿದ ಯಾವ ವರ್ಗಗಳಿಗೂ ಇರದ ನಿಯಮ ನಿಷೇಧಗಳೆಲ್ಲವು ಅಸ್ಪೃಶ್ಯರಿಗೆ ಮಾತ್ರವೇ ಇದ್ದವು. ಉತ್ತಮವಾದ ವಸ್ತ್ರ, ಚಿನ್ನದ ಒಡವೆಗಳನ್ನು ಧರಿಸುವಂತಿರಲಿಲ್ಲ. ಯಾವ ಪ್ರಾಣಿಗಳನ್ನು ಸಾಕುವಂತಿರಲಿಲ್ಲ, ವಿದ್ಯೆ ಕಲಿಯುವ ಅವಕಾಶವಿರಲಿಲ್ಲ. ಊರಿನವರ ಕೆಲಸ ಮಾಡಿಕೊಂಡಿದ್ದರು. ಅಸ್ಪೃಶ್ಯರ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಖಂಡಿಸುವ ಅಂಬೇಡ್ಕರ್ ಅವರು ಹಿಂದೂ ಸಮಾಜದಲ್ಲಿ ಎಲ್ಲರೂ ವೈಯಕ್ತಿಕವಾಗಿ ಸಾಮರ್ಥ್ಯ ಹಾಗೂ ಗುಣಸ್ವಭಾವಗಳಲ್ಲಿ ಆಗಾಧವಾದ ವ್ಯತ್ಯಾಸವನ್ನು, ಶಕ್ತಿಯನ್ನು ಹೊಂದಿದ್ದರು. ಎಲ್ಲರೂ ಸಮಾನವಾದ ಗೌರವಕ್ಕೆ ಅರ್ಹರಾಗಿದ್ದರು.

ದಲಿತರ ಶಕ್ತಿ ಸಾಮರ್ಥ್ಯಗಳು. ಅಧಿಕವಾಗಿರಲಿ ಅಥವಾ ಇಲ್ಲದಿರಲಿ ಅದರ ಬಗೆಗೆ ಯಾರೂ ಚಿಂತಿಸುವುದಿಲ್ಲ. ಅವರಿಗಿರುವ ಆಲೋಚನೆಗಳೆಂದರೆ ಹಿಂದಿನಿಂದ ನಡೆದು ಬಂದ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವುದು ಅದರಂತೆ ಎಲ್ಲರೂ ನಡೆದುಕೊಳ್ಳುವಂತೆ ಮಾಡುವುದಷ್ಟೇ ಅವರ ಆಲೋಚನಾ ಕ್ರಮವಾಗಿತ್ತು. ಹಿಂದೂ ಧರ್ಮದ ವ್ಯವಸ್ಥೆ ಮನುಷ್ಯನ ಹುಟ್ಟಿಗೆ ಹೆಚ್ಚು ಬೆಲೆ ನೀಡುತ್ತದೆ. ಆದರೆ ಮನುಷ್ಯನ ವ್ಯಕ್ತಿತ್ವ ಮತ್ತು ಅರ್ಹತೆಗೆ ಯಾವ ಮಹತ್ವವಿಲ್ಲ. 'ಮನುಷ್ಯನಿಗಾಗಿ ಧರ್ಮವಿದೆ, ಧರ್ಮಕ್ಕೋಸ್ಕರ ಮನುಷ್ಯನಿಲ್ಲ'[3]ವೆಂದು ಅಂಬೇಡ್ಕರ್ ಹೇಳುತ್ತಾರೆ. ಹಿಂದೂ ಸಾಮಾಜಿಕ

ವ್ಯವಸ್ಥೆ ಎಲ್ಲಾ ರೀತಿಯಿಂದಲೂ ಮನುಷ್ಯರನ್ನು ಪ್ರತ್ಯೇಕವಾಗಿಸುವ ಜನರ ನಡುವೆ ಹೆಚ್ಚಿನ ಅಂತರವನ್ನುಂಟುಮಾಡುವ ರೀತಿಯಲ್ಲಿ ಆಲೋಚಿಸುತ್ತದೆ. ಸಮಾಜದಲ್ಲಿ ಮನುಷ್ಯರೆಲ್ಲರೂ ಒಂದೇ ಎಂಬ ಭಾವನೆ ಯಾರಲ್ಲಿಯೂ ಇರಲಿಲ್ಲವೆಂಬುದು ಅಂಬೇಡ್ಕರ್ ಅವರ ಮಾತಿನ ಅರ್ಥವಾಗಿತ್ತು. ವೃತ್ತಿಗನುಗುಣವಾಗಿ ಜನರನ್ನು ವಿಭಾಗಿಸುವುದು, ಧರ್ಮದಿಂದಾಗಿ ಜನರನ್ನು ಪ್ರತ್ಯೇಕವಾಗಿಸಿರುವುದು ಲಿಂಗತಾರತಮ್ಯದಿಂದ ಕಾಣುವುದು. ವರ್ಗಗಳಿಂದಾಗಿ ವಿಭಾಗಿಸಲ್ಪಟ್ಟಿರುವುದಲ್ಲದೆ ಅದಕ್ಕಿಂತ ಮಿಗಿಲಾಗಿ ಜನರಲ್ಲಿನ ವಿಶ್ವಾಸ ನಂಬದೇ ಇರುವಂಥಹ ಸ್ಥಿತಿಯೂ ಕಂಡುಬರುತ್ತದೆ. ಮನುಷ್ಯ ಸಂಬಂಧಗಳ ಮಹತ್ವವಿಲ್ಲದೆ, ಒಬ್ಬರನ್ನು ಒಬ್ಬರು ಗೌರವರಿಂದ ಕಾಣುವ, ಪ್ರತಿಯೊಬ್ಬರು ಮನುಷ್ಯರೇ ಎಲ್ಲರನ್ನು ಪ್ರೀತಿ ಕರುಣೆಯಿಂದ ಕಾಣಬೇಕೆಂಬ ಬುದ್ಧನ ತತ್ವ ಸಿದ್ಧಾಂತಗಳನ್ನು ಅರ್ಥ ಮಾಡಿಸಲು ಅಂಬೇಡ್ಕರ್ ಅವರು ಪ್ರಯತ್ನಿಸಿದರು. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು ಎಂಬ ಮನೋಭಾವ ಮೂಡಬೇಕು; ಈ ವಿಚಾರವನ್ನು ಮೂಡಿಸುವ ನಿಟ್ಟಿನಲ್ಲಿ ಅವರ ಹೋರಾಟ ಸಾಗುತ್ತಿತ್ತು. ಹಿಂದೂ ಸಮಾಜದ ವ್ಯವಸ್ಥೆಯೂ ಶ್ರೇಣೀಕೃತವಾಗಿದ್ದು, ಮೇಲು–ಕೀಳು ಎಂಬ, ವರ್ಗ ಹಾಗೂ ವೃತ್ತಿಗೆ ಅನುಗುಣವಾದ ಅಂಶಗಳು ಹೆಚ್ಚಾಗಿಯೇ ಇದ್ದವು. ಈ ಕ್ರಮವನ್ನು ನಿಯಮದ ರೀತಿ ಎಲ್ಲರೂ ಪಾಲಿಸಲೇಬೇಕಾಗಿತ್ತು. ಇವುಗಳನ್ನು ಅಂಬೇಡ್ಕರ್ ಅವರು ಪ್ರಶ್ನಿಸುತ್ತಾ ಹೋಗುತ್ತಾರೆ. ಈ ಎಲ್ಲಾ ಕಾರಣಗಳಿಗೆ ಪರಿಹಾರವನ್ನು ಹುಡುಕುತ್ತಾರೆ. ಸಮಾಜದ ಈ ವ್ಯವಸ್ಥೆಗೆ ಕಾರಣಗಳೇನು? ಅಸ್ಪೃಶ್ಯರ ಸಮಸ್ಯೆಗಳಿಗೆ ಕಾರಣ? ಹಿಂದೂ ಸಮಾಜದಲ್ಲಿ ಅಸ್ಪೃಶ್ಯರು ಮಾತ್ರವೇ ಯಾಕೆ ಶೋಷಣೆಗೆ ಒಳಗಾದರು? ಮಹಿಳೆಯರಿಂದ ಹಿಡಿದು ಎಲ್ಲರ ಮೇಲೆ ನಡೆದ ಹಿಂಸೆಗೆ ಕಾರಣಗಳೇನು? ಎಲ್ಲಾ ರೀತಿಯ ಸಮಸ್ಯೆಗಳನ್ನು ವ್ಯವಸ್ಥ ಇವರಿಗೆ ಏಕೆ ನೀಡಿದೆ? ಎಂಬಂತಹ ಪ್ರಶ್ನೆಗಳನ್ನು ಹಾಕಿಕೊಂಡು ಅವುಗಳಿಗೆ ಕಾರಣವನ್ನು ಹಾಗೂ ಪರಿಹಾರವನ್ನು ಹುಡುಕುತ್ತಾ ಹೋದರು. ಇದರಿಂದಾಗಿಯೇ ಅವರು ಬರವಣಿಗೆಯನ್ನು ತೀವ್ರಗೊಳಿಸಿದರು; ಪತ್ರಿಕೆಗಳನ್ನು ಪ್ರಾರಂಭಿಸಿದರು. ಬಹಿಷ್ಕೃತ ಭಾರತ, ಸಮತಾ, ಜನತಾ, ಮೂಕನಾಯಕ ಪತ್ರಿಕೆಗಳನ್ನು ಪ್ರಾರಂಭಿಸಿ ಹಿಂದೂ ಧರ್ಮದ ವ್ಯವಸ್ಥೆಯ ಚಿತ್ರಣವನ್ನು ಹಾಗೂ ಅದಕ್ಕೆ ಕಾರಣವನ್ನು, ಅಸ್ಪೃಶ್ಯರು ಬದುಕುತ್ತಿರುವ ಪರಿಸ್ಥಿತಿಯನ್ನು ಕುರಿತು ವಿವರಿಸಿದ್ದರು. ಅಸ್ಪೃಶ್ಯರು ಇಂದಿಗೂ ಅದೇ ಸ್ಥಿತಿಯಲ್ಲಿದ್ದಾರೆ. ನಿಮ್ಮೆಲ್ಲರ ಸ್ಥಿತಿಗಳು ಏಕೆ ಹೀಗೆ ಇವೆ? ನಿಮಗೆ ಸಿಗಬೇಕಾದ ಸವಲತ್ತುಗಳು ಯಾವುವು? ನೀವೆಲ್ಲರೂ ಯಾವುದರಿಂದ ವಂಚಿತರಾಗಿದ್ದೀರಿ? ನಿಮಗೆ ದೊರೆಯಬೇಕಾದ ಅವಕಾಶಗಳನ್ನು ಪಡೆಯಲು ನೀವು ಏನು ಮಾಡಬೇಕು? ಎಂಬಂತೆ ಪ್ರಶ್ನೆಗಳನ್ನು ಮಾಡುತ್ತಾ ಅವುಗಳಿಗೆ ಸರಿಯಾದ ಪರಿಹಾರವನ್ನು ಉತ್ತರದ ರೂಪದಲ್ಲಿ ಹೇಳುತ್ತಿದ್ದರು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶೂದ್ರರು ಹಾಗೂ ಅಸ್ಪೃಶ್ಯರು ಇಬ್ಬರೂ ಶೋಷಿತರೇ, ಆದರೆ ಅಸ್ಪೃಶ್ಯರು ಹೆಚ್ಚಿನ ಪ್ರಮಾಣದಲ್ಲಿ ಶೋಷಣೆಗೆ ಒಳಗಾಗಿರುವುದನ್ನು ಅಂಬೇಡ್ಕರ್ ಅವರು ಗುರುತಿಸುತ್ತಾರೆ. ಅದಕ್ಕೆ ಕಾರಣಗಳನ್ನು ವಿವರಿಸುತ್ತಾರೆ. ಆದರೆ ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶೋಷಿತ ಸಮುದಾಯಗಳೆಲ್ಲವು ಒಂದೇ ಅದಕ್ಕೆ ಯಾವ ಜಾತಿ ಬೇಧಭಾವಗಳು ಇಲ್ಲ. ಎಲ್ಲ ಜಾತಿ ಧರ್ಮಗಳಲ್ಲಿರುವ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಯಾರಿದ್ದರು ಅವರನ್ನೆಲ್ಲಾ ಒಂದು ವರ್ಗವೆಂದು, ಅವರನ್ನು

ದಲಿತರು ಎಂದು ಕರೆದರು. ಅಸ್ಪೃಶ್ಯ ಸಮುದಾಯವನ್ನು ಕುರಿತು ಮಾತ್ರವೇ ದಲಿತರು ಎಂದು ಕರೆಯಲಿಲ್ಲ. ಶೋಷಣೆ, ಹಿಂಸೆ, ನೋವುಗಳಿಗೆ ಒಳಗಾದವರೆಲ್ಲರೂ ದಲಿತರು ಎಂಬ ಭಾವನೆ ಅವರಲ್ಲಿತ್ತು. ಮುಂದುವರೆದು ಅಸ್ಪೃಶ್ಯರನ್ನು ಮಾತ್ರವೇ ದೃಷ್ಟಿಯಲ್ಲಿಟ್ಟುಕೊಂಡಿದ್ದರು ಎಂಬುದು ಬಹುಪಾಲು ಜನರ ತಪ್ಪು ಆಲೋಚನೆ. ಎಲ್ಲಾ ಜಾತಿಯಲ್ಲಿನ ಬಡವರು ಅಂಬೇಡ್ಕರ್ ಅವರ ಚಿಂತನೆಯಲ್ಲಿದ್ದರು. ಸಾಮಾಜಿಕ ಚಿಂತನೆಯಲ್ಲಿ ಪ್ರತಿಯೊಬ್ಬರೂ ಮುಖ್ಯವಾಗಿದ್ದರಿಂದ ಅವರೆಲ್ಲರನ್ನು ಒಂದೇ ರೀತಿ ಕಾಣುತ್ತಿದ್ದರು.

ಅವರ ಸಾಮಾಜಿಕವಾದ ಸ್ಥಾನಮಾನಗಳ ಚಿಂತನೆ ಮತ್ತು ಅದಕ್ಕೆ ಪೂರಕವಾದ ದಲಿತರ ಪರವಾದ ಹೋರಾಟಗಳಲ್ಲಿ ಚಳುವಳಿಯಲ್ಲಿ ಎಲ್ಲರೂ ಭಾಗವಹಿಸಲು ಕಾರಣವಾಯಿತು. ದಲಿತರನ್ನು ಅಂಬೇಡ್ಕರ್ ಅವರು ನಿಮ್ನ ವರ್ಗಗಳು ಎಂದು ಕರೆದರು.

ಬಾಬಾಸಾಹೇಬರ ದೃಷ್ಟಿಯಲ್ಲಿ ಹಿಂದೂ ಸಮಾಜದ ಸ್ವರೂಪಗಳನ್ನು ಹೀಗೆ ಗುರುತಿಸಬಹುದು. ಪ್ರಮುಖವಾಗಿ ಕಾಣುವ ಅಂಶಗಳೆಂದರೆ ಧರ್ಮ, ವರ್ಣಾಶ್ರಮ ಪದ್ಧತಿ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ. ಧರ್ಮ ಪ್ರತಿಯೊಬ್ಬನ ವ್ಯಕ್ತಿತ್ವವನ್ನು ಅವನ ಕ್ರಿಯಾಶೀಲತೆಯನ್ನು ಪರಿಚಯಿಸುತ್ತದೆ. ಪ್ರತಿಯೊಬ್ಬ ಮನುಷ್ಯನ ಬದುಕನ್ನು ಧರ್ಮವು ಅವಲಂಬಿಸಿರುತ್ತದೆ. ಹಿಂದೂ ಧಾರ್ಮಿಕ ವ್ಯವಸ್ಥೆಯಲ್ಲಿ ಧರ್ಮದ ಪಾತ್ರ ಮುಖ್ಯವಾಗಿರುತ್ತದೆ. ಜನ ಜೀವನದಲ್ಲಿ ಹಾಸು ಹೊಕ್ಕಾಗಿರುವ ರೂಢಿ ಸಂಪ್ರದಾಯ, ಆಚರಣೆಗಳು, ನಂಬಿಕೆಗಳು ಧರ್ಮದ ಚೌಕಟ್ಟಿನಲ್ಲಿರುತ್ತವೆ. ಇವುಗಳೆಲ್ಲವು ಎಲ್ಲರಿಗೂ ಅನ್ವಯವಾಗುತ್ತಿದ್ದರೂ ಪಾಲಿಸಿಕೊಂಡು ಬರುವವರು ಮಾತ್ರ ಮೇಲ್ವರ್ಗದವರು. ಇವುಗಳ ಬಗೆಗೆ ಭಯಭೀತರಾಗಿ ವರ್ತಿಸುತ್ತಾ ಬದುಕುವವರು ಮಾತ್ರ ತಳಸಮುದಾಯದವರಾಗಿದ್ದಾರೆ. ಅಂತೆಯೇ ಹಿಂದೂ ಧರ್ಮದ ಒಂದೊಂದು ಸಮುದಾಯವು ಒಬ್ಬೊಬ್ಬ ಗುರುಗಳನ್ನು ಹೊಂದಿದ್ದಾರೆ. ಆದರೆ ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳಲ್ಲಿ ಒಬ್ಬ ಧರ್ಮಗುರುಗಳಿದ್ದಾರೆ. ಆದರೆ ಹಿಂದೂ ಧರ್ಮ ಜಾತಿಗೆ ಅನುಗುಣವಾಗಿ ಧರ್ಮ ಗುರುಗಳನ್ನು ಹೊಂದಿರುವುದನ್ನು ಕಾಣಬಹುದು. ಆದರೆ ಅಂಬೇಡ್ಕರ್ ಅವರು ಹೇಳುವ ಹಾಗೆ ತಮಗಿಷ್ಟ ಬಂದ ಹಾಗೆ ಎಲ್ಲವನ್ನು ಸೃಷ್ಟಿಸಿಕೊಂಡವರು ಮೇಲ್ವರ್ಗಕ್ಕೆ ಸೇರಿದವರಾಗಿದ್ದಾರೆ.

ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣಾಶ್ರಮ ಪದ್ಧತಿಯು ಮುಖ್ಯವಾಗಿದೆ. ಮುಖ್ಯವಾಗಿ ನಾಲ್ಕುವರ್ಣಗಳಿದ್ದು ಅವರನ್ನು ವೃತ್ತಿಗನುಗುಣವಾಗಿ ವಿಭಾಗಿಸಲಾಗಿತ್ತು. ಆದರೆ ಐದನೆ ವರ್ಣವಾದ ಪಂಚಮರ ಬಗೆಗೆ ಪ್ರಸ್ತಾಪವನ್ನೇ ಎತ್ತುವುದಿಲ್ಲ. ಅವರು ಅಸ್ಪೃಶ್ಯರು, ಅವರ್ಣೀಯರು ಆಗಿದ್ದು ಅವರನ್ನು ವೃತ್ತಿಯಿಂದಲೂ ಗುರುತಿಸದ ರೀತಿಯಲ್ಲಿ ಅಸಮಾನತೆಯಿಂದ ಬದುಕುತ್ತಿದ್ದರು. ಅಸ್ಪೃಶ್ಯರ ಬದುಕಿಗೆ ಯಾವುದೇ ಭದ್ರತೆಗಳೆಂಬುದಿರಲಿಲ್ಲ. ವರ್ಣಾಶ್ರಮ ಪದ್ದತಿಯು ಅಸ್ಪೃಶ್ಯರನ್ನು ವೃತ್ತಿಯಿಂದಾಗಲೀ ವ್ಯಕ್ತಿಯಿಂದಾಗಲೀ ಗುರುತಿಸುತ್ತಿರಲಿಲ್ಲ. ಮನುಸ್ಮೃತಿಯು ವರ್ಣಾಶ್ರಮ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಿ ಪ್ರಥಮ ವರ್ಣವಾದ ಬ್ರಾಹ್ಮಣರಿಗೆ ಮಾತ್ರವೇ ಎಲ್ಲಾ ರೀತಿಯ ಒಡೆತನದ ಹಕ್ಕನ್ನು ನೀಡಿದೆ. ಅವರಿಗೆ ಮಾತ್ರ ಎಲ್ಲಾ ಅಧಿಕಾರಗಳು ಸೇರಿದ್ದವು. ಅವರು ಹೇಳುವುದನ್ನು ಉಳಿದ ಮೂರು ವರ್ಣಗಳವರು ಕೇಳಬೇಕು. ಚಾತುವರ್ಣ ವರ್ಣ

ಪದ್ಧತಿಯನ್ನು ದೈವಿಕ ನಿಯಮವೆಂದು ಅದನ್ನು ಕಟ್ಟುನಿಟ್ಟಿನ ನಿಯಮದ ರೀತಿ ಪಾಲಿಸುವಂತೆ ಮಾಡಿದ್ದರು.

ಆತ್ಮಕಥೆಗಳು ಪ್ರಮುಖವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಮಹತ್ವವನ್ನು ಹೇಳುತ್ತವೆ. 'ಸಾಂಸ್ಕೃತಿಕ ಒತ್ತಡದ ಭಾಗವಾಗಿ ಆತ್ಮಕಥೆಗಳನ್ನು ಅಧ್ಯಯನ ಮಾಡಬೇಕಾಗಿದೆ. ಆತ್ಮಕಥೆಗಳು ಮಾಹಿತಿಯ ದೃಷ್ಟಿಯಿಂದ ಬರೆದವರ ವೈಯಕ್ತಿಕ ಚರಿತ್ರೆಗಳು. ಆದರೆ ಇದು ಇಲ್ಲಿಗೇ ನಿಲ್ಲದೆ ನಿರೂಪಣೆಯ ಸೈದ್ಧಾಂತಿಕ ಕ್ರಮದಿಂದಾಗಿ ಅವು ಸಾಮಾಜಿಕ ಚರಿತ್ರೆಯ ಭಾಗಗಳೂ ಹೌದು"[4]

ಆತ್ಮಕಥೆ ಎಂದು ಕನ್ನಡದಲ್ಲಿ ಕರೆದರೂ "ಇತರ ಭಾರತೀಯ ಭಾಷೆಗಳಲ್ಲಿ ಆತ್ಮ ಜೀವನಿ, ಆತ್ಮಕಥಾ, ಆತ್ಮ ಚರಿತ್ರೆ, ಆತ್ಮ ವೃತ್ತ, ಜೆತ್‌ನಾಮ್, ಆತಮ್ ಕಥ್, ಎಂದು ಕರೆಯಲಾಗಿದ್ದು ಇದು ಇಂಗ್ಲೀಷಿನ Autobiography ಪದವಾಗಿದೆ. ಗ್ರೀಕ್ ಮೂಲದಿಂದ ಬಂದ cutos, self, bios, life ಮತ್ತು graphein, write, ಶಬ್ದಗಳ ಮಿಲನದಿಂದ self-life write ಅಂದರೆ "ತನ್ನನ್ನು ಕುರಿತು ಬರೆಯುವುದು" ಎಂದು ಬಳಕೆಯಲ್ಲಿದೆ.[5]

ಆತ್ಮಕಥೆ ಅನುಭವಗಳನ್ನು ಹಾಗೂ ನೆನಪುಗಳನ್ನು ಒಳಗೊಂಡಿದ್ದ ರಚನೆಯಾಗಿದೆ. ಸಾಮಾಜಿಕ ಬದುಕಿನೊಂದಿಗೆ ವೈಯಕ್ತಿಕ ಬದುಕಿನ ಚಿತ್ರಣಗಳನ್ನು ಕೊಡುತ್ತದೆ. ೧೮೦೯ ರಲ್ಲಿ ಆಕ್ಸ್‌ಫರ್ಡ್ ನಿಘಂಟಿನಲ್ಲಿ ಆಟೋಬಯೋಗ್ರಫಿ (Autobiography) ಪದವನ್ನು ಮೊದಲಿಗೆ ಬಳಸಲಾಯಿತು. ಪಾಶ್ಚಾತ್ಯರಲ್ಲಿ ಸೆಂಟ್ ಆಗಸ್ಟೀನ್ ೪ನೇ ಶತಮಾನದಲ್ಲಿ ಬರೆದ 'ಕನ್‌ಫೇಷನ್ಸ್' The confessions of saint Augustine ಮೊಟ್ಟ ಮೊದಲ ಪೂರ್ಣಪ್ರಮಾಣದ ಗಹನವಾದ ಮತ್ತು ಜಟಿಲವಾದ ಆಧ್ಯಾತ್ಮಿಕ ಆತ್ಮಚರಿತ್ರೆ. ಇದನ್ನು ಆತ್ಮಚರಿತ್ರೆಗಳ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ಎಂದು ಗುರುತಿಸಲಾಗಿದೆ. ಬೆಂಜಮಿನ್ ಫ್ರಾಂಕ್ಲಿನ್‌ನ The autobiography of Benjamin Franklin'ನ ಆತ್ಮಕಥೆಯು ಆತ್ಮಕಥೆಯ ಬರಹಗಳಲ್ಲಿಯೇ ಅದ್ವಿತಿಯವಾದದ್ದು ಎಂದು ಗುರುತಿಸಲ್ಪಟ್ಟಿದೆ".[6] ಆತ್ಮಕಥೆಗಳ ಪ್ರಕಾರವೇ ವಿಶಿಷ್ಟವಾಗಿವೆ. ಬದುಕಿನ ಘಟನೆಗಳನ್ನು ವ್ಯಕ್ತಿಯೊಬ್ಬ ಹೇಳುತ್ತಾ ಹೋಗುವುದನ್ನು ಇಲ್ಲಿ ಕಾಣಬಹುದು.

ಆತ್ಮಕಥೆಗಳಲ್ಲಿ ಜೀವನದ ಎಲ್ಲ ಅಂಶಗಳನ್ನು ಸ್ವಾರಸ್ಯವಾಗಿ ಹೇಳುವುದರಿಂದ ಅವುಗಳು ತಮ್ಮ ಮಹತ್ವವನ್ನು ಉಳಿಸಿಕೊಂಡಿವೆ. ಆತ್ಮಕಥೆಗಳು ವೈಯಕ್ತಿಕ ನೆಲೆಯೊಂದಿಗೆ ಸಮಾಜದೊಂದಿಗೆ ಸಮುದಾಯದೊಂದಿಗೆ ವಿಸ್ತರಿಸಿಕೊಳ್ಳುತ್ತವೆ. ಇಲ್ಲಿ ವ್ಯಕ್ತಿಗಳ ಅನುಭವಗಳಷ್ಟೇ ಇರದೆ ಸಮಾಜದ ಬಗೆಗಿನ ಕಾಳಜಿಯೂ ಕಂಡುಬರುತ್ತದೆ. ಅನುಭವದ ಘಟನೆಗಳನ್ನು ಹೇಳುವಾಗ ಅವುಗಳು ಆತ್ಮಕಥೆ ಬರೆಯುವವನ ಸುತ್ತಮುತ್ತಲು ನಡೆಯುತ್ತಿರುತ್ತವೆ. ಸಮಾಜ ಮತ್ತು ಸಮುದಾಯದ ಪ್ರಜ್ಞೆಯನ್ನು ಒಳಗೊಂಡು ಬರೆದ ಆತ್ಮಕಥೆಗಳು ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತವೆ. "ಸಿಗ್ಮಂಡ್ ಫ್ರಾಯ್ಡ್ ೧೯೨೫ ರಲ್ಲಿ 'ಆತ್ಮಚರಿತ್ರಾತ್ಮಕ ಅಧ್ಯಯನ' ಎಂಬ ಪುಸ್ತಕವನ್ನು ಬರೆದು ಅದರಲ್ಲಿ ತನ್ನ ಸ್ವಂತ ಜೀವನ ಕಥೆಯೇ ತನ್ನ 'ಮನೋವಿಶ್ಲೇಷಣ ಸಿದ್ಧಾಂತ'ಕ್ಕೆ ಸಾಮಗ್ರಿಯಾಗಿದೆ ಎಂದಿದ್ದಾರೆ. ಫ್ರಾಯ್ಡ್ ಹೇಳುವ ಹಾಗೆ ಜೀವನ ಚರಿತ್ರಾತ್ಮಕ ಮತ್ತು ಆತ್ಮಚರಿತ್ರಾತ್ಮಕ ಬರಹಗಳಲ್ಲಿ ಸುಳ್ಳುಗಳು,

ಗೌಪ್ಯಗಳು ಮತ್ತು ಮಿಥ್ಯಾಚಾರಗಳೆಂಬ ನೆರಳು ಸದಾ ಹಿಂಬಾಲಿಸುತ್ತಿದ್ದು ಆ ಅಂಶಗಳ ಮೂಲಕವೇ ನನ್ನ ಮನೋ ವಿಶ್ಲೇಷಣ ತತ್ವಗಳಿಗೆ ಸೈದ್ಧಾಂತಿಕ ಜಯ ಸಿಕ್ಕಿದೆ ಎಂದಿದ್ದಾರೆ. ಬಹುಶಃ ಈ ಕಾರಣದಿಂದ ಆತ್ಮಚರಿತ್ರೆ ಬರೆಯುವವರು 'ಆರಾಧನಾ ಮತ್ತು ಸ್ವಾರಾಧನಾ ಪ್ರವೃತ್ತಿ' ಗೆ ಜೋತುಬೀಳುವುದು ಸಹಜ"[7]

ಆತ್ಮಕಥೆಗಳನ್ನು ಕುರಿತು ಚಿಂತಕರು ಈ ರೀತಿ ವ್ಯಾಖ್ಯಾನಿಸುತ್ತಾರೆ. "ಕ್ವಾನಿರೋ ಕ್ರಿಸ್ಪ್ (Quentiro crisp) : "ಆತ್ಮಕಥೆ ಎನ್ನುವುದು ಅಂತ್ಯಧ್ಯಾಯ ರಹಿತ ಧಾರಾವಾಹಿ ರೂಪದ ಚರಮಗೀತೆ". ಇಟಾಲೊ ಕೆಲ್ವಿನೊ (Italo Calvino) : "ಆತ್ಮ ಚರಿತಾತ್ಮಕ ದತ್ತವು ಅದರಲ್ಲೂ ಸಾರ್ವಜನಿಕ ದಾಖಲೆಯಾಗುಳಿದಿರುವುದು ಒಬ್ಬನ ಅತ್ಯಂತ ಖಾಸಗೀ ವಿಚಾರವಾಗಿದ್ದು, ಅದನ್ನು ಮುಕ್ತವಾಗಿ ಪ್ರಚುರಪಡಿಸುವುದು ಮನೋವಿಶ್ಲೇಷಕನನ್ನು ಎದುರಿಸಿದಂತೆ".

**ಜಾರ್ಜ್ ಆರ್ವೆಲ್ (George orwell) :** "ಆತ್ಮ ಚರಿತ್ರೆಯೊಂದು ಸ್ವಲ್ಪವಾದರೂ ಅಪಕೀರ್ತಿಯನ್ನು ತೋರ್ಪಡಿಸುತ್ತಿದ್ದರೆ ಮಾತ್ರ ಅದನ್ನು ನಂಬಬಹುದು. ಯಾರ ಬದುಕನ್ನು ಒಳಹೊಕ್ಕು ನೋಡಿದಾಗ ಸೋಲುಗಳ ಸರಮಾಲೆಯೇ ಆಗಿರುವುದರಿಂದ ಯಾರೊಬ್ಬರೂ ತಮ್ಮ ಬದುಕಿನ ಬಗ್ಗೆ ಒಳ್ಳೆಯ ಮಾತನ್ನೇ ಹೇಳಿದ್ದರೆ ಅವರು ಬಹುಶಃ ಸುಳ್ಳು ನುಡಿಯುತ್ತಿರಬೇಕೆಂದು ಭಾವಿಸಬೇಕಾಗುತ್ತದೆ".

**ಜಾನ್ ಬರ್ಗರ್ (John Berger) :** "ಆತ್ಮಚರಿತ್ರೆ ಏಕಾಂಗಿತನದಿಂದ ಪ್ರಾರಂಭವಾಗುತ್ತದೆ. ಅದು ಒಂದು ಅನಾಥ ಸಾಹಿತ್ಯ ಪ್ರಕಾರವಾಗಿದೆ".[8]

**ಬಸವರಾಜ ಕಟ್ಟೀಮನಿ :** "ಆತ್ಮಕಥೆಯೆಂದರೆ ಜೀವನ ಚರಿತ್ರೆಯಲ್ಲ. ಕಥಾನಾಯಕನ ಜೀವನದ ಪ್ರಮುಖ ಘಟನೆಗಳು, ಅವನ ಸ್ಮೃತಿಯಲ್ಲಿ ಬಹುಕಾಲ ಉಳಿದ ಅನುಭವಗಳು ಅವನ ಬಾಲ್ಯ ಕಾಲ, ತಂದೆ ತಾಯಂದಿರು, ಅಣ್ಣ–ತಮ್ಮಂದಿರು, ಮಡದಿ ಮಕ್ಕಳು, ಗೆಳೆಯರು, ಪರಿಚಿತರು, ಅವನು ಓಡಾಡಿದ ಪ್ರದೇಶಗಳು, ಆಯಾಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಾತಾವರಣ, ಅದರಿಂದ ಕಥಾನಾಯಕನ ಮನಸ್ಸಿನ ಮೇಲಾದ ಪರಿಣಾಮ, ಅವನ ಸಾಹಿತ್ಯ ಕೃತಿಗಳ ಹಿನ್ನೆಲೆ, ಅವನ ಅಲೆದಾಟ, ತೊಳಲಾಟ, ಮಾನಸಿಕ ಸಂಕಟ ಹೀಗೆ ಇದೊಂದು ಮಹಾಕಾದಂಬರಿಯ ವಸ್ತುವೇ ಆಗಿದೆ."[9]

**ಗಾಂಧೀಜಿ :** "ನನ್ನ ಜೀವನದ ಘಟನೆಗಳನ್ನು ತಿಳಿಸಬೇಕೆಂಬುದು ನನ್ನ ಉದ್ದೇಶವಲ್ಲ. ಸತ್ಯದ ವಿಷಯದಲ್ಲಿ ನಾನು ಮಾಡಿದ ಅನೇಕ ಸಾಧನೆಗಳ ಕಥೆಯನ್ನು ಹೇಳಬೇಕೆಂಬುದು ಮಾತ್ರ ನನ್ನ ಆಶಯ. ನಾನು ಕೇವಲ ಸಿದ್ಧಾಂತಗಳನ್ನು ಅಥವಾ ತತ್ವಗಳನ್ನು ಚರ್ಚಿಸಲಿಚ್ಛೆಯುಳ್ಳವನಾಗಿದ್ದರೆ ಆತ್ಮಕಥೆ ಬರೆಯುವ ಪ್ರಯತ್ನ ಮಾಡುತ್ತಿರಲಿಲ್ಲ. ಆದರೆ ನಾನು ಅವುಗಳನ್ನು ಆಧಾರವಾಗಿಟ್ಟುಕೊಂಡು ನಡೆಸಿದ ಕಾರ್ಯಗಳ ಇತಿಹಾಸವನ್ನು ಬರೆಯುವವನಾಗಿದ್ದೇನೆ. ಈ ಕಾರಣದಿಂದಲೇ ಇದಕ್ಕೆ 'ಸತ್ಯ ಶೋಧನೆ' ಎಂದು ಹೆಸರಿಟ್ಟಿದ್ದೇನೆ."

**ಎ.ಎನ್. ಮೂರ್ತಿರಾಯ :** ನಾನು ಬರೆಯುತ್ತಿರುವುದು ಯಾವ ವರ್ಗದವನಾಗಿಯೂ ಅಲ್ಲ; ಜಾತಿಯವನಾಗಿಯೂ ಅಲ್ಲ ; ಕೇವಲ ಸಾಮಾನ್ಯ ಮಾನವನಾಗಿ, ಇದನ್ನು ಆತ್ಮಕಥೆ ಎಂದು ಕರೆಯಬಹುದು. ಆದರೂ ಇದರ ಮುಖ್ಯ ವಸ್ತು ನಾನು ಬದುಕಿನಲ್ಲಿ ಏನು ಮಾಡಿದೆ ಎಂಬುದಲ್ಲ; ಬದುಕು ನನ್ನ ಕಣ್ಣಿಗೆ ಹೇಗೆ ಕಂಡಿತು; ನನ್ನೆದುರಿಗೆ ಕಾಲದಿಂದ ಕಾಲಕ್ಕೆ ಪರಿಸ್ಥಿತಿ ಹೇಗೆ ಬದಲಾಯಿತು; ಸಂಪ್ರದಾಯವೂ ಪಾಶ್ಚಾತ್ಯ ಮಾದರಿಯ ವಿಧ್ಯಾಭ್ಯಾಸವೂ ನನ್ನ ಮೇಲೆ ಉಂಟು ಮಾಡಿದ ಪರಿಣಾಮವೇನು; ಬಂಧುಗಳು, ಮಿತ್ರರು ಗುರುಗಳು ನನ್ನ ಮೇಲೆ ಬೀರಿದ ಪ್ರಭಾವ– ಇವನ್ನೆಲ್ಲ ಕಾಣಿಸುವುದು ನನ್ನ ಮುಖ್ಯೋದ್ದೇಶ".[10]

**ಬೀ.ಚಿ. :** 'ನಾನೀ ಗ್ರಂಥವನ್ನು ಬರೆಯುತ್ತಿರುವುದು ಲೋಕಕ್ಕೆ ಒಂದು ಮಹೋಪಕಾರವನ್ನು ಮಾಡಲಿಕ್ಕಲ್ಲ. ಆಗಾಗ ತನ್ನ ತಲೆಯಲ್ಲೇಳುವ ಬಿರುಗಾಳಿ, ನನ್ನ ಹೃದಯದಲ್ಲಿ ಮೇಲಿಂದ ಮೇಲೆ ಸಂಭವಿಸುವ ವಿಪ್ಲವ, ನನ್ನ ಅಂತರಂಗದ ಗೊಣಗು, ಇವಕ್ಕೆಲ್ಲ ಶಾಂತಿ ಮಾಡಬೇಡವೇ ? ಆ ಪ್ರಯತ್ನದ ಫಲವೇ ಈ ಭಯಾಗ್ರಫಿ".

**ಶಿವರಾಮಕಾರಂತ :** "ತಂತಮ್ಮ ಮನಸ್ಸು ಹುಚ್ಚೆಂಬ ಅರಿವು ಎಲ್ಲ ಗಳಿಗೆಯಲ್ಲಿಯೂ ನಮಗೆ ಉಂಟಾಗುವುದಿಲ್ಲ. ಇನ್ನೊಬ್ಬರ ಹುಚ್ಚುತನ ಕಾಣಿಸುವಷ್ಟು ಸುಲಭವಾಗಿ ನಮ್ಮದೇ ಹುಚ್ಚುತನ ನಮಗೆ ಕಾಣಿಸುತ್ತದೆಯೇ? ಕಾಣಬೇಕೆಂಬ ಆಸೆ ನನಗಿದೆ. ನಾನಿರುವ ಸಮಾಜವನ್ನು ಬೇರೆಯಾಗಿ ನಿಂತು ನೋಡಿ ತಿಳಿಯಲೆತ್ನಿಸಿದಂತೆ, ನನ್ನ ಬಾಳನ್ನು ನೋಡಿ ತಿಳಿಯಬೇಕೆಂದಿದ್ದೇನೆ".

**ಅನುಪಮಾ ನಿರಂಜನ :** "ವೈದ್ಯೆಯಾಗಿ, ಸಾಹಿತಿಯಾಗಿ, ಪತ್ನಿಯಾಗಿ, ಮಾತೆಯಾಗಿ ನಾನು ಉಂಡ ಸಿಹಿಕಹಿಗಳು ನಾಲ್ಕು ಜನರ ಜೊತೆ ಹಂಚಿಕೊಂಡರೆ ನನ್ನ ಉಳಿದ ಬಾಳು ಸಹ್ಯವಾಗಬಹುದೇನೋ ಎಂದು ತೋರಿತು ಹಾಗೆ ಬರೆಯತೊಡಗಿದ್ದೆ. ನೆನಪು ಸಿಹಿ ಕಹಿ....... ಇದು ನನ್ನೊಬ್ಬಳ ಕಥೆಯಾಗುವುದಿಲ್ಲ. ನನ್ನ ಪೀಳಿಗೆಯ ಬರಹಗಾರ್ತಿಯರೆಲ್ಲರ ಕತೆಯಾಗಬಹುದು ಅನಿಸಿತು. ಮಹಿಳೆಯಾದ್ದರಿಂದ ನಮಗೆ ಅನೇಕ ಸಮಸ್ಯೆಗಳಿದ್ದವು. ತಾರತಮ್ಯವಿತ್ತು, ಅಪಮಾನಗಳಿದ್ದವು, ಅನಾನುಕೂಲತೆಗಳಿದ್ದವು, ನಿರ್ಲಕ್ಷ್ಯವಿತ್ತು, ಇವುಗಳ ಜೊತೆಯಲ್ಲಿ ಸೋಲು ಗೆಲುವುಗಳಿದ್ದವು, ದುಃಖ ಆನಂದಗಳಿದ್ದವು. ಇವನ್ನೆಲ್ಲಾ ದಾಟಿ ಬರಲು ಮತ್ತು ನಮ್ಮರಿವಿಲ್ಲದಂತೆಯೇ ಮುಂದಿನ ಪೀಳಿಗೆಗೆ ನೆಲ ಹದ ಮಾಡಲು ನಾವು ಅಗತ್ಯವಾದುದಕ್ಕಿಂತ ಹೆಚ್ಚು ಶ್ರಮಪಡಬೇಕಾಯಿತು. ಅಂತಹ ಸಾಂಸ್ಕೃತಿಕ ಹೋರಾಟಗಳ ಪ್ರಾಮಾಣಿಕ ದಾಖಲೆಯೇ ಬರಹಗಾರ್ತಿಯ ಬದುಕು."

**ಆಲೂರು ವೆಂಕಟರಾಯ :** "ತನ್ನ ಜೀವನವು ತನಗೆ ತಿಳಿದಂತೆ ಅನ್ಯರಿಗೆ ತಿಳಿಯುವುದು ಶಕ್ಯವಿಲ್ಲ. ಜೀವನವೆಂಬ ಗಡಿಯಾರದ ಹೊರಮುಳ್ಳುಗಳು ತಿರುಗುವುದನ್ನು ಮಾತ್ರ ಜನರು ಕಾಂಬರು. ನನ್ನ ಜೀವನ ಗಡಿಯಾರದೊಳಗಿನ ಒಳಯಂತ್ರಗಳ ತಿರುಗುವಿಕೆಯನ್ನು ನನ್ನ ಹೊರತು ಯಾರು ಹೇಳಬಲ್ಲರು. ತನ್ನ ಮೋರೆಯನ್ನು ಅನ್ಯರು ನೋಡಬಲ್ಲರು. ಒಳಎದೆಯನ್ನು ನೋಡಲಾರರು. ತಮ್ಮ ಚರಿತ್ರೆಯನ್ನು ಅನ್ಯರು ಬರೆಯುವುದರಲ್ಲಿ ಕೆಲವು ಗುಣಗಳಿದ್ದರೆ, ತಾನೇ ಬರೆಯುವುದರಲ್ಲಿಯೇ ಕೆಲವು ಗುಣಗಳಿವೆ. ಆದ ಕಾರಣ ನಾನು ನನ್ನ ಜೀವನದಲ್ಲಿ ಇಟ್ಟುಕೊಂಡಿರುವ

ಕೆಲವು ವಿಶಿಷ್ಟ ಹಾಗೂ ವಿಕ್ಷಿಪ್ತವಾಗಿ ತೋರುವ ತತ್ವಗಳನ್ನು ಅವುಗಳ ಸೂತ್ರಗಳನ್ನು ಹೇಳುವುದರಿಂದ ನನ್ನ ಜೀವನದ ಒಗಟು ಬಿಡಿಸುವುದಕ್ಕೂ ಸಹಾಯವಾಗಬಹುದೆಂದು ನನ್ನ ನಂಬುಗೆ."

**ದೇ.ಜ.ಗೌ** : "ನನ್ನನ್ನು ನಾನೇ ನೋಡಿಕೊಳ್ಳುವ ನನ್ನ ಬದುಕಿನ ಹೆಜ್ಜೆಗಳನ್ನು ಗುರುತಿಸುವ ಪ್ರಯತ್ನವೇ ಈ ಆತ್ಮಕಥೆ.

**ಅರವಿಂದ ಮಾಲಗತ್ತಿ** : "ಆತ್ಮಕಥೆ ಬರೆಯುವುದು ನನ್ನ ಚಿಕ್ಕ ವಯಸ್ಸಿಗೆ ಬೇಕೇ ಎನ್ನುವ ಪ್ರಶ್ನೆ ನನ್ನನ್ನು ಕಾಡಿದೆ. ಏಕೆಂದರೆ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆ ಬರೆಯುವುದು ಸಾಮಾನ್ಯವಾಗಿ ಕೂದಲು ನೆರೆತು ಅಲುಗಾಡುವಾಗ. ಅನುಭವಗಳನ್ನು ಹೇಳಿಕೊಳ್ಳಲು ಕೂದಲು ನೆರೆಯಬೇಕಾಗಿಲ್ಲ. ಬಾಯೊಳಗಿನ ಹಲ್ಲುಗಳು ಉದುರಬೇಕಿಲ್ಲ. ಬದುಕಿನ ವಾಸ್ತವ ಸಂಗತಿಗಳನ್ನು ಯಥಾವತ್ತಾಗಿ ಕೊಡುವುದು ಎಂದರೆ, ಬದುಕಿರುವಾಗಲೇ ಜನತೆಯ ಬಾಯಿಗೆ ಎಲೆ ಅಡಿಕೆಯಾಗುವುದು ಎಂದರ್ಥ.

**ತ.ಸು. ಶಾಮರಾಯರು** : "ಅರೆಸತ್ತ ನನ್ನ ನೆನಪುಗಳು ಹೆತ್ತಿರುವ ಅರೆಜೀವದ ಶಿಶುಗಳು".

**ಡಿ.ಆರ್. ನಾಗರಾಜ್** : "ದಲಿತ ಸಾಹಿತಿಗಳ ಆತ್ಮಕಥೆ ಓದುವುದು ಏಕಕಾಲಕ್ಕೆ ಆಸಕ್ತಿ ಮತ್ತು ಆತಂಕಗಳನ್ನು ಹುಟ್ಟಿಸುತ್ತದೆ. ಒಂದು ಹೊಸ ಅನುಭವ ಲೋಕವೊಂದರ ಶೋಧನೆ ಎಂಬ ಕಾರಣಕ್ಕೆ ಆಸಕ್ತಿ. ಸವರ್ಣೀಯ ಸಮಾಜದ ಹಿಂಸೆ ಆತ್ಮಕಥನದ ಸಾಹಿತ್ಯ ಕೃತಿಯೇ ಎದ್ದು ಕಾಣುತ್ತದೆ ಎಂಬ ಕಾರಣಕ್ಕೆ ಆತಂಕ. ಮಹಾರಾಷ್ಟ್ರೀಯ ಅಥವಾ ಕನ್ನಡದ ದಲಿತ ಲೇಖಕರ ಆತ್ಮಕಥನಗಳನ್ನು ಓದಿದಾಗ ಒಂದು 'ಬೋನ್ಸಾಯ್' ಮರವನ್ನು ಕಂಡ ಅನುಭವವಾಗುತ್ತದೆ. ಇಲ್ಲಿ ಒಂದು ಚಿಕ್ಕ ಆತ್ಮಕಥನದಲ್ಲಿ ಹಲವು ಕಾದಂಬರಿಗಳೇ ಸಂಕ್ಷಿಪ್ತೀಕರಣಕ್ಕೆ ಒಳಗಾಗಿರುತ್ತವೆ."[11]

**ಅ.ನ. ಕೃಷ್ಣರಾಯರು** : "ಆತ್ಮಕಥೆ ಎಂದರೆ ಒಂದು ಬಗೆಯ ಸ್ವಪ್ರತಿಷ್ಠಾ ಪ್ರಚಾರ ಎಂದು ಕೆಲವರ ಅಭಿಪ್ರಾಯ. ಬೆಂಜಮಿನ್ ಫ್ರಾಂಕ್ಲಿನ್, ಗಾಂಧೀಜಿ, ನೆಹರು ಇವರ ಆತ್ಮಕಥೆಗಳು ಈ ಅಭಿಪ್ರಾಯಕ್ಕೆ ಪ್ರತಿಷೇಧವಾಗಿದ್ದರೂ ಹಲವು ಆತ್ಮಕಥೆಗಳು ಸ್ವಪ್ರತಿಷ್ಠಾ ಪ್ರಚಾರ ಸಾಧನೆಗಳಾಗಿವೆ. ತನ್ನ ಬಗ್ಗೆ ಬರೆದುಕೊಳ್ಳುವ ಲೇಖಕ ಸ್ವಾಭಾವಿಕವಾಗಿ ಒಳ್ಳೆಯದನ್ನೆ ಹೇಳಿಕೊಳ್ಳಲು ಇಚ್ಚಿಸುತ್ತಾನೆ. ಅವನು ಪ್ರಾಮಾಣಿಕನಾಗಿದ್ದರೂ ಅನೇಕ ವೇಳೆ ಅವನಿಗೆ ಅವನ ಲೋಪದೋಷಗಳು ಗೋಚರವಾಗುವುದಿಲ್ಲ. ತನ್ನನ್ನು ಇತರರು ನೋಡುವಂತೆ ತಾನೇ ನೋಡಿಕೊಳ್ಳುವುದು ಹಿರಿಯ ಗುಣ".[12]

**ಕನ್ನಡ ವಿಶ್ವಕೋಶ** : "ವ್ಯಕ್ತಿಯ ಇಡೀ ಬದುಕಿನ ಕಥೆಯನ್ನು ಬರೆದಿಟ್ಟರೆ ಅದು ಆತ್ಮಚರಿತ್ರೆ ಆಗುತ್ತದೆ ಎಂದ ಮಾತ್ರಕ್ಕೆ, ಎಲ್ಲರ ಬದುಕಿನ ಅನುಭವಗಳು ಆತ್ಮಚರಿತ್ರೆಯಾಗಲಾರದು. ಅದನ್ನು ಕಲಾತ್ಮಕವಾಗಿ, ಪ್ರಾಮಾಣಿಕವಾಗಿ, ಅಭಿವ್ಯಕ್ತಗೊಳಿಸುವುದು ಮುಖ್ಯ. ಎಲ್ಲರ ಜೀವನವೂ ಸ್ವಾರಸ್ಯದಿಂದ ಕೂಡಿರುವುದಿಲ್ಲ. ಅಂದರೆ ಆತ್ಮಕಥೆಗಾರನ ಜೀವನ ಸ್ವಾರಸ್ಯವುಳ್ಳದ್ದಾಗಿರಬೇಕು ಅದನ್ನು ಅಚ್ಚುಕಟ್ಟಾಗಿ ಚಿತ್ರಿಸುವ ಭಾಷಾ ಶೈಲಿಗಳನ್ನು ಅವನು ಹೊಂದಿರಬೇಕು. ಅವನಲ್ಲಿ ವಿಷಯಗಳನ್ನು ವಿಶ್ಲೇಷಿಸುವ, ಸಂಯೋಜಿಸುವ, ಗ್ರಹಿಸುವ, ಆತ್ಮಶೋಧನೆ ಮಾಡಿಕೊಳ್ಳುವ ಶಕ್ತಿ ಇರಬೇಕು. ನಿಷ್ಪಕ್ಷಪಾತ,

ವಾಸ್ತವಿಕ ಪ್ರವೃತ್ತಿ, ಅಲಿಪ್ತತೆ, ಕುತೂಹಲ ಈ ಗುಣಗಳನ್ನು ಅವನು ಹೊಂದಿರಬೇಕು. ಜೀವನದ ಸಾವಿರಾರು ವಿವರಗಳಲ್ಲಿ ಮುಖ್ಯವಾದವುಗಳನ್ನು ಆರಿಸಿಕೊಳ್ಳುವ, ಅವುಗಳಿಗೆ ಸೂಕ್ತ ಪ್ರಾಧಾನ್ಯತೆಯನ್ನು ಕೊಡುವ ಶಕ್ತಿವುಳ್ಳವನೂ ಮತ್ತು ಇಡೀ ಜೀವನವನ್ನು ನೋಡಲು ಯೋಗ್ಯವಾದ, ಅರ್ಥವತ್ತಾದ ಒಂದು ದೃಷ್ಠಿಕೋನವನ್ನು ಉಳ್ಳವನು ಆಗಿರಬೇಕು'.[13]

ಆತ್ಮಕಥೆಗಳನ್ನು ಕುರಿತು ಎಲ್ಲಾ ಚಿಂತಕರ ಅಭಿಪ್ರಾಯಗಳು ಆತ್ಮಕಥೆಗಳ ವೈಶಿಷ್ಟತೆಯನ್ನು ಮತ್ತು ಸ್ವರೂಪವನ್ನು ವಿವರಿಸುತ್ತವೆ. ಅಂಬೇಡ್ಕರ್ ಅವರ ಬದುಕು, ಬರಹ ಮತ್ತು ಹೋರಾಟಗಳು ದಲಿತ ಆತ್ಮಕಥೆಗಳಿಗೆ ಸ್ಫೂರ್ತಿಯಾಗಿವೆ.

**ದಲಿತ ಪದದ ವಿಶಾಲ ಅರ್ಥ :**

"ಭಾರತ ಸರ್ಕಾರದ ೧೯೩೫ರ ಕಾಯಿದೆಗನುಸಾರವಾಗಿ ಅನುಸೂಚಿತ ಜಾತಿ ಎಂಬ ಶಬ್ದ ಪ್ರಯೋಗವು ಶಾಸನಬದ್ಧವಾಗಿ ಜಾರಿಯಲ್ಲಿ ಬಂದಿತು. ಭಾರತ ಸರ್ಕಾರವು ಸಂರಕ್ಷಣೆ ನೀಡಿದ ವಿಶೇಷ ಸವಲತ್ತು ನೀಡಿದ ಜಾತಿಯ ಯಾದಿಯಲ್ಲಿ ಈ 'ದಲಿತ' ಪದವನ್ನು ನಮೂದಿಸಲಾಗಿದೆ. ಇದೇ ದಲಿತ ಪದದ ಪ್ರಯೋಗವಿರಬೇಕು.[14] ಎಂಬುದನ್ನು ಕೆ.ಎಸ್. ಹೆಗಡೆಯವರು ದಾಖಲಿಸಿದ್ದಾರೆ. ೧೯೭೨ರಲ್ಲಿ ಮಹಾರಾಷ್ಟ್ರದ 'ದಲಿತ ಪ್ಯಾಂಥರ್'ನ ನೇತಾ ಮತ್ತು ಪ್ರಸಿದ್ಧ ದಲಿತ ಚಳುವಳಿಯ ಲೇಖಕರಾದ ನಾಮದೇವ್ ಢಸಾಳರು 'ದಲಿತ' ಶಬ್ದದ ವ್ಯಾಪ್ತಿಯನ್ನು ಅನುಸೂಚಿತ ಜಮಾತಿ (sheduled Tribe) ನವಬೌದ್ಧ, ಭೂಮಿಹೀನ, ಶೇತ ಮಜೂರರು ಮತ್ತು ಆರ್ಥಿಕ ಶೋಷಣೆಗೆ ಒಳಪಡುವ ಎಲ್ಲಾ ಜಾತಿಗಳಿಗೂ ಅವಶ್ಯವೆಂದರಿತರು."[15] "ಮರಾಠಿ ಭಾಷೆಯ ಶಬ್ದಕೋಶಗಳಲ್ಲಿ 'ದಲಿತ' ಶಬ್ದಕ್ಕೆ 'ಅಸ್ಪೃಶ್ಯ' ಹಿಮ್ಮೆಟ್ಟಿದ ಮತ್ತು ಪೀಡಿತ ಜನರೆಂದೇ ಅರ್ಥ ನೀಡಲಾಗಿದೆ. ದಲಿತವರ್ಗಕ್ಕೆ ಮಾತ್ರ ಎಲ್ಲಾ ಶಬ್ದಕೋಶಗಳಲ್ಲಿ ಅಸ್ಪೃಶ್ಯ ಮತ್ತು ಹಿಂದುಳಿದ ವರ್ಗ"[16] ಎಂದು ಹೇಳಲಾಗಿದೆ.

ಕನ್ನಡದಲ್ಲಿ ದಲ್ ಎಂದರೆ ಸೀಳು, ಒಡೆ ಎಂದರ್ಥವಿದೆ. ಮರಾಠಿಯಲ್ಲಿ ದಲ್ ಅಥವಾ ದಲ ಎಂದರೆ ಎಲೆ ಅಥವಾ ದಳ ಎಂಬರ್ಥವಿದೆ. "ದಲ" ಎಂಬುದು ಸಂಸ್ಕೃತ ಪದ. 'ದಲ' ಎನ್ನುವುದಕ್ಕೆ ಚೂರು, ತುಂಡು, ಭಾಗ, ಸೈನ್ಯ ಎಂಬಂಥ ಅರ್ಥಗಳಿವೆ.[17] "ದಲಿತರು ಎಂದರೆ ಶೋಷಿತರು ದಮನಕ್ಕೆ ಒಳಗಾದವರು, ಸಿಡಿದು ಹೋದವರು, ತುಂಡಾದವರು, ಚೂರಾದವರು, ಅವರನ್ನೇ ಅಸ್ಪೃಶ್ಯರು ಎಂದು ಕರೆಯಲಾಗಿದೆ. ದಲಿತರನ್ನು ಅಸ್ಪೃಶ್ಯರು, ಅಂತ್ಯಜರು ಅಂತ್ಯವಸಾಯಿ, ದಸ್ಯು, ಆದಿಮ ಜನಾಂಗ, ತಿರುಕುಲತ್ತರ್, ಪಂಚಮರು, ಬಹಿಷ್ಕೃತರು, ಆದಿ ಕರ್ನಾಟಕ, ಆದಿ ದ್ರಾವಿಡ ಅನುಸೂಚಿತ, ಪರಿಶಿಷ್ಟಜಾತಿ, ಹರಿಜನ ಎಂದು ಮುಂತಾಗಿ ಕರೆಯುತ್ತಿದ್ದ ಬಗ್ಗೆ ಇತಿಹಾಸದ ಸಾಕ್ಷಿ ಇದೆ"[18] ಎನ್ನಬಹುದು.

ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ, ಆರ್ಥಿಕ ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯ ಪರಿಕಲ್ಪನೆಯನ್ನು ಅಧ್ಯಯನ ಮಾಡುತ್ತಾ ಹೋದಂತೆ ಸಮಾಜ, ಸಮುದಾಯ ಮತ್ತು ಜನಾಂಗೀಯ ಚಿಂತನೆ ಕಂಡುಬರುತ್ತದೆ. ಈ ಎಲ್ಲಾ ಅಂಶಗಳಲ್ಲಿ ದಲಿತರದು ಒಂದೇ ಸ್ಥಿತಿ. ಯಾವುದರಲ್ಲೂ ಅವಕಾಶವಿಲ್ಲದ, ಎಲ್ಲಿಯೂ ಸಲ್ಲದ ರೀತಿಯಾಗಿದೆ.

ದಲಿತರದು ಸಾಮಾಜಿಕವಾಗಿ ಅತಂತ್ರದ ಸ್ಥಿತಿ. ಮನುಷ್ಯರೇ ಆಗಿದ್ದರೂ ಅವರನ್ನು ಮನುಷ್ಯರಂತೇ ಕಾಣದ ಸಮಾಜವಿತ್ತು. ಅಂದರೆ ಅವರಿಗೆ ಶಿಕ್ಷಣವಿರಲಿಲ್ಲ. ಮೌಢ್ಯತೆ ಇತ್ತು. ಭೂಮಿಯಲ್ಲಿ ರೈತ ಕಾರ್ಮಿಕರಾಗಿ ದುಡಿಯುತ್ತಿದ್ದರೂ ಅವರಿಗೆ ಭೂ ಒಡೆತನವಿರಲಿಲ್ಲ. ಸಮಾಜದಲ್ಲಿ ಬದುಕುತ್ತಿದ್ದರೂ ಸ್ವಾತಂತ್ರ್ಯವಿರಲಿಲ್ಲ, ಸಮಾನತೆಯಿರಲಿಲ್ಲ, ಮೇಲು–ಕೀಳು ಎಂಬ ಬೇಧ ಭಾವದಲ್ಲಿ ನರಳುತ್ತಿದ್ದರು.

ಭಾರತೀಯ ಸಮಾಜದಲ್ಲಿ ದಲಿತರದು ಸಂದಿಗ್ಧ ಸ್ಥಿತಿಯಾಗಿತ್ತು. ಶೂದ್ರಾತಿಶೂದ್ರರಾದ ಜನರನ್ನು ಸಮಾಜದಿಂದ ಊರಿನಿಂದ ಹೊರಗಿಡಲಾಗಿತ್ತು. ಜಾತಿಯತೆ ಮತ್ತು ಅಸ್ಪೃಶ್ಯತೆಯಿಂದಾಗಿ ಬಹುಸಂಖ್ಯಾತ ಜನರು ನೊಂದುಹೋಗಿದ್ದರು. ಸಾಮಾಜಿಕವಾಗಿ ಜಾತಿ ಮತ್ತು ಅಸ್ಪೃಶ್ಯತೆ ಅಂದಿನಿಂದ ಇಂದಿನವರೆಗಿನ ಪ್ರಮುಖ ಕಾರಣವಾಗಿ ಇದರೊಳಗಿದ್ದವರು ಒಂದು ರೀತಿಯಿಂದ ಸಮಾಜದ ಬಹಿಷ್ಕೃತರಾಗಿದ್ದರು. ಅಸ್ಪೃಶ್ಯರ ಈ ದುಃಸ್ಥಿತಿ ಬ್ರಿಟೀಷರ ಕಾಲದಲ್ಲಿಯೂ ಮುಂಚೂಣಿಯಲ್ಲಿತ್ತು. ಯಾವ ಕಾಲಘಟ್ಟದಲ್ಲಿಯೂ ಅಸ್ಪೃಶ್ಯರಿಗೆ ಮುಕ್ತ ಅವಕಾಶಗಳಿರಲಿಲ್ಲ. ದಲಿತರನ್ನು ಸ್ಪೃಶ್ಯರು ಅಸ್ಪೃಶ್ಯರು ಎಂದು ವಿಭಾಗಿಸಲಾಗಿತ್ತು. ಸ್ಪೃಶ್ಯರು ಇವರಿಬ್ಬರು ದಲಿತರೇ ಆದರೂ ಅವಕಾಶಗಳಿಂದ ಸವಲತ್ತುಗಳಿಂದ ವಿಭಾಗಿಸಲ್ಪಟ್ಟು ಬಹುಸಂಖ್ಯಾತರೆಂದು ಸ್ಪೃಶ್ಯರು ಅಸ್ಪೃಶ್ಯರು ಎಂದು ವಿಭಾಗಿಸಲಾಗಿತ್ತು. ಸ್ಪೃಶ್ಯರು ಬಹುಸಂಖ್ಯಾತರೆಂದು ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಕಾಣಲಾಗಿತ್ತು; ಸ್ಪೃಶ್ಯರು ಊರಿನ ಒಳಗೆ ವಾಸಿಸುತ್ತಿರುವ ಅವಕಾಶವಿದ್ದು ಅಸ್ಪೃಶ್ಯರಿಗೆ ಮನೆಗಳಿಲ್ಲದೆ ಊರಿನ ಹೊರಗೆ ವಾಸಿಸುತ್ತಿದ್ದರು; ಅಸ್ಪೃಶ್ಯರು ಎಲ್ಲರ ಕೆಲಸ ಮಾಡಿಕೊಳ್ಳುವ ಜೀವಗಾರರಾಗಿದ್ದರು ಆದರೆ ಸ್ಪೃಶ್ಯರು ಆಳುವ ವರ್ಗದವರು ಆಗಿದ್ದರು; ಅಸ್ಪೃಶ್ಯರಿಗೆ ಸಾರ್ವಜನಿಕ ಪ್ರದೇಶ ದೇವಾಲಯ, ಮುಕ್ತವಾಗಿ ಶಾಲಾಪ್ರವೇಶ, ಕೆರೆಬಾವಿಗಳಲ್ಲಿ ನೀರು ಸೇದುವ; ಉತ್ತಮ ಕೆಲಸವನ್ನು ಮಾಡುವುದು ಉನ್ನತ ಉದ್ಯೋಗಗಳನ್ನು ಪಡೆಯುವ ಅವಕಾಶವಿತ್ತು ; ಅಸ್ಪೃಶ್ಯರು ಇವೆಲ್ಲದರಿಂದ ವಂಚಿತರಾಗಿದ್ದರು. ಹೆಂಚಿನ ಮನೆಯನ್ನು ಕಟ್ಟಿಕೊಳ್ಳುವುದು ಸಾಧ್ಯವಿರಲಿಲ್ಲ; ದಕ್ಷಿಣ ದಿಕ್ಕಿನಲ್ಲಿ ವಾಸಿಸಬೇಕು; ಶುಭ್ರವಾದ ಬಟ್ಟೆಗಳನ್ನು ಧರಿಸುವಂತಿರಲಿಲ್ಲ; ಪಾದರಕ್ಷೆ ಬಳಸುವಂತಿಲ್ಲ, ಭೂಮಿಯನ್ನು ಒಳಗೊಳ್ಳುವಂತಿರಲಿಲ್ಲ; ಸುಸಂಸ್ಕೃತವಾದ ಭಾಷೆಯನ್ನು ಬಳಸುವಂತಿರಲಿಲ್ಲ; ಹೀಗೆ ಸಾಮಾಜಿಕ ಹಕ್ಕುಗಳಿಂದ ಅಸ್ಪೃಶ್ಯರು ಬದುಕಿದ್ದರು. ಅಸ್ಪೃಶ್ಯರು ಚಿನ್ನದ ಬೆಳ್ಳಿಯ ಆಭರಣಗಳನ್ನು ಧರಿಸುವಂತಿರಲಿಲ್ಲ. ಯಾವ ರೀತಿಯ ಪ್ರತಿಫಲವನ್ನು ಒತ್ತಾಯಪೂರ್ವಕವಾಗಿ ಪಡೆಯುವಂತಿರಲಿಲ್ಲ.

ದಲಿತರಲ್ಲಿ ಸಾಂಸ್ಕೃತಿಕವಾಗಿ ಗುರುತಿಸಲ್ಪಡುವ ಅಂಶಗಳಿರಲಿಲ್ಲ. ಆದರೆ ಅವರಲ್ಲಿ ಧೈರ್ಯವಂತಿಕೆ, ದುಡಿಯುವ ಎದೆಗಾರಿಕೆ ಶ್ರಮದ ಕೆಲಸದಲ್ಲಿ ತೊಡಗಿಸಿಕೊಳ್ಳುವಿಕೆ ಅವರಲ್ಲಿದ್ದವು. ದಲಿತರಲ್ಲಿರುವ ವಿಶಿಷ್ಟವಾದ ಸಂಪತ್ತು ಎಂದರೆ ಅವರಲ್ಲಿದ್ದ ಕಲೆ. ದಲಿತರ ಕಲೆಗಳು ಅದ್ಭುತ ಮತ್ತು ಮಹತ್ವದಿಂದ ಕೂಡಿದ್ದವು. ಹಾಡು ಕುಣಿತ ಅವರಲ್ಲಿ ಎದ್ದು ಕಾಣುತ್ತಿದ್ದವು. ಶ್ರಮದ ಕೆಲಸದ ನಡುವೆ ಅವರು ಪದಗಳನ್ನು ಕಟ್ಟಿ ಹಾಡಿಕೊಳ್ಳುತ್ತಿದ್ದರು. ಇದೊಂದು ಜಾನಪದೀಯ ನೆಲೆ ಎಂದು ಹೇಳಬಹುದು. ಶ್ರಮ ಪರಿಹಾರಕ್ಕಾಗಿ ಹಾಡುತ್ತಿದ್ದವರ ರೀತಿಯಿಂದ ನಾವು ಬಹುದೊಡ್ಡ ಸಾಂಸ್ಕೃತಿಕವಾದ ಪರಿಸರವನ್ನು ಕಾಣಲು ಸಾಧ್ಯವಾಗಿದೆ. ಜನಪದರಲ್ಲಿನ ಎಲ್ಲ ಕಲೆಗಳು ಇಂದಿಗೂ

ಮುಂದುವರೆದು ವೈಶಿಷ್ಟತೆಯನ್ನು ಪಡೆದುಕೊಂಡಿದೆ. ಜನಪದರನ್ನೇ ದಲಿತರು ಎಂದು ಗುರುತಿಸಬಹುದು. ಏಕೆಂದರೆ ದುಡಿಯುವ ಮತ್ತು ಶ್ರಮಿಕ ವರ್ಗದವರೇ ದಲಿತರು. ಇಂದಿನ ಎಲ್ಲಾ ಕಲೆಗಳ ಮೂಲ ದಲಿತರ ಕಲೆಗಳೇ ಆಗಿವೆ. ಇಲ್ಲಿ ಗಮನಿಸಬಹುದಾದ ಮತ್ತೊಂದು ಅಂಶವೆಂದರೆ ಇವರ ಕಲೆಗಳು ಸಹ ಜಾತಿಯನ್ನು ಗುರುತಿಸುತ್ತವೆ. ಜಾತಿಯಾಧಾರಿತ ಕಲೆಗಳನ್ನು ಆಧರಿಸಿ ಅವರನ್ನು ಗುರುತಿಸುವ ಮತ್ತು ಗೌರವಿಸುವ ಅಂಶವನ್ನು ಕಾಣಬಹುದು. 'ತಮಟೆ ಬಡಿಯುವುದು, ಡೊಳ್ಳು ಕುಣಿತ, ಕಂಸಾಳೆ ಕುಣಿತ, ದೇವರ ಕುಣಿತ ಇವುಗಳೆಲ್ಲವು' ತಳಸಮುದಾಯದ ಕಲೆಗಳೇ ಆಗಿವೆ. ದಲಿತರು ಸಾಂಸ್ಕೃತಿಕವಾಗಿಯೂ ಪ್ರತಿಭಾವಂತರಾದಾಗ್ಯೂ ಅವರಿಗೆ ಸಮಾಜದಲ್ಲಿ ಯಾವುದೇ ಪ್ರಮುಖವೆನಿಸುವ ಸ್ಥಾನಮಾನಗಳು ದೊರೆಯಲಿಲ್ಲ.

ದಲಿತರ ಶೈಕ್ಷಣಿಕ ಸ್ಥಾನಮಾನಗಳು ಪ್ರಾರಂಭದ ಹಂತದಲ್ಲಿ ಇರಲಿಲ್ಲವೆಂದೇ ಹೇಳಬಹುದು. ಶಿಕ್ಷಣ ಕಲಿಯುವಂತಿರಲಿಲ್ಲ. ಶಿಕ್ಷಣವನ್ನು ಕಲಿಯುವ ಅವಕಾಶಗಳೇ ಇರಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿಯೂ ಶಿಕ್ಷಣವಿರಲಿಲ್ಲ. ಚಾತುರ್ವರ್ಣ ಪದ್ಧತಿಯ ಪ್ರಕಾರ ಬ್ರಾಹ್ಮಣರು ಮಾತ್ರ ವಿದ್ಯಾವಂತರಾಗಿದ್ದರು. ಉಳಿದವರಿಗೆ ಅವರು ವಿದ್ಯೆ ಕಲಿಸುತ್ತಿದ್ದರು. ಆದರೆ ಶೂದ್ರರಿಗೆ, ಅಸ್ಪೃಶ್ಯರಿಗೆ ವಿದ್ಯೆ ಕಲಿಯುವ ಹಾಗಿಲ್ಲವೆಂಬ ನಿಷೇಧವಿತ್ತು. ವೇದಶಾಸ್ತ್ರ ಪುರಾಣಗಳನ್ನು ಓದಿದ ಅಸ್ಪೃಶ್ಯನ ನಾಲಗೆಯನ್ನು ಕತ್ತರಿಸುತ್ತಿದ್ದರು. ಅದನ್ನು ಕೇಳುವ ಕಿವಿಗೆ ಕಾದ ಸೀಸವನ್ನು ಸುರಿಯುತ್ತಿದ್ದರು. ತಳಸಮುದಾಯಗಳ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವೇ ಮೂಲ ಎಂಬುದನ್ನು ಅರಿತ ಅಂಬೇಡ್ಕರ್ ಅವರು ಜ್ಯೋತಿ ಬಾ ಫುಲೆ ಮತ್ತು ಸಾವಿತ್ರಿ ಬಾ ಫುಲೆ ಅವರ ಮಾರ್ಗವನ್ನು ಮುಂದುವರೆಸಿದರು. ಜ್ಯೋತಿ ಬಾ ಫುಲೆ ಅವರು ಶೈಕ್ಷಣಿಕ ಕ್ರಾಂತಿಯನ್ನೇ ಉಂಟುಮಾಡಿದರು. ಬ್ರಿಟೀಷರ ಆಳ್ವಿಕೆಯಲ್ಲಿ ಇವರು ದಲಿತ ಮಹಿಳೆಯರಿಗೆ ಅಕ್ಷರ ಕಲಿಸಲು ಅವರ ಕೇರಿಗಳಿಗೆ ಹೋಗುತ್ತಿದ್ದರು. ಅಂಬೇಡ್ಕರ್ ಅವರಿಗೆ ಈ ಎಲ್ಲಾ ಅಂಶಗಳು ಸ್ಫೂರ್ತಿಯಾಗಿದ್ದವು. ವಿದೇಶದಲ್ಲಿ ಉನ್ನತ ಶಿಕ್ಷಣವನ್ನು ಪಡೆದ ಕೀರ್ತಿ ಅಂಬೇಡ್ಕರ್ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರು ಗಳಿಸಿದ ಪದವಿಗಳು ಪಡೆದ ಜ್ಞಾನ ಪ್ರಪಂಚದಲ್ಲಿ ಯಾರಿಗೂ ಸಾಧ್ಯವಾಗಿಲ್ಲವೆನ್ನಬಹುದು.

ಅಂಬೇಡ್ಕರ್ ಅವರಿಗೆ ದೇವರ ಆರಾಧನೆ, ಮೂರ್ತಿಪೂಜೆಗಳಲ್ಲಿ ನಂಬಿಕೆ ಇರಲಿಲ್ಲ. ಅಸ್ಪೃಶ್ಯರು ಎಂಬ ಕಾರಣಕ್ಕೆ ದೇವಾಲಯ ಪ್ರವೇಶವನ್ನು ನಿಷೇಧಿಸಿರುವುದನ್ನು ವಿರೋಧಿಸಿದ ಅಂಬೇಡ್ಕರ್ ಅವರು ದೇವಾಲಯ ಪ್ರವೇಶ ಚಳುವಳಿಯನ್ನು ಮಾಡುತ್ತಾರೆ. ಆದರೆ ಅವರ ಉದ್ದೇಶ ಸಾಮಾಜಿಕವಾದ ಹಕ್ಕುಗಳನ್ನು ಪಡೆಯುವುದಾಗಿತ್ತೇ ಹೊರತು ದೇವರ ಮೇಲಿನ ಭಕ್ತಿಯಿಂದಲ್ಲ. ಧರ್ಮ ಎಲ್ಲರನ್ನೂ ಸಮಾನವಾಗಿ ಕಾಣಬೇಕು ಆದರೆ ಹಿಂದೂ ಧರ್ಮ ವ್ಯವಸ್ಥೆಯಲ್ಲಿ ಯಾರಿಗೂ ಸಮಾನತೆಯಿಲ್ಲ. ಮೇಲು ವರ್ಗದವರಿಂದ ಎಲ್ಲರೂ ಶೋಷಣೆಗೆ ಒಳಗಾಗುವುದರ ಜೊತೆಗೆ ಅಸಮಾನತೆ ಎದ್ದು ಕಾಣುವ ಚಿತ್ರಣವಾಗಿತ್ತು. ಎಲ್ಲರನ್ನು ಸಮಾನವಾಗಿ ಕಾಣದ ಧರ್ಮದಲ್ಲಿ ನನಗೆ ನಂಬಿಕೆಯಿಲ್ಲವೆನ್ನುವ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧಧರ್ಮಕ್ಕೆ ಮತಾಂತರವಾಗಲು ನಿರ್ಧರಿಸುತ್ತಾರೆ. 'ನಾನು ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ' ಎಂದು 1956 ರಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸುತ್ತಾರೆ.

ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಕಾನೂನು ತಜ್ಞರು. ಹಾಗೆಯೇ ರಾಜಕೀಯ ತಜ್ಞರು ಆಗಿದ್ದರು. ರಾಜಕೀಯ ಅಧಿಕಾರ ಜನಾಂಗದ ಅಭಿವೃದ್ಧಿಗೆ ಸಾಧಕ ಎಂಬುದನ್ನು ಅರಿತಿದ್ದರು. ಅಸ್ಪೃಶ್ಯರು, ತಳಸಮುದಾಯದವರಲ್ಲಿ ಬದಲಾವಣೆಗಳಾಗಬೇಕೆಂದರೆ ಅವರು ಸಮಾನತೆಯನ್ನು ಸಾಮಾಜಿಕವಾದ ಸ್ವಾತಂತ್ರ್ಯವನ್ನು ಪಡೆಯಬೇಕೆಂದರೆ ತಳಸಮುದಾಯದಲ್ಲಿಯೂ ಜನ ಪ್ರತಿನಿಧಿಗಳು ಬೇಕು. ಅವರಿಂದಲೇ ಜನರ ಅಭಿವೃದ್ಧಿ ಸಾಧ್ಯವೆಂದು 'ಸ್ವತಂತ್ರ ಕಾರ್ಮಿಕ ಪಕ್ಷ'ವನ್ನು ಕಟ್ಟಿದರು. ರಾಜಕೀಯ ಪ್ರಾತಿನಿಧ್ಯ ಪಡೆಯಲು ದುಂಡುಮೇಜಿನ ಪರಿಷತ್ತಿನಲ್ಲಿಯೂ ತಮ್ಮ ಬೇಡಿಕೆಯನ್ನಿಟ್ಟಿದ್ದರು. ಮತ ಹಾಕುವ ಹಕ್ಕು ದೊರೆಯಬೇಕು. ಅವರ ನಾಯಕರನ್ನು ಅವರೇ ಮತಚಲಾಯಿಸಿ ಆರಿಸುವ ಅವಕಾಶಬೇಕು. ಜನಸಂಖ್ಯೆಗೆ ಅನುಗುಣವಾದ ಜಾತಿಗಳಿಗೆ ಉದ್ಯೋಗದಲ್ಲಿ ಅವಕಾಶವಿರಬೇಕು. ದೇವರಿಗೆ ಎಲ್ಲಾ ಬಗೆಯ ಅವಕಾಶಗಳನ್ನು ದೊರೆಯಬೇಕು. ದಲಿತರಿಗೆ ಅನ್ಯಾಯವಾದಾಗ ಅವರಿಗೂ ನ್ಯಾಯ ಒದಗಿಸುವ ಅವಕಾಶವಿರಬೇಕು. ದಲಿತರ ಕಲ್ಯಾಣ ಇಲಾಖೆಯನ್ನು ಪ್ರಾರಂಭಿಸಿ ಅವರ ಏಳಿಗೆಗೆ ಅವಕಾಶ ಮಾಡಬೇಕು.

ಅಂದಿನಿಂದ ಇಂದಿನವರೆಗೂ ಬಾಬಾಸಾಹೇಬರ ಹೋರಾಟ ಸಾಗಿದೆ. ಇಂದು ಬೌದ್ಧಿಕವಾಗಿ ಅಂಬೇಡ್ಕರ್ ಅವರನ್ನು ಕಾಣದಿದ್ದರು ಅವರ ಚಿಂತನೆಗಳು ತತ್ವಸಿದ್ಧಾಂತಗಳು ಪೂರಕವಾಗಿವೆ. ಜನತೆ ಇಂದಿಗೂ ಪ್ರತಿಭಟನೆ ಹೋರಾಟಗಳನ್ನು ಎಲ್ಲಿ ನಡೆಸುತ್ತಿದ್ದಾರೆ ಅಲ್ಲಿ ಅಂಬೇಡ್ಕರ್ ಅವರ ಆಶಯವನ್ನು ಕಾಣಬಹುದು.

**ಅಡಿ ಟಿಪ್ಪಣಿ :**

1. ಅಂಬೇಡ್ಕರ್ ವಾದ ಮತ್ತು ಪ್ರಸ್ತುತ ದಲಿತರು, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಸ್ವಪ್ನ ಬುಕ್ ಹೌಸ್, 2012, ಪುಟ 8
2. ಅದೇ, ಪುಟ 20
3. ಅದೇ, ಪುಟ 20
4. ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ, ಬಿ.ಎಂ. ಪುಟ್ಟಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ–2
5. ಆಲಯಗಳ ಬಯಲು, ಎಸ್.ಬಿ. ನಾಯಕ, ಪಾರುಮನೆ ಅಭಿನಂದನಾ ಗ್ರಂಥ, ಸಂ. ಡಾ. ಶ್ರೀಪಾದ ಶೆಟ್ಟಿ, ಡಾ. ಗುರುಪಾದ ಮರಿಗುದ್ದಿ, ಎಸ್.ಬಿ. ನಾಯಕ್, ಪಾರುಮನೆ ಅಭಿನಂದನಾ ಸಮಿತಿ, ಧಾರವಾಡ, 2008, ಪುಟ–9
6. ಅದೇ, ಪುಟ–10.12
7. ಆಲಯಗಳ ಬಯಲು, ಎಸ್.ಬಿ. ನಾಯಕ, ಪಾರುಮನೆ ಅಭಿನಂದನಾ ಗ್ರಂಥ, ಸಂ. ಡಾ. ಶ್ರೀಪಾದ ಶೆಟ್ಟಿ, ಡಾ. ಗುರುಪಾದ ಮರಿಗುದ್ದಿ, ಎಸ್.ಬಿ. ನಾಯಕ್, ಪಾರುಮನೆ ಅಭಿನಂದನಾ ಸಮಿತಿ, ಧಾರವಾಡ, 2008, ಪುಟ–11
8. ಕನ್ನಡ ಆತ್ಮಕಥೆ, ಕನ್ನಡ ಸಾಹಿತ್ಯ ಚರಿತ್ರೆ, ಅಪ್ಪಗೆರೆ ಸೋಮಶೇಖರ್, ಕನ್ನಡ ಸಾಹಿತ್ಯ ಪರಿಷತ್ತು.
9. ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ಡಾ. ಶರಣಮ್ಮ ಅ. ಗೋರೇಬಾಳ, ದಲಿತ ಸಾಹಿತ್ಯ ಪರಿಷತ್ತು, ಗದಗ, 2003.
10. ಸಂಜೆಗಣ್ಣಿ ಹಿನ್ನೋಟ, ಎ.ಎನ್. ಮೂರ್ತಿರಾಯ, ಮುನ್ನುಡಿಯಿಂದ.
11. ಡಿ.ಆರ್. ನಾಗರಾಜ್, ಊರುಕೇರಿ ಆತ್ಮಕಥೆಯ ಹಿನ್ನುಡಿಯಿಂದ.
12. ಕನ್ನಡ ಆತ್ಮಕಥೆ, ಕನ್ನಡ ಸಾಹಿತ್ಯ ಚರಿತ್ರೆ, ಅಪ್ಪಗೆರೆ ಸೋಮಶೇಖರ್, ಕನ್ನಡ ಸಾಹಿತ್ಯ ಪರಿಷತ್ತು.

13. ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ (ವಿಶ್ವಕೋಶ).
14. ಮಹಾರಾಷ್ಟ್ರದಲ್ಲಿ ದಲಿತ ಚಳುವಳಿಗಳು, ಕೆ.ಎಸ್. ಹೆಗಡೆ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, 2010, ಪುಟ 2.
15. ಅದೇ, ಪುಟ 3.
16. ಅದೇ, ಪುಟ 4.
17. ದಲಿತ ಮಾರ್ಗ, ಸಂ. ಡಾ. ಅರವಿಂದ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, 2002, ಪುಟ 21.
18. ಅದೇ, ಪುಟ 21.

ಅಧ್ಯಾಯ – ೩

# ಆತ್ಮಕಥೆಗಳಲ್ಲಿ ಸಾಮಾಜಿಕ ಹೋರಾಟದ ಚಿತ್ರಣ

ಆತ್ಮಕಥೆಗಳು ಹೋರಾಟದ ಚಿತ್ರಣವನ್ನು ನೀಡುತ್ತವೆ. ತಮ್ಮ ಬದುಕಿನ ಅಥವಾ ಬದುಕಿಗಾಗಿ ಮಾಡುವುದು ಹೋರಾಟ. ಪ್ರತಿಯೊಬ್ಬರ ಬದುಕಿನ ಹಾದಿ ಸುಲಭವಾದದ್ದಲ್ಲ. ಸರಳ ಸುಂದರ ಬದುಕು ಎಂದಾಗಲೇ ಸಮಸ್ಯೆಗಳು ಎದುರಾಗುತ್ತವೆ. ಹಾಗೆಯೇ ದಲಿತ ಆತ್ಮಕಥೆಗಳಲ್ಲಿ ಬರುವ ಬದುಕಿನ ಚಿತ್ರಣ ಸಂಕಷ್ಟಗಳ ಸರಮಾಲೆಯಾಗಿರುತ್ತದೆ. ಸಂಘರ್ಷದಿಂದಲೇ ಕೂಡಿರುತ್ತದೆ. ಈ ರೀತಿಯ ಸಂಘರ್ಷವನ್ನು ಅಂಬೇಡ್ಕರ್ ಅವರ ವೈಯಕ್ತಿಕ ಬದುಕಿನೊಂದಿಗೆ ಸಾಮಾಜಿಕವಾದ ಬದುಕು ಬೆರೆತು ಸಾಗುತ್ತದೆ. ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಬದುಕಿನುದ್ದಕ್ಕೂ ಕಂಡಿದ್ದು ಅಸಮಾನತೆಯ ಸಮಾಜವನ್ನು ಹಾಗೂ ಅನುಭವಿಸಿದ್ದು ಜಾತೀಯತೆ ಮತ್ತು ಅಸ್ಪೃಶ್ಯತೆಯ ಅವಮಾನವನ್ನು ಮಾತ್ರವೇ. ಏಕೆಂದರೆ ಜಾತೀಯತೆ ನಮ್ಮ ದೇಶದ ಸಮಸ್ಯೆಗಳಲ್ಲಿ ಪ್ರಮುಖವಾದದ್ದು, ಭಾರತೀಯ ಸಮಾಜ ಜಾತೀಯತೆಯಲ್ಲಿ ತುಂಬಿ ಹೋಗಿದೆ ಹಾಗೂ ಜನರೆಲ್ಲರೂ ಅದರಲ್ಲಿ ಹಂಚಿ ಹೋಗಿದ್ದಾರೆ. ಇದನ್ನು ಗುರುತಿಸಿ, ಸಮಸ್ಯೆಗಳನ್ನು ತಿಳಿಸಿ ಪರಿಹಾರಗಳನ್ನು ಸೂಚಿಸಿದವರು ಅಂಬೇಡ್ಕರ್ ಅವರು. ತಮ್ಮ ಬದುಕಿನೊಂದಿಗೆ, ಅವರು ಅನುಭವಿಸಿದ ನೋವು, ಅವಮಾನ ಹಿಂಸೆಗಳನ್ನು ಸಹಿಸುತ್ತಾ ಪ್ರತಿಭಟಿಸುತ್ತಾ ಅದರ ಬಗೆಗೆ ತನ್ನ ಸಮುದಾಯದವರಿಗೆ ತಿಳಿಸುವ ಕಾರ್ಯವನ್ನು ಮಾಡಿಕೊಂಡೇ ಬಂದರು. ಅಂಬೇಡ್ಕರ್ ಅವರ ಸಾಮಾಜಿಕ, ಶೈಕ್ಷಣಿಕ ಹಾಗೂ ವೈಯಕ್ತಿಕ ಬದುಕಿನಲ್ಲಿ ಅವರು ತೆಗೆದುಕೊಂಡಂತಹ ತೀರ್ಮಾನಗಳು ಗಳಿಸಿದ ಪದವಿಗಳು ಹಾಗೂ ಸಮುದಾಯದ ಪ್ರಗತಿಗೆ ಹಾಕಿಕೊಂಡ ಯೋಜನೆಗಳು ಅತ್ಯಂತ ಮಹತ್ವವುಳ್ಳವು ಆಗಿದ್ದವು. ನೋವು ಮತ್ತು ಹಿಂಸೆಗೆ ಒಳಗಾದ ಜನಾಂಗ ಅನುಭವಿಸಿದ ಕ್ಷಣಗಳು ಅತ್ಯಂತ ಘೋರವೆಂದೇ ಹೇಳಬಹುದು. ಸಾಮಾಜಿಕವಾದ ಸಂದರ್ಭಗಳನ್ನು ಗುರುತಿಸುವಾಗ ಜಾತೀಯತೆಯ ಕ್ರೂರತೆಯನ್ನು, ಅಸ್ಪೃಶ್ಯತೆಯೊಂದಿಗೆ ಅನುಭವಿಸುತ್ತಾ ಅವರು ಪ್ರತಿಕ್ಷಣವು ನರಳಿದ್ದರು. ದಲಿತರಲ್ಲಿ ಅಂಬೇಡ್ಕರ್ ಅವರ ಹೋರಾಟದ ಪ್ರಭಾವದಿಂದ ಜಾಗೃತಿಯುಂಟಾಯಿತು. ಇವರ ಪ್ರಭಾವ ಒಂದು ಭಾಷೆಗೆ ಮಾತ್ರವೇ ಸೀಮಿತವಾಗಿರದೆ ಎಲ್ಲಾ ಭಾರತೀಯ ಭಾಷೆಗಳಲ್ಲಿನ ದಲಿತರಿಗೆ, ಚಳುವಳಿಗೆ ಮತ್ತು ದಲಿತ ಸಾಹಿತ್ಯಕ್ಕೆ ಪ್ರೇರಣೆಯಾಯಿತು.

**ಸಾಮಾಜಿಕವಾದ ಜಾಗೃತಿ :**

ದಲಿತ ಸಮುದಾಯ ಅಂಬೇಡ್ಕರ್ ಅವರ ವಿಚಾರಧಾರೆಗಳಿಂದ ಸ್ವತಂತ್ರರಾಗಿ ಊರಿನಲ್ಲಿ ವಾಸಿಸುವ, ಕೆಲಸ ಮಾಡುವ, ಊರಿನ ರಸ್ತೆಗಳಲ್ಲಿ ಓಡಾಡುವ, ಕುಡಿಯುವ ನೀರನ್ನು ತೆಗೆದುಕೊಳ್ಳುವ

ಹಾಗೂ ಇವೆಲ್ಲಕ್ಕೂ ಮೂಲವಾದ ಶಿಕ್ಷಣವನ್ನು ಕಡ್ಡಾಯವಾಗಿ ಪಡೆಯುವ ಅರಿವುಂಟಾಯಿತು; ದಲಿತರ ಸಮಸ್ಯೆಗಳನ್ನು ಸಂವಿಧಾನದ ಚೌಕಟ್ಟಿನಲ್ಲಿ ಕಾನೂನು ಬದ್ಧವಾಗಿ ಬಗೆಹರಿಸಿಕೊಳ್ಳುವುದು; ದಲಿತ ಚಳುವಳಿಯ ಕಾರ್ಯಕರ್ತರಿಗೆ ಅಗತ್ಯವಾದ ನಿಷ್ಠೆ ಪ್ರಾಮಾಣಿಕತೆಗಳನ್ನು ಬೋಧಿಸಿದ ಅಂಬೇಡ್ಕರ್ ಅವರ ಹೋರಾಟದ ಮಜಲುಗಳನ್ನು ಉದ್ದೇಶವನ್ನು ಒಳಗೊಂಡು ನಡೆಯುವಂತೆ ಮಾಡಿದೆ; ಮಹಾರಾಷ್ಟ್ರದ ದಲಿತ ಚಳುವಳಿ ಸಾಹಿತ್ಯಕ್ಕೆ ನೇರವಾದ ಪ್ರೇರಣೆಯನ್ನು ನೀಡಿದೆ; ಭಾರತದ ಎಲ್ಲಾ ಭಾಗಗಳಲ್ಲಿನ ಚಳುವಳಿಗೂ ಮೂಲ ಪ್ರೇರಕ ಶಕ್ತಿಯಾಗಿದೆ. ಚಳುವಳಿಯ ಪ್ರಭಾವದಿಂದ ರಚನೆಯಾದ ದಲಿತ ಸಾಹಿತ್ಯ ಕೃತಿಗಳು ಮಹತ್ವವಾಗಿವೆ; ಅವುಗಳೆಲ್ಲವೂ ಬೇರೆ ಭಾಷೆಯ ಕೃತಿಗಳಿಗೆ ಪ್ರೇರಣೆಯಾಗಿವೆ; ಅಂಬೇಡ್ಕರ್ ಅವರು ನಡೆಸಿದ ಹೋರಾಟ ಮತ್ತು ಸಾಹಿತ್ಯ ಚಳುವಳಿಗಳು ಮಹಾರಾಷ್ಟ್ರಕ್ಕೆ ಮಾತ್ರವೇ ಸೀಮಿತವಾಗದೆ ಮರಾಠಿ ಸಾಹಿತ್ಯದಿಂದ ಬೇರೆಲ್ಲ ಭಾಷೆಯ ಸಾಹಿತ್ಯಿಕ ಪ್ರಕಾರಗಳಿಗೆ ಪ್ರೇರಣೆಯಾಗಿದೆ. ಹಾಗೆಯೇ ಆತ್ಮಕಥೆಗಳಿಗೂ ಪ್ರೇರಣೆಯಾಗಿದೆ.

ಮರಾಠಿ ಸಾಹಿತ್ಯದಲ್ಲಿಯೇ ಪ್ರಮುಖವಾಗಿ ಆತ್ಮಕಥೆಗಳನ್ನು ಗುರುತಿಸಲಾಗಿದೆ. ಆತ್ಮಕಥೆಗಳಿಗೆ ಮಾತ್ರವಲ್ಲವೇ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿಂದ ಕಾವ್ಯ, ಕಥೆ, ನಾಟಕ, ಕಾದಂಬರಿಗೂ ಈ ಭಾಷೆಯಲ್ಲಿ ಹೆಚ್ಚಿನ ಮಹತ್ವವಿದೆ. ಮಾರಾಠಿ ಸಾಹಿತ್ಯ ಬೇರೆ ಬೇರೆ ಸಾಹಿತ್ಯ ಪ್ರಕಾರಗಳಿಗೆ ಮೂಲವೆನ್ನಬಹುದು. ಆತ್ಮಕಥಾ ಪ್ರಕಾರದ ಸಾಹಿತ್ಯವು ಈ ಭಾಷೆಯಿಂದಲೇ ಹುಟ್ಟಿಕೊಂಡಿದೆ. ಹಾಗೆಯೇ ದಲಿತ ಆತ್ಮಕಥೆಗಳು ಈ ಭಾಷೆಯಲ್ಲಿ ಹುಟ್ಟಿ ಬೇರೆ ಭಾಷೆಗಳಿಗೆ ಪ್ರೇರಕ ಶಕ್ತಿಯಾಗಿವೆ.

**ಆತ್ಮಕಥೆಗಳು :**

ಆತ್ಮಕಥೆಗಳು ವ್ಯಕ್ತಿಯೊಬ್ಬನ ಬದುಕಿನ ಚಿತ್ರಣವನ್ನು ಜೊತೆ ಜೊತೆಗೆ ಸುತ್ತಲಿನ ಸಮಾಜವನ್ನು ಪರಿಕಲ್ಪಿಸಿ ಕೊಡುತ್ತದೆ. ದಲಿತ ಆತ್ಮಕಥೆಗಳು ದಲಿತನೊಬ್ಬನ ಬದುಕಿನ ಚಿತ್ರಣವನ್ನು ಮಾತ್ರವಲ್ಲದೇ ಇಡೀ ದಲಿತ ಸಮುದಾಯದ ನೋವು, ನಲಿವು, ಹಿಂಸೆ, ಅವಮಾನಗಳನ್ನು ಚಿತ್ರಿಸುತ್ತದೆ. ಸಮಾಜದೊಂದಿಗೆ ಎಲ್ಲವನ್ನು ಅನುಭವಿಸುತ್ತಾ ಸಾಗುವ ಇತರರನ್ನು ಜೊತೆಯಾಗಿಸಿಕೊಳ್ಳುವ ಹಾಗೂ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ, ಇತರರ ಬೆಂಬಲಕ್ಕೆ ನಿಲ್ಲುವ ಚಿತ್ರಣವನ್ನು ಇವು ಕಟ್ಟಿಕೊಡುತ್ತವೆ. ದಲಿತ ಆತ್ಮಕಥೆಗಳಲ್ಲಿ ನೈಜತೆಯ ಪ್ರಮಾಣವನ್ನು ಕಾಣಬಹುದು. "ಆತ್ಮಕಥೆಯು ಆತ್ಮಚರಿತ್ರೆ ಎಂಬ ಹೆಸರಿನಲ್ಲಿ ಭಾರತೀಯ ಭಾಷೆಗಳಲ್ಲಿ ಪರಿಚಿತವಾಗಿಯೇ ಇದೆ. ಸಾಮಾನ್ಯವಾಗಿ ಆತ್ಮಚರಿತ್ರೆಯಲ್ಲಿ ಆಯಾ ಲೇಖಕರ ವೈಯಕ್ತಿಕ ಬದುಕು ಪ್ರಧಾನವಾಗಿ ಪ್ರತಿಬಿಂಬಿತವಾಗುತ್ತದೆ. ಸಾಂದರ್ಭಿಕವಾಗಿ ಸಮಕಾಲೀನ ಸಮಾಜದ ಚಿತ್ರಣವು ಅದರಲ್ಲಿ ಒಡಮೂಡುತ್ತದೆ. ಒಟ್ಟಿನಲ್ಲಿ ಆತ್ಮಚರಿತ್ರೆ ಒಂದು ಸಮಾಜದ ಪ್ರತಿಷ್ಠಿತ ವ್ಯಕ್ತಿಯ ಚಿತ್ರಣವನ್ನು ವೈವಿಧ್ಯಪೂರ್ಣವಾಗಿ ನೀಡುತ್ತದೆನ್ನಬೇಕು".[1] ತಮ್ಮ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಯಾರು ಶ್ರಮಿಸುತ್ತಾರೆ, ಅವರೆಲ್ಲರೂ ಹೋರಾಟಗಾರರೇ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳುತ್ತಾ ತಮ್ಮ ಹಾಗೂ ಸಮಾಜದ ಬಗೆಗೆ ಚಿಂತನೆ ನಡೆಸುತ್ತಾ ಮುಂದಿನ ಪೀಳಿಗೆಯ ಅಭಿವೃದ್ಧಿಯನ್ನು ಅಲೋಚಿಸುತ್ತ ಯೋಜನೆಗಳನ್ನು ರೂಪಿಸಿಕೊಂಡು ದುಡಿಯುವ ಶ್ರಮ ಜೀವಿಗಳು ದಲಿತರು. ತಮ್ಮ ಬದುಕಿನಲ್ಲಿ

ಅನುಭವಿಸಿದ ನೋವು ದುಃಖ ದುಮ್ಮಾನಗಳನ್ನು ಬದಿಗೊತ್ತಿ ತಮ್ಮವರಿಗಾಗಿ, ಜನಾಂಗದ ಅಭಿವೃದ್ಧಿಗೆ ದುಡಿಯುತ್ತಾರೆ.

### ಕನ್ನಡ ಭಾಷೆಗೆ ಅನುವಾದಗೊಂಡಿರುವ ಆತ್ಮಕಥೆಗಳು

ಕೆಲವು ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ಆತ್ಮಕಥೆಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಉಳಿದವುಗಳಲ್ಲಿ ಕೆಲವು ಕೃತಿಗಳು ದೊರೆಯುತ್ತಿಲ್ಲವಾದ್ದರಿಂದ ಅವುಗಳನ್ನು ಈ ಅಧ್ಯಯನದಲ್ಲಿ ಸೇರಿಸಿಲ್ಲ. ಪ್ರಮುಖವಾಗಿ ಅಂಬೇಡ್ಕರ್ ಚಿಂತನೆ ಹೋರಾಟವನ್ನು ಅಳವಡಿಸಿಕೊಂಡವರ ಆತ್ಮಕಥೆಗಳ ಹಿನ್ನೆಲೆಯಲ್ಲಿ ಬಳಸಿಕೊಂಡು ಅಧ್ಯಯನ ಕೈಗೊಂಡಿದ್ದೇನೆ.

ಪ್ರಖ್ಯಾತ ವಿಜ್ಞಾನಿ ಡಾ. ನಾಮದೇವ ನಿಮ್ಗಾಡೆ ಅವರ 'ಆತ್ಮಕಥೆ' ಎಂಬ ಆತ್ಮಕಥೆಯನ್ನು 'ಹುಲಿಯ ನೆರಳಿನೊಳಗೆ: ಅಂಬೇಡ್ಕರ್‌ವಾದಿಯ ಆತ್ಮಕಥೆ' ಎಂಬ ಶೀರ್ಷಿಕೆಯಲ್ಲಿ ಬಿ.ಶ್ರೀಪಾದ ಭಟ್ ಅವರು ಕನ್ನಡಕ್ಕೆ ತಂದಿದ್ದಾರೆ. ಭಾರತೀಯ ಭಾಷೆಗಳಿಂದಲೂ ಕನ್ನಡಕ್ಕೆ ಅನುವಾದಗೊಂಡಿರುವ ಆತ್ಮಕಥೆಗಳಲ್ಲಿ ಲಕ್ಷ್ಮಣ ಗಾಯಕವಾಡರ 'ಉಚಲ್ಯಾ', ಮಾದವಿ ದೇಸಾಯಿ ಅವರ 'ಕುಣಿಯೇ ಘುಮ'ವನ್ನು ಕನ್ನಡಕ್ಕೆ ಚಂದ್ರಕಾಂತ ಪೋಕಳೆ ಅವರು ಅನುವಾದಿಸಿದ್ದಾರೆ. ಶರಣಕುಮಾರ ಲಿಂಬಾಳೆ ಅವರ 'ಅಕ್ರಮ ಸಂತಾನ', ದಾದಾ ಸಾಹೇಬ್ ಮಲ್ಲಾರಿ ಮೋರೆ ಅವರ 'ಗಬಾಳ'ವನ್ನು ಕನ್ನಡಕ್ಕೆ ದು.ನಿಂ.ಬೆಳಗಲಿ ಅವರು ಅನುವಾದಿಸಿದ್ದಾರೆ. ಎಸ್.ಕೆ.ಥೊರಟ್ ಅವರ 'ಬಾಲ್ಯದಿಂದ ಪ್ರಾಯಕ್ಕೆ' ಎಂಬುದಾಗಿ ಕನ್ನಡಕ್ಕೆ ನಗರಗೆರೆ ರಮೇಶ್, ಗಂಗಾಧರ ಮೂರ್ತಿ: ನರೇಂದ್ರ ಜಾದವ್ ಅವರ 'ಬಹಿಷ್ಕೃತ'ವನ್ನು ಸುಮಾದ್ವಾರಕನಾಥ್; ಭಗವಾನ್‌ದಾಸ್ ಅವರ 'ಭಂಗಿಜನ ಕಥಾ'ವನ್ನು ಕೆ. ನಾರಾಯಣ ಸ್ವಾಮಿಯವರು; ಭೀಮರಾವ್ ಗಸ್ತಿ ಅವರ 'ವಾಲ್ಮೀಕಿ'ಯನ್ನು ಸರಜೂ ಕಾಟ್ಕರ್; ಭಾಮ ಅವರ 'ಕರಕ್ಕು' ಆತ್ಮಕಥೆಯನ್ನು ಎಸ್. ಫ್ಲೋಮಿನ್‌ದಾಸ್; ದಯಾಪವಾರ್ ಅವರ 'ಬಲುತ' ಆತ್ಮಕಥೆಯನ್ನು ಪ್ರೊ. ಚಂದ್ರಕಾಂತ ಪೋಕಳೆ; ಬೇಬಿ ಹಾಲ್ದಾರ್ ಅವರ 'ನೋವು ತುಂಬಿದ ಬದುಕು' ಆತ್ಮಕಥೆಯನ್ನು ಜಿ. ಕುಮಾರಪ್ಪ ಅವರು ಕನ್ನಡ ಭಾಷೆಗೆ ಅನುವಾದಿಸಿದ್ದಾರೆ.

### ಕನ್ನಡದ ದಲಿತ ಆತ್ಮಕಥೆಗಳು

ಕನ್ನಡ ದಲಿತ ಆತ್ಮಕಥೆಗಳಲ್ಲಿ ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ (೧೯೯೪), ಡಾ.ಸಿದ್ಧಲಿಂಗಯ್ಯನವರ ಊರುಕೇರಿ ೧ (೧೯೯೭) ಭಾಗ ೨ (೨೦೦೬) ಭಾಗ ೩ (೨೦೧೮), ತುಂಬಾಡಿ ರಾಮಯ್ಯ ಅವರ ಮಣೆಗಾರ (೧೯೯೯) ಮುತ್ತಿನ ಜೋಳ (೨೦೦೭), ಕೆ.ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ (೨೦೦೦), ಲಕ್ಷ್ಮಣ್ ಅವರ ಸಂಭೋಳಿ (೨೦೦೩), ಮುಳ್ಳೂರು ನಾಗರಾಜ್ ಅವರ ಮಾಮರದ ಮೇಲೊಂದು ಕೋಗಿಲೆ (೨೦೦೪), ಶೈಲಜಾ ನಾಗರಘಟ್ಟ ಅವರ ಕಿಚ್ಚಿಲ್ಲದ ಬೇಗೆ (೨೦೦೫), ಎಸ್.ಪಿ. ಸುಳ್ಳದ್ ಅವರ ಅಸ್ಪೃಶ್ಯನ ಭವಾನುಭವ (೨೦೦೬), ಹಣಮಂತರಾವ್ ಬಿ.ದೊಡ್ಡಮನಿ ಅವರ ಪಂಚಮ (೨೦೦೯), ಪರಶಿವಮೂರ್ತಿ ಅವರ "ಗೆರೆ ದಾಟಿದ ಮೇಲೆ" (೨೦೦೯), ಶಿರಗಾನಹಳ್ಳಿ ಶಾಂತನಾಯ್ಕ ಅವರ "ಲಮಾಣಿ" (೨೦೧೦), ಜಿ.ಸಂಜೀವರಾಯ ಅವರ ಹೊರಬೀಡು (೨೦೧೧), ದು.

ಸರಸ್ವತಿ ಅವರ ಈಗೇನ್ ಮಾಡಿರಿ? (೨೦೦೧), ಡಿ. ಗೋವಿಂದ ದಾಸರ "ನನ್ನ ಆತ್ಮಕಥೆ" (೨೦೦೭), ಎ.ಎಂ. ಮದರಿ ಅವರ ಗೊಂದಲಿಗ್ಯಾ (೨೦೧೨), ಕುಪ್ಪೆನಾಗರಾಜ್ ಅವರ ಅಲೆಮಾರಿ ಅಂತರಂಗ (೨೦೧೩), ಎನ್. ನರಸಿಂಹಯ್ಯ ಅವರ ನನ್ನ ನೋವು ನಲಿವು (ಎರಡು ಸಂಪುಟ), ಸಮತಾ ದೇಶಮಾನೆ ಅವರ ಮಾತಂಗಿ ದೀವಟಿಗೆ (೨೦೧೫), ಎಲ್. ಹನುಮಂತಯ್ಯನವರ "ಒಂಟಿಕಾಲಿನ ನಡಿಗೆ" (೨೦೧೫) ಪ್ರಮುಖವಾದ ಆತ್ಮಕಥೆಗಳಾಗಿವೆ. ಇವುಗಳು ದಲಿತ ಆತ್ಮಕಥೆಗಳಾದರೂ ಇವುಗಳಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯ ಆತ್ಮಕಥೆಗಳಿವೆ. ಇವರೆಲ್ಲರೂ ದಲಿತರಾದರೂ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ಆತ್ಮಕಥೆಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ದಲಿತರಲ್ಲಿಯೂ ಅಸ್ಪೃಶ್ಯ ಮತ್ತು ಸ್ಪರ್ಶ ಎಂಬ ವಿಭಾಗಗಳಿದ್ದು, ಅವರಲ್ಲಿ ಅಸ್ಪೃಶ್ಯರು ಮುಟ್ಟಿಸಿಕೊಳ್ಳದವರು, ಊರಿನಲ್ಲಿ ವಾಸಿಸದೆ ಊರಿನ ಕೊನೆಯಲ್ಲಿದ್ದವರಾಗಿದ್ದಾರೆ. ಸ್ಪರ್ಶರು ಊರಿನಲ್ಲಿ ಓಡಾಡಿಕೊಂಡು ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡು ಸವರ್ಣೀಯರ ಹಾಗೂ ಮೇಲು ಜಾತಿಯವರ ಮನೆಯ ಮುಂಬಾಗಿಲಿನವರೆಗೆ ಹೋಗಿ ಬರುತ್ತಿದ್ದವರು ಎಂದು ಅವರ ಆತ್ಮಕಥೆಗಳೇ ಹೇಳುತ್ತವೆ. ಆದರೂ ಇವರೆಲ್ಲರೂ ದಲಿತರೇ ಆಗಿದ್ದರೂ ಬಡವರಾಗಿದ್ದರು ಕಷ್ಟಪಟ್ಟು ದುಡಿಯುತ್ತಿದ್ದರು. ಅಂಬೇಡ್ಕರ್ ಚಿಂತನೆಯ ಪ್ರಕಾರವಾಗಿ ಇವರೆಲ್ಲರನ್ನು ದಲಿತರೆಂದೇ ಗುರುತಿಸಲಾಗಿದೆ.

### ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ : ೧೯೯೪

'ಗೌರ್ಮೆಂಟ್ ಬ್ರಾಹ್ಮಣ' ಕನ್ನಡದ ಮೊದಲ ಆತ್ಮಕಥೆಯೆಂದೇ ಹೇಳಬಹುದು. ೧೯೯೪ರಲ್ಲಿ ಪ್ರಕಟಗೊಂಡ ಈ ಕೃತಿಯು ಜಾತಿ ಸೂಚಕ ಸಮಾಜದ ಎಲ್ಲಾ ಕಗ್ಗಂಟುಗಳೊಂದಿಗೆ ತೆರೆದುಕೊಳ್ಳುತ್ತಾ ಸಾಗುತ್ತದೆ. ಇಪ್ಪತ್ತೊಂದು ಅಧ್ಯಾಯಗಳಲ್ಲಿ ರಚಿತವಾಗಿರುವ ಈ ಕೃತಿಯು ಬಾಲ್ಯ, ಶಿಕ್ಷಣ, ಸಮಾಜದ ನಿಂದನೆಯನ್ನು, ವೈಯಕ್ತಿಕ ಬದುಕಿನಲ್ಲಿ ನುಸುಳಿದ ಜಾತಿವಾಚಕಗಳನ್ನು ಚಿತ್ರಿಸುತ್ತಾ ಸಾಗುತ್ತದೆ. ಜಾತಿನಿಂದನೆ ದಲಿತ ಸಮಾಜದ ಪ್ರತಿಯೊಬ್ಬರ ಮುಂದೆ ಕಾಣಲ್ಪಡುವ ಅಂಶ. ಹೆಸರಿನ ಮೂಲಕವಾಗಿಯೂ, ವೃತ್ತಿಯ ಮೂಲಕವಾಗಿಯೂ ಜಾತಿಯನ್ನು ಗುರುತಿಸಿ ಕರೆಯುವ, ಹೀಯ್ಯಾಳಿಸಿ ಕರೆಯುವ ಸಂದರ್ಭಗಳೇ ಹೆಚ್ಚು ಕಂಡುಬರುತ್ತದೆ. ದಲಿತನೆಂಬ ಕಾರಣಕ್ಕೆ ಅವನು ಅವಮಾನಕ್ಕೆ ಯೋಗ್ಯ ಎಂಬಂತೆ ಎಲ್ಲರ ಎದುರಿನಲ್ಲಿ ಅವರನ್ನು ನಿಂದನೆಗೆ ಒಳಗು ಮಾಡುವ ಸಂದರ್ಭಗಳೇ ಹೆಚ್ಚು. ಅಂಬೇಡ್ಕರ್ ಅವರ ಪ್ರಭಾವ ಮತ್ತು ಅವರು ನೀಡಿದ ಅರಿವಿನಿಂದಾಗಿ ದಲಿತ ಆತ್ಮಕಥೆಗಳು ಹುಟ್ಟಿಕೊಂಡಿವೆ. 'ಗೌರ್ಮೆಂಟ್ ಬ್ರಾಹ್ಮಣ' ಕೃತಿಯು ಈ ಅಂಶಗಳನ್ನು ಕಟ್ಟಿಕೊಡುತ್ತದೆ. ಜಾತಿ ಸಂಬಂಧಿತವಾಗಿ ದಲಿತರು ಎಂಬ ಕಾರಣಕ್ಕಾಗಿ ಮೇಲ್ಜಾತಿಯ ಜನರಿಂದ ಕಂಡ ಅನುಭವಿಸಿದ ಅವಮಾನದ ಸಂದರ್ಭಗಳನ್ನು ಹೇಳುತ್ತಾ ಹೋಗುತ್ತಾರೆ. 'ಹೆಣದ ಮೇಲಿನ ದುಡ್ಡು ಮತ್ತು ಮದುವೆಯ ಊಟ' ಎಂಬ ಭಾಗವು ದಲಿತರ ವಾಸ್ತವ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. ಮೇಲುಜಾತಿಯ ಜನರು ಸತ್ತಾಗ ಅವರು ಸತ್ತ ಸುದ್ದಿಯನ್ನು ಅವರ ಸಂಬಂಧಿಕರಿಗೆ ತಿಳಿಸುವ ಕೆಲಸವನ್ನು ಅಸ್ಪೃಶ್ಯರು ದಲಿತರು ಮಾಡುತ್ತಿದ್ದರು ಎಂಬುದನ್ನು ಅಂಬೇಡ್ಕರ್ ಅವರು ಗುರುತಿಸುತ್ತಾರೆ. ಹಾಗೆಯೇ ಈ ಆತ್ಮಕಥೆಯಲ್ಲಿಯೂ "ಹೆಣ ತೆಗೆದುಕೊಂಡು ಹೋಗುವಾಗ

ಅವರು ನಮ್ಮನ್ನು ಅಷ್ಟೇ ಜಾಗರೂಕತೆಯಿಂದ ಗಮನಿಸುತ್ತಿದ್ದರೆಂದು ತೋರುತ್ತದೆ. ನಾವು ಬಂದಿರುವುದನ್ನು ಖಚಿತಪಡಿಸಿಕೊಂಡೇ ಹೆಣವನ್ನು ಮೇಲಕ್ಕೆ ಎತ್ತುತ್ತಿದ್ದರು. ಹೆಣದ ಮೇಲೆ ಅವರು ತೂರಿರುವ ಹಣ ನೆಲಕ್ಕೆ ಬಿದ್ದ ಮೇಲೆ ಕಚ್ಚಾಡಿ ಎತ್ತಿಕೊಳ್ಳುವುದು ದಲಿತರ ಕೆಲಸ. ದಲಿತರು ಇರದೆ ಹೋದರೆ ಅವರು ತೂರುವ ಹಣಕ್ಕೆ ಬೆಲೆಯಾದರೂ ಏನು? ಅವರು ಹಣ ತೂರಬೇಕು, ತೂರಿದ ಹಣ ಉರುಳುತ್ತಾ ಹೆಣ ಹೊತ್ತವರ ಕಾಲಲ್ಲಿ, ಹಿಂದೆ ಅಳುತ್ತ ಬರುವವರ ಕಾಲಲ್ಲಿ ಹೋಗಬೇಕು. ಅವರು ಅದನ್ನು ಎತ್ತಿಕೊಳ್ಳಬೇಕು".[2] ಮೇಲು ಜಾತಿಯ ಜನರು ದಲಿತರನ್ನು ಕಾಣುವ ದೃಷ್ಟಿಕೋನವೆ ಬೇರೆಯಾಗಿದೆ. ಅವರಿಂದ ದುಡಿಸಿಕೊಂಡು ಬದುಕುವವರು, ಅವರ ಮನೆಯಲ್ಲಿ ಸತ್ತವರ ಪಾಪ ಪರಿಹಾರವನ್ನು ದಲಿತರ ಮುಖಾಂತರ ಮಾಡಿಕೊಳ್ಳಲು ಬಯಸುವ ಆಲೋಚನೆ ಅತ್ಯಂತ ಕೆಳಮಟ್ಟದ್ದು ಅನಿಸುತ್ತದೆ. ಸತ್ತ ವ್ಯಕ್ತಿಯ ದೇಹಕ್ಕೆ ಇರುವ ಪ್ರಾಮುಖ್ಯತೆ ಬದುಕಿ ನಿಮ್ಮನ್ನ ಬದುಕಿಸುತ್ತಿರುವವರಿಗೆ ಇಲ್ಲವೇ ? ಎಂಬ ಪ್ರಶ್ನೆ ಮೂಡುತ್ತದೆ. ದಲಿತರಿಗೆ ಊಟವನ್ನು ಹಾಕುವಾಗಲೂ ಅವರನ್ನು ಎಲ್ಲರು ಊಟ ಮಾಡಿದ ನಂತರ ಕೊನೆಯಲ್ಲಿ ಕೂರಿಸಿ ಊಟವನ್ನು ಬಡಿಸುವುದು. ಅನ್ನವನ್ನು ಕದ್ದು ತೆಗೆದುಕೊಂಡು ಹೋಗುತ್ತಾರೆ ಎಂಬುದನ್ನು ಮತ್ತೆ ಪರೀಕ್ಷಿಸುವುದು. ಅತ್ಯಂತ ಹೇಯವೆನಿಸುತ್ತಿದೆ. 'ಹಸಿದವನಿಗೆ ಅನ್ನ' ನೀಡುವ ಮಾನವೀಯ ನೆಲೆಯ ನಾಣ್ನುಡಿಗಳನ್ನು ಮರೆತವರು ಇಲ್ಲಿ ಕಂಡುಬರುತ್ತಾರೆ. ಮಾಲಗತ್ತಿಯವರು ಶಾಲೆಯಲ್ಲಿ ಓದುತ್ತಿರುವಾಗ ಅವರನ್ನು ನೆಲದ ಮೇಲೆ ಕೂರಿಸುತ್ತಾರೆ. ಶಾಲೆಯ ಕೊಠಡಿಯ ಕಸಗುಡಿಸಿ ಸ್ವಚ್ಛಗೊಳಿಸುವ ಕೆಲಸ ಒಬ್ಬೊಬ್ಬರದಾಗಿರುತ್ತದೆ. ಮಾಲಗತ್ತಿಯವರ ಸರದಿ ಬಂದಾಗ ಅವರ ಹೆಸರನ್ನು 'ಮಾಲಕತ್ತಿ' ಎಂದು ಬರೆದು ಅವಮಾನಿಸುತ್ತಾರೆ. ಆದರೆ 'ಕತ್ತಿ' ಎಂಬುದನ್ನು 'ಗತ್ತಿ' ಎಂಬುದಾಗಿ ಮಾಡಲು ಹೋಗಿ ಗುರುಗಳ ಕೋಪಕ್ಕೆ ಗುರಿಯಾಗುತ್ತಾರೆ. 'ಕತ್ತಿ ಅಂತ ಬರದ್ರ ಏನಾಯ್ತು ಗತ್ತಿ ಅಂತ ಮಾಡಕ ಹೋಗಿದ್ಯಾ ; ಮಗಾ ಬರ್ರ್ಯಾಕ ಬಂತು ಅಂತ ತಿದ್ದಾಕ ಹೋಗ್ಯಾನ,,,,,, ಕತ್ತಿ,,,,,,, ಕತ್ತಿನೇ,,,,,,, ಕತ್ತೆಲ್ಲರ ಕುದುರ್ಯಾಕ್ಕದೇನ ? ಕತ್ತಿಗೆಲ್ಲ ಯಾಕ ಬೇಕು ಹತ್ತಿಕಾಳ ನೀರ?[3] ಎಂದು ಬೈದು ಹೊಡೆಯುತ್ತಾರೆ. ಜಾತಿಯ ಹೆಸರನ್ನು ಮನುಷ್ಯರಿಗಲ್ಲದೆ ಪ್ರಾಣಿಗಳಿಗೂ ಸೇರಿಸಿ ಹೇಳುತ್ತಾ ಮೇಲ್‌ಜಾತಿಯ ಮನೆಯ ಯಾವುದೇ ಪ್ರಾಣಿಗಳು ಕೆಳಜಾತಿಯ ಪ್ರಾಣಿಗಳ ಜೊತೆಯಾಗಬಾರದು ಎಂಬ ನಿಯಮವನ್ನು ಪಾಲಿಸುತ್ತಾರೆ. ದಲಿತರು ನೀರು ಮುಟ್ಟುವುದನ್ನು ವಿರೋಧಿಸುವ ಮೇಲು ಜಾತಿಯ ಹೆಂಗಸರ ಚಿತ್ರಣ, "ಜನಿವಾರ ಶಿವದಾರಗಳ ಮಹಾತ್ಮೆ' ಯಲ್ಲಿ ಬರುವ "ಸ್ವಾತಂತ್ರ್ಯದ ಸಂದರ್ಭದಲ್ಲಿಯೇ ನಮ್ಮ ಮನೆಯವರು ವೀರಶೈವ ಮತಕ್ಕೆ ಮತಾಂತರ ಹೊಂದಿದವರು. ಇವರಿಗೂ ಮೇಲು ಜಾತಿಯವರೆನಿಸಿಕೊಳ್ಳುವ ಬಯಕೆ. ಹೀಗಾಗಿ ದೀಕ್ಷೆಯನ್ನು ಪಡೆದುಕೊಂಡರು. ಶಿವದಾರದ ಜೊತೆಗೆ ಬಗಲಲ್ಲಿ ಲಿಂಗವೂ ಜೋತಾಡತೊಡಗಿತು".[4] ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನ ಮಾರ್ಗದರ್ಶನ, ಅಂಬೇಡ್ಕರ್ ಅವರ ಮತಾಂತರದ ಸಂದರ್ಭವನ್ನು ನೆನಪಿಸುತ್ತದೆ. ಜನರು ತಮ್ಮನ್ನು ಗುರುತಿಸುವ ತಮಗೂ ಗೌರವ ನೀಡಬೇಕು ಎಂದು ಬಯಸುವ ಸಂದರ್ಭವನ್ನು ಇಲ್ಲಿ ಕಾಣಬಹುದು. "ಮಾನವ ಸಮಾಜದಲ್ಲಿ ಮನುಷ್ಯ ಸಂಬಂಧಗಳೆಲ್ಲ ಸತ್ತು ಹೋಗಿವೆ."[5] ಸಾಮಾಜಿಕವಾದ ಪರಿಸರದಲ್ಲಿನ

ಮನುಷ್ಯ ಸಂಬಂಧಗಳು ಕಡೆಯಾಗಿವೆ ಎಂದುಕೊಳ್ಳುವುದಕ್ಕಿಂತ ಅವುಗಳನ್ನು ಇನ್ನೂ ಕಾಣಬಹುದು ಎಂಬ ಸಂದರ್ಭಗಳು ಇರುತ್ತವೆ. ಮೇಲ್‌ಜಾತಿಯವರೆಂದು ಹೇಳಿಕೊಳ್ಳುವ ಧೈರ್ಯವಿಲ್ಲದೆ ಅವರ ಆಚಾರ ಕ್ರಮಗಳನ್ನು ಪಾಲಿಸಲು ಸಾಧ್ಯವಾಗದೆ ಹಿಂಸೆಗೆ ಒಳಗಾಗುವ ಸಂದರ್ಭವು ಬರುತ್ತದೆ. ರಾಘವೇಂದ್ರ ಸ್ವಾಮಿಯ ಭಕ್ತರಂತೆ ಅಲ್ಲಿಗೆ ಬಂದಾಗ ಅಲ್ಲಿನ ನಿಯಮಗಳನ್ನು ಪಾಲಿಸಲಾಗದೆ. ಅಂತಃಸಾಕ್ಷಿಗೆ ವಿರುದ್ಧವಾಗಿ ನಡೆಯಲಾಗದೆ. ತಮ್ಮ ವಾಸ್ತವತೆ ಅರಿತು ಅಲ್ಲಿಂದ ಹೋಗುವ, ತಾವು ಇರುವ ಪರಿಸ್ಥಿತಿಯನ್ನು ಇದ್ದಹಾಗೆ ಸ್ವೀಕರಿಸುವ ಮನೋಭಾವ ಮಾಲಗತ್ತಿ ಅವರಿಗೆ ಅಲ್ಲಿಂದಲೇ ಮೂಡಿಬಂದಿತ್ತು.

ನಂತರದ ಭಾಗಗಳಲ್ಲಿ ಪ್ರೀತಿಸಿದ ಹುಡುಗಿ ಜಾತಿಯನ್ನು ಮತ್ತೆ ಮತ್ತೆ ನೆನಪಿಸುತ್ತಾ ದೂರವಾಗುವ ಕಾರಣವನ್ನು ಸೂಕ್ಷ್ಮವಾಗಿ ಹೇಳುತ್ತಾ ಎಲ್ಲಾ ನೆಪಗಳನ್ನು ಅವರ ಮೇಲೆಯೇ ಹೊರಿಸಿ ಮದುವೆಯಾಗಿ ಹೋಗುವುದನ್ನು ನಿರೂಪಿಸಿದ್ದಾರೆ. ಜಾತೀಯತೆಯ ಮೋಹ ಎಲ್ಲರನ್ನು ಆವರಿಸಿ, ಪ್ರೀತಿಸುವಾಗ ಇಲ್ಲದ ಜಾತಿಯ ಭಯ ಮದುವೆಯ ಸಂದರ್ಭಕ್ಕೆ ಬಂದಾಗ ಕಾಡುವುದನ್ನು ಚಿತ್ರಿಸಿದ್ದಾರೆ. ಆದರೆ ಅವರೆಲ್ಲರ ದೃಷ್ಟಿಯಲ್ಲಿ ಮನುಷ್ಯನನ್ನು ಪ್ರೀತಿಸದ, ಜಾತಿಯನ್ನು ಮಾತ್ರವೇ ಪ್ರೀತಿಸುವ ಮನಸ್ಸು ದೊಡ್ಡದಾಗಿ ಗೋಚರಿಸುತ್ತದೆ. ಕೆಳಜಾತಿಯವರನ್ನು ನಾವು ಪ್ರೀತಿಸಿದ್ದೇ ಅವರ ಪಾಲಿನ ಶ್ರೇಷ್ಠತೆ ಎಂಬಂತೆ ಬಿಗುವುದನ್ನು ಕಂಡಾಗ ಮನುಷ್ಯ ಎಂತಹ ಕೆಳಜಾತಿಯಲ್ಲಿದ್ದಾನೆ ಎನಿಸುತ್ತದೆ. 'ಪ್ರತಿಭಾವಂತರು ಹುಟ್ಟುವುದೇ ಕೆಳಜಾತಿಯಲ್ಲಿ' ಎಂಬಂತೆ ದಲಿತನೊಬ್ಬ ಬುದ್ಧಿವಂತ ಉತ್ತಮವಾದ ವಿದ್ವತ್ ಅವನಲ್ಲಿದೆ ಎಂದಾಗ ಅವನ ಹಿಂದೆ ಬರುವವರು ಸಂಖ್ಯೆ ಹೆಚ್ಚಿರುತ್ತದೆ.

ಅರವಿಂದ ಮಾಲಗತ್ತಿಯವರು ಶಿಕ್ಷಣ ಪಡೆದು ಒಂದು ಸ್ಥಾನವನ್ನು ಪಡೆದು ಜನರು ಅವರನ್ನು ಗುರುತಿಸಿ, ಅವರ ಸ್ನೇಹಕ್ಕಾಗಿ, ಅವರಲ್ಲಿನ ವಿದ್ವತ್‌ನ್ನು ತಿಳಿದು ಬೇಕೋ ಬೇಡವೋ ಎಂಬಂತೆ ವರ್ತಿಸುತ್ತಾರೆ. 'ಅವರು ಬೇಕು ಅವರ ಜಾತಿಬೇಡ' ಎಂಬಂತೆ ಅವರನ್ನು ತಮ್ಮದೇ ಆದ ಚೌಕಟ್ಟಿನಲ್ಲಿ ಕಟ್ಟಿಹಾಕುವ ಪ್ರಯತ್ನವನ್ನು ಮಾಡುತ್ತಾರೆ. 'ಪ್ರಗತಿಪರ ಚಿಂತಕರ ಆಲೋಚನೆಗಳು ವರ್ತನೆಗಳು ಹೇಗಿರುತ್ತವೆ ಎಂಬುದನ್ನು 'ಮಾರ್ಕ್ಸ್‌ವಾದ ಮತ್ತು ಎಂಜಲು ತಟ್ಟೆ' ಎಂಬ ಭಾಗದಲ್ಲಿ ವಿವರಿಸುತ್ತಾರೆ. 'ಅವರು ಊಟ ಮಾಡಿದ ತಟ್ಟೆಯನ್ನು ಅವರೇ ತೊಳೆದಿಡುವಂತೆ ಮಾಡುವ, ಯಾವುದೇ ಅನುಮಾನ ಬರದ ರೀತಿ ವರ್ತಿಸುವ ಚಿಂತಕರ ಮನೋಭಾವವನ್ನು ಸೂಕ್ಷ್ಮವಾಗಿ ವಿವರಿಸುತ್ತಾರೆ.' ಜನ ಅವರನ್ನು ಮುಟ್ಟಿಸಿಕೊಳ್ಳಲು ಹಿಂಜರಿಯುವಾಗ ಕೂದಲನ್ನು ಕತ್ತರಿಸುವ ಕೆಲಸವನ್ನು ಮಾಡಿಕೊಳ್ಳುವ ದಿಟ್ಟ ಮನೋಸ್ಥೈರ್ಯ ಅವರಲ್ಲಿ ಗೋಚರಿಸುತ್ತದೆ. ಹಾಗೆಯೇ 'ನನ್ನಪ್ಪನ ಮಾಸ್ತರ ನೌಕರಿ ಮತ್ತು ಪಂದ್ರಾ ಆಗಸ್ಟ್' ಎಂಬ ಭಾಗದಲ್ಲಿಯ ತಂದೆಯವರು ಹೇಳುವ ಸ್ವಾತಂತ್ರ್ಯವೆಂಬುದು, ತಮ್ಮ ಹಕ್ಕುಗಳ ಸ್ವಾತಂತ್ರ್ಯವೆಂಬ ಸಂತೋಷ ಅವರಲ್ಲಿ ಗೋಚರಿಸುತ್ತದೆ. ಸ್ವಾತಂತ್ರ್ಯದ ಸಂದರ್ಭವನ್ನು ವ್ಯಕ್ತಪಡಿಸುವ ರೀತಿಯನ್ನು ಹೇಳುತ್ತಾರೆ "ಕೇರಿಯ ಹುಡುಗರನ್ನು ಸೇರಿಸಿಕೊಂಡು ಕೊಡ ಹಗ್ಗದೊಂದಿಗೆ ನೀರಿಗೆ ಹೊರಟರಂತೆ. ಅದು ಮಧ್ಯಾಹ್ನದ ಉರಿ ಬಿಸಿಲು ಬೇರೆ! ಹೋದವರೇ ಮೊದಲು ಮಠದ ಭಾವಿಗೆ ಹಗ್ಗವನ್ನು ಹಾಕಿ ನೀರು ಸೇದಿದರಂತೆ. ಎಲ್ಲ ಜನತೆ 'ಅವಕ್ಕಾಗಿ' ಇವರನ್ನೇ ನೋಡುತ್ತಿದ್ದರಂತೆ. ಇವರ ಕುಣಿದಾಟ,

ಜಿಗಿದಾಟ ನಿಂತು ನೋಡುವ ಹಾಗೆ ಇರುತ್ತಿತ್ತಂತೆ ! ಮೇಲು ಜಾತಿಯ ಜನತೆಗೆ ಆಶ್ಚರ್ಯ, ದಿಗಿಲು ಎರಡೂ ಏಕಕಾಲಕ್ಕೆ ಉಂಟಾಗಿರಬೇಕು. ಬಾವಿಯಿಂದ ನೀರು ಜಗ್ಗಿದ ಈ ಜನ ಮನೆಗೂ ತೆಗೆದುಕೊಂಡು ಹೋಗುತ್ತಿರಲಿಲ್ಲವಂತೆ 'ಬಾವಿಯಿಂದ ನೀರು ಜಗ್ಗುವುದು, ದಬದಬನೆ ನೆಲಕ್ಕೆ ಚೆಲ್ಲುವುದು' ಹೀಗೆ ಒಂದು ಬಾವಿಯಲ್ಲ, ಎರಡು ಬಾವಿಯಲ್ಲ? ಊರಲ್ಲಿ ಇರುವ ಎಲ್ಲ ಬಾವಿಗಳನ್ನು ಮುಟ್ಟಿ ಮುಟ್ಟಿ ಗಡಿಗಡಿಗೆ ಹಗ್ಗ ಹಾಕಿ ನೀರು ತೆಗೆಯುವುದು, ಚೆಲ್ಲುವುದು ಆ ಪಂದ್ರಾ ಆಗಸ್ಟದ ದಿನವೆಲ್ಲ ಇದೇ ಕೆಲಸವೇ ಆಗಿಹೋಗಿತ್ತಂತೆ"[6] ಆದರೆ ಆ ಸಂತೋಷಕ್ಕೆ ತಣ್ಣೀರೆರಚಿದಂತೆ ಮಾರನೇ ದಿನಕ್ಕೆ ಎಲ್ಲವೂ ಬದಲಾಗಿ ಅವರ ಮೇಲೆ ಮಸೆಯುವ ಕಾರ್ಯಗಳು ನಡೆದಿದ್ದವು. ದಲಿತರ ಸ್ವಾತಂತ್ರ್ಯದ ಸ್ಥಿತಿ ಒಂದು ದಿನದ ಸಂಭ್ರಮ ಮಾತ್ರವೇ ಆಗಿತ್ತು. ಬಾಬಾಸಾಹೇಬ್ ಅಂಬೇಡ್ಕರ್ ಅವರು ಚೌಡಾರ್ ಕೆರೆಯ ನೀರನ್ನು ಮುಟ್ಟಿ ಬಂದ ನಂತರ ಅವರ ಅನುಯಾಯಿಗಳ ಮೇಲೂ ಹೇಳಲಾರದ ಆಕ್ರಮಣ ನಡೆಸಿದ್ದ ಸವರ್ಣೀಯರು ಮತ್ತೆಂದು ಅಸ್ಪೃಶ್ಯರು ಹಾಗೆ ಮಾಡದಂತೆ ಶಿಕ್ಷಿಸಿದ್ದರು. ಇವುಗಳು ಏನೇ ಇದ್ದರೂ ಬಾಬಾಸಾಹೇಬರ ನಿರಂತರವಾದ ಹೋರಾಟದ ಫಲದಿಂದಾಗಿಯೇ ದಲಿತರು ಶಿಕ್ಷಿತರಾದರು, ಪ್ರಜ್ಞಾವಂತರಾದರು ಮತ್ತು ಜಾಗೃತರಾದರು. ಅವರು ಕಟ್ಟಿದ ಹೋರಾಟವನ್ನು ಕಂಡು ಮುಂದುವರೆಸುವ ಅನುಯಾಯಿಗಳಾದರು. ದಲಿತ ಸಮಾಜದ ಬಗೆಗಿನ ಕನಸು ಸಾಕಾರಗೊಳ್ಳಲು ಕಾರಣರಾದ ಬಾಬಾಸಾಹೇಬರ ದೂರದೃಷ್ಟಿಯಲ್ಲಿದ್ದದ್ದು ಶಿಕ್ಷಣವೇ ಹೊರತು ಮತ್ಯಾವುದೇ ಚಿಂತನೆಯಲ್ಲ. ಶಿಕ್ಷಣವು ಎಲ್ಲವನ್ನು ಸಾಕಾರಗೊಳಿಸುತ್ತದೇ ಎಂಬುದಕ್ಕೆ ಈ ಆತ್ಮಕಥೆಯು ಸಾಕ್ಷಿಯಾಗಿದೆ.

ಗೌರ್ಮೆಂಟ್ ಬ್ರಾಹ್ಮಣ ಎಂಬುದು ಅಸ್ಪೃಶ್ಯ ಎಂಬ ಅರ್ಥವನ್ನು ಕೊಡುತ್ತದೆ ಎಂದು ಮಾಲಗತ್ತಿ ಅವರೇ ಹೇಳಿದ್ದಾರೆ. ಎಲ್ಲ ರೀತಿಯ ವ್ಯಂಗ್ಯವನ್ನು ಸಹಿಸಿಕೊಂಡು ರಚಿಸಿದ ಅರವಿಂದ ಮಾಲಗತ್ತಿಯವರೇ ಹೇಳುವ ಹಾಗೆ "ಇಲ್ಲಿಯ ಅನುಭವಗಳು ಒಬ್ಬ ಸಾಮಾನ್ಯ ಮನುಷ್ಯನ ಅನುಭವಗಳೇ ಆಗಿವೆ ಎನ್ನುವ ಮಾತನ್ನು ಹೇಳಲಾರೆ. ಆದರೆ ಸಾಮಾನ್ಯ ದಲಿತನೊಬ್ಬನ ಅನುಭವಗಳಾಗಿವೆ ಎನ್ನುವುದನ್ನು ಹೇಳದಿರಲಾರೆ. ಒಬ್ಬ ದಲಿತನಿಗೆ ಇರಬಹುದಾದ ಎಲ್ಲ ಆಸೆ–ಆಕಾಂಕ್ಷೆಗಳು, ಅರೆ–ಕೊರೆಗಳು ನನ್ನಲ್ಲಿವೆ, ನನ್ನ ಬದುಕನ್ನು ನಾನೇ ಓದಬಯಸುತ್ತೇನೆ ಮತ್ತು ಮೊದಲ ಓದುಗನೂ ಆಗಬಯಸುತ್ತೇನೆ".[7] ಗೌರ್ಮೆಂಟ್ ಬ್ರಾಹ್ಮಣ ಆತ್ಮಕಥೆಯ ಮುನ್ನುಡಿಯಿಂದ ಎಂದು ಹೇಳಿದ್ದಾರೆ. ಆತ್ಮಕಥೆಗಳಲ್ಲಿ ವಿಶಿಷ್ಟವಾದ ಅಂಶವನ್ನು ಒಳಗೊಂಡಿದೆ. ಗೌರ್ಮೆಂಟ್ ಬ್ರಾಹ್ಮಣ ಸಮಕಾಲೀನ ಸಮಾಜದ ಮಹತ್ವದ ಕೃತಿಯಾಗಿದೆ.

**ಸಿದ್ಧಲಿಂಗಯ್ಯನವರ ಊರುಕೇರಿ ಭಾಗ ೧, ೨, ಮತ್ತು ೩ (೧೯೯೬, ೨೦೦೬, ೨೦೧೮)**

ಡಾ. ಸಿದ್ಧಲಿಂಗಯ್ಯನವರದು ಹೋರಾಟದ ಬದುಕು. ಅವರ ಆತ್ಮಕಥೆಯು ಮೂರು ಭಾಗಗಳಲ್ಲಿ ಪ್ರಕಟಣೆಯಾಗಿವೆ. ಬಾಲ್ಯ, ಶಿಕ್ಷಣ, ಹೋರಾಟ, ವೃತ್ತಿಜೀವನ, ರಾಜಕೀಯ, ಚಳುವಳಿ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವರು ಇಂದಿಗೂ ದಲಿತಪರವಾದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂಬೇಡ್ಕರ್ ಹಾಗೂ ಮಾರ್ಕ್ಸ್‌ವಾದ ಚಿಂತನೆಗಳಿಂದ ಪ್ರಭಾವಿತರಾಗಿ ಅವರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಮುನ್ನಡೆದರು.

ಊರುಕೇರಿ ಮೊದಲ ಭಾಗವು ೫ ಭಾಗಗಳಲ್ಲಿ ಮೂಡಿದ್ದು ಬಾಲ್ಯಜೀವನದಿಂದ 'ಹೊಲೆ ಮಾದಿಗರ ಹಾಡು' ಕವನ ಸಂಕಲನ ರಚನೆಯವರೆಗೂ ವಿಸ್ತರಿಸಿದೆ. ಬಡತನದ ಬದುಕಿಗೆ ಒಗ್ಗಿಕೊಂಡು ಸಾಗುವ ಒಂದು ಪ್ರಸಂಗವೆಂದರೆ 'ಐನೋರ ಹೊಲ.' ಇದರಲ್ಲಿನ "ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗ ಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನ್ನೊಬ್ಬ ಹಿಂದಿನಿಂದ ಚಾಟಿ ತುರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ"[8] ಎಂದು ಹೇಳುವಾಗ ದಲಿತರ ಮನೆಗಳಲ್ಲಿನ ನೋವು ಮತ್ತು ಹಿಂಸೆಯ ಚಿತ್ರಣ ಗೋಚರಿಸುತ್ತದೆ. ದಲಿತರು ಕಷ್ಟಜೀವಿಗಳು ಆದರೆ ಎತ್ತಿನ ರೀತಿ ದುಡಿಯುವ, ದುಡಿದು ತನ್ನವರ ರಕ್ಷಣೆ ಮಾಡುವ ಬಹುದೊಡ್ಡ ಕನಸು ಕಾಣುವರು. ಅವರ ತಾಯಿ 'ನನ್ನ ಮಗನನ್ನು ಓದಿಸಬೇಕು. ಅವನಿಗೆ ನೆಂಟರು ಬರೆದ ಕಾಗದ ಓದಲು ಬಂದರೆ ಸಾಕು. ಆಮೇಲೆ ಬಿಡಿಸಿ ಬಿಡುತ್ತೇವೆ"[9] ಎಂದು ಹೇಳಿಕೊಳ್ಳುತ್ತಾರೆ. ಅವರಲ್ಲಿ ಬಡತನದಲ್ಲಿಯೂ ಕಷ್ಟಜೀವಿಗಳಾಗಿದ್ದಾಗಿಯೂ ಅವರ ಚಿಂತೆ ಮಗನ ಓದಿನ ಕಡೆಗಿತ್ತು. ಅಷ್ಟು ಹೊತ್ತಿಗಾಗಲೇ ಅವರಿಗೆ ಓದಿನ ಮಹತ್ವ ತಿಳಿದಿತ್ತು. ಅನಕ್ಷರಸ್ಥ ತಂದೆ ತಾಯಿಗಳು ತಾವು ಅಕ್ಷರ ಕಲಿಯಲಿಲ್ಲವೆಂದು ತಮ್ಮ ಮಕ್ಕಳನ್ನು ಹೇಗಾದರೂ ಓದಿಸಬೇಕೆಂದು ಪಣತೊಡುವ ಆಗಿತ್ತು. ಬಹುಶಃ ದಲಿತ ತಂದೆ-ತಾಯಿಗಳು ತಮ್ಮ ಕಷ್ಟದ ಬದುಕು ತಮ್ಮ ಮಕ್ಕಳಿಗೆ ಬರಬಾರದೆಂದು ಆಲೋಚಿಸುವ ದಾಟಿಯೇ ಮಹತ್ವದ್ದು. ಶಿಕ್ಷಣದ ಬಗೆಗೆ ಹೆಚ್ಚಿನ ಅರಿವಿಲ್ಲದಿದ್ದರೂ ಮಕ್ಕಳನ್ನು ಓದಿಸಬೇಕೆಂಬ ಛಲ ತಂದೆ-ತಾಯಿಗೆ ಹೆಚ್ಚಿನ ಪ್ರಮಾಣದಲ್ಲಿಯೇ ಇತ್ತೆಂದು ಹೇಳಬಹುದು. ಹಾಗೆಯೇ ಅವರ ಹೆತ್ತವರು ತಮ್ಮ ಮಕ್ಕಳನ್ನು ಪ್ರೀತಿಯಿಂದ ಸಾಕುವ ರೀತಿಯನ್ನು ಅರಿತಿದ್ದರು 'ದಲಿತರಲ್ಲಿ ಪ್ರೀತಿಗೆ ಕೊರತೆಯಿಲ್ಲ' ಎಂಬಂತೆ ಇರುವ ಅವಕಾಶದಲ್ಲಿ ಮಕ್ಕಳನ್ನು ಸಾಕುವ ಹೊಣೆ ಹೊತ್ತಿದ್ದರು.

ಊರುಕೇರಿ ಆತ್ಮಕಥೆಯು ವಿಭಿನ್ನವಾದ ಕೃತಿ. ಸಿದ್ಧಲಿಂಗಯ್ಯನವರು ತಮ್ಮ ಅನುಭವದ ಕಥೆಯನ್ನು ಹೆಚ್ಚು ಹಾಸ್ಯ ಪ್ರಧಾನವಾಗಿ ಹೇಳುತ್ತಾ ಹೋಗುವುದನ್ನು ಕಾಣಬಹುದು. ಪ್ರತಿಯೊಂದು ಘಟನೆಯಲ್ಲೂ ಹಾಸ್ಯದಷ್ಟೇ ನೋವಿದೆ ಎಂಬುದನ್ನು ಈ ಆತ್ಮಕಥೆಗಳಲ್ಲಿ ದಲಿತ ಸಮಾಜದ ಒಟ್ಟಾರೆ ಚಿತ್ರಣವನ್ನೂ ಕಟ್ಟಿಕೊಟ್ಟಿದ್ದಾರೆ. "ನನ್ನನ್ನು ಒಂದು ದಿನ ನಮ್ಮ ದೊಡ್ಡಪ್ಪ ಮತ್ತಿತರು ಹಿಡಿಯುವ ಯತ್ನ ಮಾಡಿದರು. ನಾನು ತಪ್ಪಿಸಿಕೊಳ್ಳಲು ಎಷ್ಟು ಯತ್ನಿಸಿದರೂ ಅವರು ಬಿಡಲಿಲ್ಲ. ಹೇಗೋ ಅರಚಾಡುತ್ತಿದ್ದ ನನ್ನನ್ನು ಹೊತ್ತುಕೊಂಡು ಹೋಗಿ ಶಾಲೆಗೆ ಬಿಟ್ಟರು. ನಾನು ಗೊಳೋ ಎಂದು ಅಳುತ್ತಿದ್ದೆ. ಮನೆ, ತಂದೆ, ತಾಯಿ, ಕುರಿ, ದನಗಳ ನೆನಪಾದರಂತೂ ಕಣ್ಣೀರು ಒತ್ತರಿಸಿಕೊಂಡು ಬರುತ್ತಿತ್ತು. ಶಾಲೆಯ ಒಳಗೆ ನನಗಿಂತ ಚಿಂತಾಕ್ರಾಂತರಾದ ಹಲವು ಹುಡುಗರು ಕುಳಿತಿದ್ದರು. ಮಾಸ್ತರು ಬೆತ್ತದಿಂದ ಒಂದು ಏಟು ಕೊಟ್ಟ ಕೂಡಲೇ ನಾನು ಒಮ್ಮೆ ಜೋರಾಗಿ ಅತ್ತು ಸುಮ್ಮನೆ ಕುಳಿತುಕೊಂಡೆ"[10] ಎಂದು ಶಾಲೆಗೆ ಹೋದ ದಿನದ ನೆನಪನ್ನು ಹೇಳಿದ್ದಾರೆ. ಅವರಿಗೆ ಅಂದಿನ ತಮ್ಮ ಮನೆಯಲ್ಲಿ ಸಾಕಿದ್ದ ಕುರಿ ದನಗಳ ಚಿಂತೆ ಕಾಡುತ್ತಿತ್ತು ಎಂದು ಹೇಳುವಾಗ ಅವರಲ್ಲಿ

ಬಾಲ್ಯದ ಶಿಕ್ಷಣ ಹೇಗೆ ಪ್ರಾರಂಭವಾಯಿತ್ತೆಂಬುದು ತಿಳಿಯುತ್ತದೆ. "ಒಂದು ದಿನ ತರಗತಿಯಲ್ಲಿ ಬಡ ವಿದ್ಯಾರ್ಥಿಗಳು ಎದ್ದು ನಿಂತುಕೊಳ್ಳಿ ಎಂದರು. ಕೆಲವರು ಎದ್ದುನಿಂತರು. ಮೇಡಂ ಅವರಿಗೆಲ್ಲ ಸರ್ಕಾರದಿಂದ ಬಂದಿದ್ದ ಉಚಿತ ಪುಸ್ತಕ ಪೆನ್ಸಿಲ್ಲುಗಳನ್ನು ಹಂಚಿದರು. ನಾನು ಹಾಗೇ ಕುಳಿತಿದ್ದೆ. ಮೇಡಂ ನನ್ನನ್ನ ಸ್ಥಿತಿವಂತರ ಹುಡುಗನೆಂದು ಭಾವಿಸಿರಬೇಕು. ಒಂದು ದಿನ ನನ್ನ ತಂದೆ ನನ್ನನ್ನು ಹುಡುಕಿಕೊಂಡು ಶಾಲೆಗೆ ಬಂದನು. ಮೇಡಂ ನನ್ನ ತಂದೆಯನ್ನು ನೋಡಿರಲಿಲ್ಲ. ಅವರಿಗೆ ಬಂದವನು ನನ್ನ ತಂದೆ ಎಂದು ಗೊತ್ತಾಗಿ ತುಂಬಾ ವ್ಯಥೆಪಟ್ಟರು. ಬಡ ವಿದ್ಯಾರ್ಥಿಗಳು ನಿಂತುಕೊಳ್ಳಿ ಎಂದಾಗ ಯಾಕೆ ನಿಲ್ಲಲಿಲ್ಲ ಎಂದು ಕೋಪಗೊಂಡರು. ನನ್ನ ತಂದೆಯ ಹರಕು ಬಟ್ಟೆ, ದೈನ್ಯತೆ, ಕ್ಷೌರವಿಲ್ಲದ ದೈನ್ಯಮುಖ ಆತನನ್ನು ಬಡವನೆಂದು ಹೇಳುತ್ತಿತ್ತು. ಮೇಡಂ ಕೂಡಲೇ ಬಡ ವಿದ್ಯಾರ್ಥಿಗಳಿಗೆ ಕೊಡುವ ಪುಸ್ತಕ ಪೆನ್ಸಿಲ್ಲುಗಳನ್ನು ಆಫೀಸು ರೂಮಿನಿಂದ ತರಿಸಿಕೊಟ್ಟರು. ನಾನು ಅತಿ ಬಡವನ ಮಗನೆಂದು ತಿಳಿದ ಮೇಲೆ ಇನ್ನೂ ಹೆಚ್ಚಿನ ಮಮತೆಯನ್ನು ತೋರಿದರು."[11] ತಮ್ಮ ಸ್ಥಿತಿಯನ್ನು ಯಾವುದೇ ಮುಚ್ಚು ಮರೆಯಿಲ್ಲದೇ ಹೇಳಿಕೊಳ್ಳುತ್ತಾರೆ. ಮುಂದುವರೆದು ಅವರು ಬೆಂಗಳೂರಿಗೆ ಬಂದ ನಂತರದ ಸ್ಥಿತಿಯನ್ನು ಹೇಳುತ್ತಾ ಹೋಗುತ್ತಾರೆ. "ಶ್ರೀರಾಮಪುರದ ದಲಿತ ವಿದ್ಯಾರ್ಥಿ ನಿಲಯದಲ್ಲಿ ನನ್ನ ತಾಯಿ ಕಸಗುಡಿಸುವ ಕೆಲಸಕ್ಕೆ ಸೇರಿಕೊಂಡಳು. ಅದರ ಹೆಸರು ಆರ್. ಗೋಪಾಲಸ್ವಾಮಿ ಅಯ್ಯರ್ ವಿದ್ಯಾರ್ಥಿನಿಲಯ. ಡಿ.ವೆಂಕಟಯ್ಯ ಎಂಬುವವರು ಅದರ ಮೇಲ್ವಿಚಾರಕರು. ವಿದ್ಯಾರ್ಥಿಗಳಿಗೆ ಊಟ ಬಡಿಸಿ ಆದ ಮೇಲೆ ಅಲ್ಲಿಯ ಕೆಲಸಗಾರರಿಗೂ ಊಟ ಕೊಡುತ್ತಿದ್ದರು. ಅವರು ಕೊಡುತ್ತಿದ್ದ ಮುದ್ದೆ ಸಾರನ್ನು ನನ್ನ ತಾಯಿ ಮಧ್ಯಾಹ್ನ, ರಾತ್ರಿ ಮನೆಗೆ ತರುತ್ತಿದ್ದಳು". ನನ್ನ ತಾಯಿ ಕೆಲಸ ಮಾಡುತ್ತಿದ್ದ ಹಾಸ್ಟೆಲಿನ ಹಿಂದುಗಡೆ ನಾನು ಓದುತ್ತಿದ್ದ ಮಾಧ್ಯಮಿಕ ಶಾಲೆ ಇತ್ತು. ಆ ದಿನ ಹಾಸ್ಟೆಲಿನಿಂದ ಊಟ ತರಲು ನನ್ನ ತಂಗಿ ಹೋಗಿದ್ದಳು. "ನಾನು ಪುಸ್ತಕದ ಚೀಲ ಹೆಗಲಿಗೇರಿಸಿಕೊಂಡು ಶಾಲೆಗೆ ಹೊರಟೆ. ಅರ್ಧದಾರಿ ನಡೆದಿದ್ದಾಗ ಎದುರಿಗೆ ನನ್ನ ತಂಗಿ ಊಟದೊಂದಿಗೆ ಮನೆಗೆ ಬರುತ್ತಿದ್ದಳು. ಯಾವುದಾದರೂ ಅಂಗಡಿಯಲ್ಲಿ ಉಪ್ಪು ಪಡೆದು ಮಧ್ಯಾಹ್ನ ತಿನ್ನಬಹುದೆಂದು ನಾನು ತಂಗಿಯಿಂದ ಒಂದು ರಾಗಿ ಮುದ್ದೆಯನ್ನು ಈಸಿಕೊಂಡು ಬ್ಯಾಗಿನಲ್ಲಿ ಹಾಕಿಕೊಂಡು ಹೊರಟೆ. ಮಧ್ಯಾಹ್ನ ಊಟಕ್ಕೆ ಬಿಡುವುದನ್ನೇ ನಿರೀಕ್ಷಿಸುತ್ತಿದ್ದೆ". ಒಂದು ಹುಡುಗ ತನ್ನ ಕಳೆದು ಹೋದ ಪೆನ್ಸಿಲ್‌ನ್ನು ಹುಡುಕುತ್ತಿದ್ದ, ಎಲ್ಲರ ಪುಸ್ತಕದ ಚೀಲಗಳನ್ನು ಹುಡುಕುತ್ತಿದ್ದವನು ನನ್ನ ಚೀಲದಲ್ಲಿ ಕೈ ಹಾಕಿ ನನ್ನ ಚೀಲದಲ್ಲಿರುವ ಮುದ್ದೆಯನ್ನು ಹೊರತೆಗೆಯುತ್ತಾನೆ ಎಂದು ನಾನು ನನ್ನ ಚೀಲವನ್ನು ಪರೀಕ್ಷಿಸಲು ಒಪ್ಪಲಿಲ್ಲ. ಆಗ ನಾನೇ ಕಳ್ಳನೆಂದು ತೀರ್ಮಾನಿಸಿ ಮೇಡಂ ಹತ್ತಿರ ದೂರು ಕೊಟ್ಟರು. ಮೇಡಂ ನನ್ನ ಚೀಲವನ್ನು ಪರೀಕ್ಷಿಸಿದಾಗ ಅವರಿಗೆ ಪೆನ್ಸಿಲ್ ಸಿಗಲಿಲ್ಲ. ರಾಗಿ ಮುದ್ದೆ ಸಿಕ್ಕಿತು. ಮೇಡಂ ಚಕಿತರಾದರು. ಎಲ್ಲರೂ ಏಕ ಕಂಠದಿಂದ 'ಮುದ್ದೆ ಮುದ್ದೆ' ಎಂದು ಹೊರನಡೆದರು.[12] ತಮ್ಮ ಸ್ಥಿತಿಯನ್ನು ಅಥವಾ ಒಬ್ಬರು ಇನ್ನೊಬ್ಬರ ಸ್ಥಿತಿಯನ್ನು ಅರಿತು ಗೇಲಿಮಾಡುವುದು ಒಂದು ರೀತಿಯಾದರೆ. ಸಿದ್ಧಲಿಂಗಯ್ಯನವರು ಮೊದಲು ತಮ್ಮನ್ನು ತಮ್ಮ ಬದುಕಿನಲ್ಲಿ ನಡೆದ ಘಟನೆಗಳನ್ನು ಯಾವುದೇ ಮುಜುಗರವಿಲ್ಲದೇ ಹೇಳುತ್ತಾ ಎಲ್ಲರನ್ನು ನಗೆಗಡಲಲ್ಲಿ ತೇಲಿಸುತ್ತಾರೆ. ಬಡತನ ಮತ್ತು ಅಸ್ಪೃಶ್ಯತೆಯ ಗಾಢಾನುಭವಗಳು ಅವರ ಜೊತೆಗಿದ್ದರೂ

ಅದನ್ನು ತೋರಿಸಿಕೊಳ್ಳದೆ ತಮ್ಮ ವಿಶಿಷ್ಟವಾದ ನಡವಳಿಕೆಯಿಂದ ಎಲ್ಲರನ್ನು ಆಕರ್ಷಿಸುವ ಶಕ್ತಿ ಅವರಿಗೆ ಮಾತ್ರ ಸಾಧ್ಯವೆನಿಸುತ್ತದೆ. ಅವರು ತಮ್ಮ ಭಾಷಣದ ಮೂಲಕವೇ ಇಂದಿಗೂ ಎಲ್ಲರನ್ನು ಆಕರ್ಷಿಸಿದ್ದಾರೆ. ಚಿಕ್ಕಂದಿನಲ್ಲಿ ಅವರ ದೊಡ್ಡಪ್ಪನಿಂದ ಕಲಿತ ಭಾಷಣದ ಕಲೆಯನ್ನು ಅವರು ಹೀಗೆ ವಿವರಿಸುತ್ತಾರೆ. ಭಾಷಣದ ಪೂರ್ವ ಸಿದ್ಧತೆ ಹೇಗಿರಬೇಕು ಎಂಬುದಕ್ಕೆ "ನಾನೊಮ್ಮೆ ಮನೆಯಲ್ಲಿ ಮಾನ್ಯ ಹಂಡೆಯವರೇ ಮಾನ್ಯ ಗುಂಡಿಯವರೇ, ಮಾನ್ಯ ಬಿಂದಿಗೆಯವರೇ ಎಂದು ಭಾಷಣ ಅಭ್ಯಾಸ ಮಾಡುತ್ತಿದೆ".[13] ಇದನ್ನು ಕೇಳಿ ತಂದೆ ತಾಯಿ ಹೆದರಿದ್ದರು ಎನ್ನುತ್ತಾರೆ. ಆದರೆ ಈ ಅಭ್ಯಾಸದಿಂದಾಗಿ ಭಾಷಣ ಕಲೆ ಅವರಿಗೆ ಬಹುಬೇಗ ಕರಗತವಾಗಿ ಅಂಬೇಡ್ಕರ್ ಅವರ ಬಗ್ಗೆ ಭಾಷಣ ಮಾಡಲು ಪ್ರಾರಂಭಿಸಿದ್ದರು. ಬಾಲ್ಯದಲ್ಲಿ ಹಾಸ್ಟೆಲ್‌ಗೆ ಸೇರಿದ್ದರು. ಅಲ್ಲಿನ ಕೆಲ ಪುಂಡ ಪೋಕರಿಗಳೊಂದಿಗೆ ಕಾಲಕಳೆಯುತ್ತಿದ್ದುದನ್ನು ಕಂಡ ಅವರ ಹಾಸ್ಟೆಲ್‌ನ ಮತ್ತೊಬ್ಬ ವಿದ್ಯಾರ್ಥಿ ರಂಗಧಾಮಯ್ಯ ಇವರಿಗಿಂತ ಒಂದು ತರಗತಿ ಹಿರಿಯರು ಸಿದ್ಧಲಿಂಗಯ್ಯನವರನ್ನು ಕರೆದು ಅವರ ತಂದೆ ತಾಯಿ ದುಡಿಯುತ್ತಿದ್ದಾರೆ ಎಂದು "ನೀನು ಬಹಳ ಬಡವ " ನೀನು ನನ್ನ ಜೊತೆ ಇದ್ದು ನಾನು ಹೇಳಿದಂತೆ ಕೇಳಿಕೊಂಡಿರಬೇಕು ಎಂದಾಗ ಅಂದಿನಿಂದ "ನಿತ್ಯವು ತಣ್ಣೀರು ಸ್ನಾನ ಮಾಡಿ ಓದುವುದು ನನ್ನ ಪರಿಪಾಠವಾಯಿತು"[14] ಎನ್ನುತ್ತಾರೆ. ನಂತರ ಬುದ್ಧಿವಂತ ವಿದ್ಯಾರ್ಥಿಯಾಗಿ, ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸುತ್ತಾ ಭಾಷಣ ಕಲೆಯನ್ನು ರೂಢಿಸಿಕೊಳ್ಳುತ್ತಾ ಬೆಳೆಯುತ್ತಾರೆ. ಅವರ ಹಾಸ್ಟೆಲ್‌ಗೆ ಬರುತ್ತಿದ್ದ ಎಸ್. ನಿಜಲಿಂಗಪ್ಪ, ಬಿ.ರಾಚಯ್ಯ, ನಾಗಪ್ಪ ಆಳ್ವ ಆರ್, ಭರಣಯ್ಯ, ಕೆ.ಭೀಮಯ್ಯ, ಸಿದ್ಧಾರ್ಥ ಅರಕೇರಿಯವರ ಭಾಷಣಗಳನ್ನು ಕೇಳುತ್ತಾ ಬೆಳೆದರು. ಶ್ರೀರಾಮಪುರದ ಗ್ರಂಥಾಲಯದಲ್ಲಿದ್ದ ಪುಸ್ತಕಗಳನ್ನು ಓದುತ್ತಾ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಹಾಸ್ಟೆಲ್‌ನಲ್ಲಿ ಕೊಡುವ ಜೋಳದ ಮುದ್ದೆಯನ್ನು ಕುರಿತು "ಕೊಡುವರು ನಮಗೆ ಜೋಳ; ಕಡಿಮೆ ಹಾಕುವರು ಕಾಳ; ಆಗುತ್ತದೆ ಅನೇಕರಿಗೆ ರಕ್ತಭೇದಿ; ಆದರು ಕೊಡಲೊಲ್ಲರು ರಾಗಿ ಗೋಧಿ" ಪದ್ಯವನ್ನು ಬರೆದಿದ್ದರು.[15] ಅದನ್ನು ವಿದ್ಯಾರ್ಥಿ ಗೆಳೆಯ ಸಾಮೂಹಿಕ ಪಾರ್ಥನೆಯಂತೆ ಹಾಡುತ್ತಿದ್ದರು. ಹಾಗಯೇ ಪ್ರಸಿದ್ಧ ವಕೀಲರಾದ ಡಾ. ಎಸ್.ಸಿ. ಬಿಳಿಗಿರಿ ರಂಗಯ್ಯ ಇವರ ಕವಿತೆಗೆ ಪ್ರೇರಣೆ ನೀಡಿದರು. "ಪ್ರತಿದಿನ ಬಂದೂ ಕಾಣಬೇಕೆಂದೂ ಒಂದು ಕವಿತೆ ಓದಬೇಕೆಂದು ಸಂಭಾವನೆಯಾಗಿ ಒಂದು ರೂಪಾಯಿ ಕೊಡುವುದಾಗಿ ಹೇಳಿದ್ದರು".[16] ಅಂಬೇಡ್ಕರ್ ಅವರ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದರಿಂದ ಅವರನ್ನು ಕುರಿತು ಭಾಷಣ ಮಾಡುತ್ತಿದ್ದರು. 'ಬೆಂಗಳೂರಿನಲ್ಲಿ ದಲಿತ ವಿದ್ಯಾರ್ಥಿಗಳ ಹೈಸ್ಕೂಲು ಹಾಸ್ಟೆಲುಗಳಲ್ಲಿ ನನ್ನ ಹೆಸರು ಬಹಳ ಜನಕ್ಕೆ ಗೊತ್ತಾಯಿತು. ಒಮ್ಮೆ ಮೈಸೂರಿನ ನಜರಬಾದ್‌ನ ಡಿ.ಸಿ. ಹಾಸ್ಟೆಲಿನಿಂದ ಒಂದು ಪತ್ರ ಬಂದಿತ್ತು. 'ತಮ್ಮ ಹಾಸ್ಟೆಲಿಗೆ ಬಂದು ಅಂಬೇಡ್ಕರ್ ವಿಚಾರಗಳನ್ನು ಕುರಿತು ಭಾಷಣ ಮಾಡಬೇಕೆಂಬ ಕೋರಿಕೆ ಅದರಲ್ಲಿತ್ತು'[17] ಅಂಬೇಡ್ಕರ್ ಅವರ ವಿಚಾರಗಳನ್ನು ಕುರಿತು ದಂತಕಥೆಗಳ ರೀತಿಯಲ್ಲಿ ಹೇಳುತ್ತಾ ವಿದ್ಯಾರ್ಥಿ ದೆಸೆಯಲ್ಲಿಯೇ ಉತ್ತಮ ಭಾಷಣಕಾರರಾಗಿ ಬೆಳೆದರು. ಅವರಿಗೆ ಭಾಷಣ ಮಾಡಲು ವೇದಿಕೆ ಕಲ್ಪಿಸಿಕೊಡುತ್ತಿದ್ದವರಲ್ಲಿ ಸಿದ್ಧಾರ್ಥ ಅರಕೇರಿಯವರು ಪ್ರಮುಖರಾಗಿದ್ದರು. ಸಿದ್ಧಲಿಂಗಯ್ಯನವರ ಕಾವ್ಯ ಕೃಷಿ ಬೆಳೆಯುತ್ತಾ ಸಾಗುವುದು ಶ್ರೀರಾಮಪುರದ ಸ್ಮಶಾನದಲ್ಲಿ.

ಅವರು ತಮ್ಮದು ಚಿಕ್ಕಮನೆಯೆಂದು ಸ್ಮಶಾನದಲ್ಲಿ ಕುಳಿತು ಓದುವುದನ್ನು ಬರೆಯುವುದನ್ನು ರೂಢಿಸಿಕೊಂಡರು. ಯಾವಾಗಲೂ ಅಲ್ಲಿಗೆ ಹೋಗುತ್ತಿದ್ದ ಅವರು ಸ್ಮಶಾನದಲ್ಲಿ ಕೆಲಸ ಮಾಡುತ್ತಿದ್ದವರಿಗೆಲ್ಲ ಪರಿಚಿತರಾಗಿದ್ದರು. ಅಂಬೇಡ್ಕರ್ ಅವರ ವಿಚಾರಗಳನ್ನು ಅರಿತಿದ್ದರಿಂದ ಸಮಾಜದಲ್ಲಿನ ಸಮಸ್ಯೆಗಳ ಬಗ್ಗೆಯೂ ಚಿಂತಿಸತೊಡಗಿದರು. ಕಾಲೇಜಿನಲ್ಲಿ ಕರ್ನಾಟಕ ಸಂಘದ ಸಹಕಾರ್ಯದರ್ಶಿಯಾಗಿ, ಸಮಾಜವಾದಿ ಯುವಜನ ಸಭಾದ ಸದಸ್ಯರಾಗಿದ್ದರು. ಗೆಳೆಯರೊಂದಿಗೆ ಸೇರಿ ವಿಚಾರವಾದಿ ಪರಿಷತ್ತನ್ನು ಪ್ರಾರಂಭಿಸಿದರು. ಇದರ ಮುಖಾಂತರ ದಲಿತ ವಿದ್ಯಾರ್ಥಿಗಳ ಹಾಸ್ಟೆಲ್‌ನ ಸಮಸ್ಯೆಯನ್ನು ನಿವಾರಿಸುವ ನಿಟ್ಟಿನಲ್ಲಿ ಮೆರವಣಿಗೆ ನಡೆಸಿ ಆಗಿನ ಮುಖ್ಯಮಂತ್ರಿ ದೇವರಾಜು ಅರಸು ಅವರನ್ನು ಭೇಟಿ ಮಾಡಿ ದಲಿತ ವಿದ್ಯಾರ್ಥಿಗಳ ಸಮಸ್ಯೆಯನ್ನು ವಿವರಿಸಿದ್ದರು. ಪೆರಿಯಾರ್ ಅವರ ವಿಚಾರಗಳಿಗೆ ಪ್ರಭಾವಿತರಾಗಿದ್ದರು. ಅವರು ಬೆಂಗಳೂರಿಗೆ ಭೇಟಿಕೊಟ್ಟು ಭಾಷಣ ಮಾಡಿದ್ದನ್ನು ಕೇಳಲು ಹೋಗಿದ್ದರು. ವಿಚಾರವಾದಿ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರದು "ಜಾತಿರಹಿತ ವರ್ಗರಹಿತ ಸಮಾಜದ ರಚನೆಗೆ ಹೋರಾಡುವುದು ಸಮಾವೇಶದ ಗುರಿಯಾಗಿತ್ತು". ಈ ಸಮ್ಮೇಳನವನ್ನು ಮೂಢನಂಬಿಕೆ ವಿರೋಧಿ ಸಮ್ಮೇಳನವೆಂದು ನಾವು ಕರೆದಿದ್ದೆವು", "ಜಾತಿ ನಾಶವಾಗಬೇಕು" ಎಂಬುದು ಇವರ ಭಾಷಣದ ನುಡಿಯಾಗಿತ್ತು.[18] ಅಂಬೇಡ್ಕರ್ ಅವರು ಹಾಕಿಕೊಟ್ಟ ಸಿದ್ಧಾಂತಗಳು ಇವರ ಭಾಷಣಗಳಲ್ಲಿ ಕಂಡು ಬರುತ್ತಿತ್ತು. ಇದೇ ಸಂದರ್ಭದಲ್ಲಿ ಬೂಸಾ ಪ್ರಕರಣವು ನಡೆದು ಅವರ ಕ್ರಾಂತಿಕಾರಿ ಚಿಂತನೆಗಳಿಂದ ಗುರುತಿಸಿಕೊಂಡಿದ್ದರು. ಅವರ ಪರವಾಗಿ "ದಲಿತ ವಿದ್ಯಾರ್ಥಿಗಳನ್ನು ಸಂಘಟಿಸುವ, ಮೆರವಣಿಗೆ ಮಾಡಿಸುವ ಹೊಣೆ ಹೆಚ್ಚು ಕಮ್ಮಿ ನನ್ನ ಮೇಲೆ ಬಿದ್ದಿತು. ಸಾಮಾನ್ಯವಾಗಿ ಜನ ದಲಿತವರ್ಗದವರನ್ನು ಬಿಟ್ಟರೆ ಬಸವಲಿಂಗಪ್ಪನವರ ವಿರೋಧಿ ಆಗಿದ್ದರು.[19]

ಅಂಬೇಡ್ಕರ್ ಅವರ ತತ್ವಗಳಾದ ಶಿಕ್ಷಣ, ಸಂಘಟನೆ ಹೋರಾಟವನ್ನು ಗಂಭೀರವಾಗಿ ಪರಿಗಣಿಸದ್ದರು. ಅದಕ್ಕಾಗಿ ಸಿದ್ಧಲಿಂಗಯ್ಯನವರು ಶಿಕ್ಷಣಕ್ಕಾಗಿ "ಬೆಂಗಳೂರಿನ ಕೊಳಗೇರಿಗಳ ಮಕ್ಕಳಿಗಾಗಿ ರಾತ್ರಿ ಶಾಲೆಗಳನ್ನು ಪ್ರಾರಂಭಿಸಿದೆವು. ಇದಕ್ಕಾಗಿ ಶಿಕ್ಷಕರ ಪಡೆಯೇ ಸಿದ್ಧವಾಯಿತು".[20] ಪ್ರಗತಿಪರ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಭೋಧಿಸುತ್ತಿದ್ದರು. ಆ ಅವಧಿಯಲ್ಲಿಯೇ 'ದಲಿತ ಸಂಘರ್ಷ ಸಮಿತಿ' ಸ್ಥಾಪನೆಗೂ ಕಾರಣರಾದರು. ಕರ್ನಾಟಕದ ಬೇರೆ ಬೇರೆ ಭಾಗಗಳಿಗೂ ಭೇಟಿಕೊಟ್ಟು ಕವಿತೆಯ ಓದು ಮತ್ತು ಭಾಷಣವನ್ನು ಮಾಡುತ್ತಿದ್ದರು. 'ಹೊಲೆ ಮಾದಿಗರ ಹಾಡು' ಕವನ ಸಂಗ್ರಹವನ್ನು ಬಿಡುಗಡೆ ಮಾಡಿದ್ದರು. ಕನ್ನಡ ವಿಭಾಗದಲ್ಲಿ ಸಂಶೋಧನಾ ಸಹಾಯಕರಾಗಿ ನೇಮಕಗೊಂಡರು ಎಂಬಲ್ಲಿಗೆ ಊರುಕೇರಿ–೧ ಭಾಗವನ್ನು ಮುಕ್ತಾಯಗೊಳಿಸಿದ್ದಾರೆ.

**ಊರುಕೇರಿ ಭಾಗ–೨**

ಈ ಭಾಗದಲ್ಲಿ ಸಾಮಾಜಿಕ ಹೋರಾಟಗಳ ಚಿತ್ರಣವನ್ನೇ ಕಾಣಬಹುದು. ಸಂಘಟನೆ ಮತ್ತು ಹೋರಾಟ ಹಾಗೂ ಅಕ್ಷರ ಕಲಿಸುವ ಆಲೋಚನೆಯನ್ನು ಮುಂದುವರೆಸಿದ್ದರು. ದೇವಾಲಯ ಪ್ರವೇಶ ಧಾರ್ಮಿಕ ಪ್ರಶ್ನೆಯ ಜೊತೆಗೆ ಆಧ್ಯಾತ್ಮಿಕ ಹಸಿವನ್ನು ಹಿಂಗಿಸುತ್ತದೆ ಎಂದು ನಾನಾ ರೀತಿಯಾಗಿ ಯೋಚಿಸುತ್ತ ನಾನು ಗರ್ಭಗುಡಿಯ ಮುಂದೆ ನಿಂತಿದ್ದೆ".[21] ದೇವಸ್ಥಾನದ ಪ್ರವೇಶದ

ನಂತರ ದಲಿತರ ಮೇಲೆ ಹಲ್ಲೆಗಳು ನಡೆದವು. ಅದನ್ನು ಹೀಗೆ ವರ್ಣಿಸುತ್ತಾರೆ. "ದಲಿತರು ಭಯದಿಂದ ಓಡುತ್ತಿದ್ದರೆ ಜಾತಿಯ ವಿಷ ಕುಡಿದು ಉನ್ಮತ್ತರಾದವರು ಇವರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದರು. ಕೆಲವು ದಲಿತರು ತಿರುಗಿಬಿದ್ದು ಘರ್ಷಣೆಗೆ ಇಳಿಯುತ್ತಿದ್ದುದ್ದನ್ನು ನಾನು ನೋಡಿದೆ. ಅಂದು ದಲಿತರನ್ನು ಹಲ್ಲೆ ಮಾಡಲು ಬಂದವರೂ ಬಡವರೇ. ಅವರಲ್ಲಿ ಅನೇಕರು ಮಾಸಿದ, ಹರಕಲು ಬಟ್ಟೆಯನ್ನು ಧರಿಸಿದ್ದರು. ಅವರಿಗೂ ದಲಿತರಿಗೂ ಆರ್ಥಿಕ ಸ್ಥಿತಿಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬರಲಿಲ್ಲ. ಈ ಘರ್ಷಣೆ ಎರಡೂ ಗುಂಪಿನ ಬಡವರ ಹೊಡೆದಾಟದಂತೆ ಕಂಡಿತು. ಆ ಮುಗ್ಧರು ಜಾತೀಯತೆಯ ಅಜ್ಞಾನದಿಂದ ದಾರಿ ತಪ್ಪಿದ್ದರು."[22] ದಲಿತ ವರ್ಗಗಳ ಸ್ಥಿತಿ ಅಂಬೇಡ್ಕರ್ ಅವರ ಹೋರಾಟದಿಂದ ಮುಂದುವರೆದು ಹಿಂದಿನವರೆಗೂ ನಡೆದು ಅಂತಹದ್ದೇ ಚಿತ್ರಣ ಮೂಡಿತ್ತು. ದಲಿತರಿಗೆ ರಕ್ಷಣೆ ಇಲ್ಲದೆ ಯಾವುದೇ ಹಕ್ಕುಗಳು ಸಿಗದ ಸ್ಥಿತಿ ಇಂದಿಗೂ ಮುಂದುವರೆದಿತ್ತು.

ಭದ್ರಾವತಿ ಸಮೀಪದ ಕಾಳನಕಟ್ಟೆಯಲ್ಲಿ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿ ಸಭೆ ನಡೆಯಿತು. 'ಮಾರ್ಕ್ಸಿಸ್ಟರು ಜಾತಿವಾದಿಗಳೆಂದು ಅವರ ಜೊತೆ ಇನ್ನು ಮೇಲೆ ಯಾವುದೇ ಕಾರ್ಯಕ್ರಮ ಮಾಡಬಾರದೆಂದು ಕೆಲವು ಜಿಲ್ಲಾ ಸಂಚಾಲಕರು ಸಭೆಯಲ್ಲಿ ಹೇಳಿದರು.' 'ನಾನು ಇದನ್ನು ವಿರೋಧಿಸಿದೆ. ಎಲ್ಲಾ ಪ್ರಗತಿಪರ ಶಕ್ತಿಗಳು ಒಂದಾಗಿ ಹೋರಾಟ ಮಾಡಬೇಕೆಂದು ನಾನು ಪ್ರತಿಪಾದಿಸಿದೆ. ನನ್ನ ಗೆಳೆಯರಿಗೆ ಈ ಮಾತು ಹಿಡಿಸಲಿಲ್ಲ. ಮಾರ್ಕ್ಸ್‌ವಾದಿಗಳು ವರ್ಗ ಹೋರಾಟವನ್ನು ಮಾತ್ರ ಪ್ರತಿಪಾದಿಸುತ್ತಾರೆ. 'ಜಾತಿ ನಿರ್ಮೂಲನೆ ಹೋರಾಟಕ್ಕೆ ಅವರು ತೊಡಕಾಗಿದ್ದಾರೆ. ಅವರಿಗೆ ದಲಿತ ಹೋರಾಟದ ಬಗ್ಗೆ ಯಾವುದೇ ಸಹಾನುಭೂತಿಯಿಲ್ಲ ಎಂದು ಈ ಮುಖಂಡರು ಬಲವಾಗಿ ವಾದಿಸಿದರು.'[23] ದಲಿತರಲ್ಲಿನ ಆಲೋಚನಾಕ್ರಮ ಬದಲಾಗಿತ್ತು. ಬಹುಶಃ ಮಾರ್ಕ್ಸ್, ಅಂಬೇಡ್ಕರ್ ಎಂಬ ವ್ಯತ್ಯಾಸಗಳನ್ನು ಮಾಡುವ ಅಗತ್ಯವಿಲ್ಲ. ಮಾರ್ಕ್ಸ್ ಸಿದ್ಧಾಂತವಾಗಲಿ, ಅಂಬೇಡ್ಕರ್ ಅವರ ಸಿದ್ಧಾಂತವಾಗಲಿ ದೇಶದಲ್ಲಿನ ದಲಿತರು ಮತ್ತು ಬಡವರ ಸ್ಥಿತಿಯನ್ನು ಕುರಿತದ್ದಾಗಿತ್ತು. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಎರಡು ದಲಿತರಿಗೆ ಅಗತ್ಯವಾದವು. ಇವುಗಳನ್ನು ಪ್ರತಿಪಾದಿಸಿದವರು ಮಾರ್ಕ್ಸ್ ಮತ್ತು ಅಂಬೇಡ್ಕರ್. ಆದರೆ ಜನರಲ್ಲಿನ ಈ ವ್ಯತ್ಯಾಸಕ್ಕೆ ಯಾವುದು ಕಾರಣವಾಯಿತು? ಪ್ರತಿಷ್ಠೆ ಅಥವಾ ಅಧಿಕಾರ ಇಲ್ಲವೇ ಕೀರ್ತಿ ಇರಬಹುದೇ? ಆದರೆ ಇದರಿಂದ ಜನರಲ್ಲಿನ ಒಡಕು ಹೆಚ್ಚಾಯಿತೇ ಹೊರತು ಅದನ್ನು ಮುಚ್ಚುವ ಕೆಲಸವನ್ನು ಯಾರು ಮಾಡಲಿಲ್ಲ. ಭಿನ್ನಮತ ಉಂಟಾಗಲೂ ಹಲವಾರು ಕಾರಣಗಳು ಜನರಿಗೆ ನಿಜವನ್ನು ತಿಳಿಸಲು ಇರುವ ಉದ್ದೇಶ ಬದ್ಧತೆಗೆ ಅನುಗುಣವಾಗಿ ನಡೆದುಕೊಳ್ಳುವ ವಿಚಾರ ದಲಿತರಿಗೆ ಮುಖ್ಯವಾಗುತ್ತದೆ. ಇದಕ್ಕೆ ನಮ್ಮೆದುರಿನ ಸ್ಪಷ್ಟ ಉದಾಹರಣೆ ಬಾಬಾಸಾಹೇಬ್ ಡಾ.ಅಂಬೇಡ್ಕರ್. ಅವರದು 'ನನ್ನ ಹೋರಾಟ ನನಗಾಗಿ ಅಲ್ಲ ನಮ್ಮವರಿಗಾಗಿ' ಎಂಬ ಅವರ ಧ್ವನಿಯಲ್ಲಿದ್ದ ವಿಚಾರವನ್ನು ಎಲ್ಲರೂ ಅರಿಯಬೇಕಾಗಿತ್ತು.

ದೊಡ್ಡಬಳ್ಳಾಪುರದಲ್ಲಿ ದಲಿತರ ಸಮಾವೇಶವೊಂದು ನಡೆಯಿತು. ಸಮಾವೇಶಕ್ಕೂ ಮೊದಲು ಮೆರವಣಿಗೆ ನಡೆಯಿತು. ಆ ಕಾರ್ಯಕ್ರಮಕ್ಕೆ ಅತಿಥಿಗಳಾಗಿದ್ದ ಸಿದ್ಧಲಿಂಗಯ್ಯನವರು ಮೆರವಣಿಗೆಯಲ್ಲಿ

ಪಾಲ್ಗೊಂಡಿದ್ದರು. "ಮೂರು ಸಾಲುಗಳಲ್ಲಿ ಬರುತ್ತಿದ್ದ ಸಹಸ್ರಾರು ಜನರ ನಡುವೆ ಸೇರಿಕೊಂಡು ಮೆರವಣಿಗೆಯಲ್ಲಿ ಸಾಗುತ್ತಿದ್ದೆ. ಗಂಡಸರು, ಹೆಂಗಸರು, ಹುಡುಗರು, ಉತ್ಸಾಹದಿಂದ ಮುನ್ನೆಡೆಯುತ್ತಿದ್ದರು. ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು 'ಎಲ್ಲಾ ಜಾತಿಯ ಬಡವರು ದಲಿತರು' ಎಂಬ ನನಗೆ ಪ್ರಿಯವಾದ ಘೋಷಣೆ ಅಲ್ಲಿ ಹೆಚ್ಚಾಗಿ ಕೇಳಿ ಬರುತ್ತಿತ್ತು. ಜನ ಹಾಡುತ್ತಿದ್ದ ನನ್ನ ಹಾಡುಗಳು ಇವು ನಾನು ಬರೆದ ಹಾಡುಗಳೇ ಎಂಬ ಭಾವನೆಯನ್ನು ನನ್ನಲ್ಲಿ ಹುಟ್ಟುಹಾಕಿದವು. ನಾನು ಜನಸಾಗರದ ಒಂದು ಹನಿಯಾಗಿ ಮುಂದೆ ಮುಂದೆ ಸಾಗುತ್ತಿದ್ದೆ" 'ಮಗುವನ್ನು ಎತ್ತುಕೊಂಡು ಸಾಗುತ್ತಿದ್ದ ಮಹಿಳೆ' 'ಈ ಮಗುವನ್ನು ಕೊಂಚ ಎತ್ತಿಕೊಳ್ಳಣ್ಣ' ಎಂದು ಆ ಪುಟ್ಟ ಕಂದನನ್ನು ನನಗೆ ವರ್ಗಾಯಿಸಿದಳು. ನಾನು ಮಗುವನ್ನು ಎತ್ತಿಕೊಂಡು ಸಾಲಿನಲ್ಲಿ ಸಾಗಿದೆ. ಆ ಸೋದರಿಗೆ ನಿರಾಳವೆನಿಸಿತು. ಇನ್ನೂ ಹೆಚ್ಚು ಗಟ್ಟಿಯಾಗಿ ಘೋಷಣೆ ಕೂಗುತ್ತಾ ಆಕೆ ಮುನ್ನೆಡೆದಳು." ವೇದಿಕೆಯ ಕಾರ್ಯಕ್ರಮ ನಡೆಯುವಾಗ ವೇದಿಕೆಯಲ್ಲಿದ್ದ ನನ್ನನ್ನು ಕಂಡು ಆಕೆ ಅಪರಾಧಿ ಭಾವನೆಯಿಂದ ನೋಡುತ್ತಿದ್ದಳು" ಮಕ್ಕಳನ್ನೆತ್ತಿಕೊಂಡು ಬಹುದೂರ ನಡೆದು ರೂಢಿಯಿಲ್ಲದಿದ್ದ ನನಗೆ ಆಗಾಗ ಕೈ ನೋವು ಬಂದರೂ, ಅದು ಸಂತೋಷವನ್ನೇ ನೀಡಿತ್ತು. ಯಾಕೆಂದರೆ ನಾನು ಕೂಲಿಕಾರ ತಂದೆ ತಾಯಿಗಳ ಮಗ. ನಾನು ಕಾರ್ಮಿಕ ವರ್ಗದಿಂದ ಬಂದವನು. ಈ ಭಾವನೆ ನನ್ನಲ್ಲಿ ಯಾವಾಗಲೂ ಜೀವಂತವಾಗಿದೆ"[24] ಎನ್ನುತ್ತಾರೆ. ಬಡವರ, ದಲಿತರ ಬಗ್ಗೆಯೇ ಆಲೋಚಿಸುತ್ತಾ ಅವರ ನಡುವೆಯೇ ಗುರುತಿಸಿಕೊಳ್ಳುತ್ತಾರೆ.

೧೯೭೯ನೇ ಇಸವಿ ಕನ್ನಡ ಸಾಹಿತ್ಯ ಪರಿಷತ್ತು "ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಧರ್ಮಸ್ಥಳದಲ್ಲಿ ನಿಯೋಜಿಸಿತ್ತು." ಅಕ್ಷರ ಕಲಿತ ಸಮುದಾಯ ತಮ್ಮ ಪ್ರಗತಿಪರವಾದ ವಿಚಾರಗಳನ್ನು ಮಂಡಿಸುವ ದಲಿತ ಸಾಹಿತ್ಯ ಗೋಷ್ಠಿ ನಡೆಸಬೇಕೆಂಬ ತೀರ್ಮಾನಕ್ಕೆ ಬಂದಿದ್ದರು. ದಲಿತ ಸಾಹಿತ್ಯ ದಲಿತ ಸಮುದಾಯದ ಏಳುಬೀಳು ಸಮಸ್ಯೆಗಳನ್ನು ಎಲ್ಲರಿಗೂ ತಿಳಿಸುವ ಕಾರ್ಯವಾಗಬೇಕು ಎಂಬುದು ಅವರ ಆಶಯವಾಗಿತ್ತು. ದಲಿತ ಸಾಹಿತ್ಯವನ್ನು ತುಳಿಯುವ ಅವರಿಗೆ ಅವಕಾಶ ಸಿಗದಂತೆ ಮಾಡುವ ಹುನ್ನಾರಗಳು ನಡೆದಿದ್ದವು.

ಬಾಡಿಗೆ ಮನೆ ಪಡೆಯಲು ಜಾತಿಯನ್ನು ಹೇಳದಿರುವುದು ಅಂದಿನ ಮತ್ತು ಇಂದಿನ ಸಂದಿಗ್ಧ ಪರಿಸ್ಥಿತಿ. ಬಾಬಾಸಾಹೇಬರು ಉನ್ನತ ವಿದ್ಯಾಭ್ಯಾಸವನ್ನು ವಿದೇಶದಲ್ಲಿ ಪಡೆದು ಮರಳಿ ಬಂದು ಬರೋಡ ರಾಜ್ಯದಲ್ಲಿ ಕೆಲಸ ಮಾಡಬೇಕಾದಾಗ ಅವರು ಅಸ್ಪೃಶ್ಯರೆಂಬ ಕಾರಣಕ್ಕೆ ಮನೆಯನ್ನು ನೀಡಲು ನಿರಾಕರಿಸುತ್ತಾರೆ. ಕೊನೆಗೆ ಬೇರೆ ದಾರಿಯಿಲ್ಲದೆ ಸುಳ್ಳು ಹೇಳಿ ಪಾರ್ಸಿ ಜನಾಂಗದವರ ಒಂದು ಕೋಣೆಯನ್ನು ಬಾಡಿಗೆಗೆ ಪಡೆಯುತ್ತಾರೆ. ಮಾಲೀಕರಿಗೆ ಇವರು ಅಸ್ಪೃಶ್ಯರು ಎಂದು ತಿಳಿದ ನಂತರ ಅವರಿಗೆ ಯಾವ ಅವಕಾಶವನ್ನು ನೀಡದೆ ಸಾಮಾನುಗಳೊಂದಿಗೆ ಹೊರ ಹಾಕುತ್ತಾರೆ.. ಇದು ಅಂದಿನ ಅಂಬೇಡ್ಕರ್ ಅವರನ್ನು ಒಳಗೊಂಡು ಅಸ್ಪೃಶ್ಯರೆಲ್ಲರ ಚಿತ್ರಣವಾಗಿದೆ. ಈ ಕಾಲದಲ್ಲಿಯೂ ಇದೇ ಸ್ಥಿತಿಯಿದೆ. ಸಿದ್ಧಲಿಂಗಯ್ಯನವರು ಮನೆ ಪಡೆಯಲು ಹೋದಾಗ ಮುಂಗಡ ಹಣವನ್ನು ಪಡೆದ ಮಾಲೀಕ ನಂತರ ಇವರ ಜಾತಿ ಯಾವುದೆಂದು ಕೇಳುತ್ತಾನೆ. ಸಿದ್ಧಲಿಂಗಯ್ಯನವರು ಸುಳ್ಳು ಹೇಳದೆ ತಮ್ಮ ಜಾತಿಯನ್ನು ಹೇಳಿದ ಕಾರಣಕ್ಕೆ ಮನೆಯ ಮಾಲೀಕ

ಅವರು ಕೊಟ್ಟ ಬಾಡಿಗೆ ಮನೆಯ ಮುಂಗಡ ಹಣವನ್ನು ವಾಪಸ್ಸು ಮಾಡಿದ. ಕಾರಣ ಕೇಳಿದರೆ ಈಗಲೇ ಬಾಡಿಗೆ ಕೊಡುವುದಿಲ್ಲವೆಂದು ಸುಳ್ಳು ಹೇಳಿದ "ಜಾತಿ ಪದ್ಧತಿಯನ್ನು ವಿರೋಧಿಸಿ ನಾನು ಮಾಡಿದ ಭಾಷಣಗಳು. ಪಾಲುಗೊಂಡು ಹೋರಾಟಗಳು ನೆನಪಾದವು. 'ಮಾಲೀಕ ಜಾತಿಪದ್ಧತಿಯ ತಾರತಮ್ಯದಲ್ಲಿ ನಂಬಿಕೆಯಿಟ್ಟ ಅಸಂಖ್ಯಾತ ಜನರ ಪ್ರತಿನಿಧಿಯಂತೆ ಕಂಡ' 'ನೀವು ದಲಿತರಾಗಿ ಹುಟ್ಟಬಾರದಿತ್ತು' ಎಂಬ ನೋಟ 'ನೀವು ನಿಮ್ಮ ಜಾತಿಯನ್ನು ಹೇಳಬಾರದಿತ್ತು ಬೇರೆ ಯಾವುದಾದರೂ ಜಾತಿಯ ಹೆಸರನ್ನು ಹೇಳಬೇಕಾಗಿತ್ತು' ಎಂಬ ಏಜೆಂಟ್ ಬುದ್ಧಿವಾದ. ಇವೆಲ್ಲವು ಅಂದಿನಿಂದ ಇಂದಿನವರೆಗೆ ನಡೆಯುತ್ತಿರುವ ಜಾತಿ ಪದ್ಧತಿ ಮತ್ತು ಅಸಮಾನತೆಯ ಚಿತ್ರಣವಾಗಿದೆ. ಬಾಡಿಗೆ ಮನೆ ಪಡೆಯಲು ಜಾತಿಯನ್ನು ಸುಳ್ಳು ಹೇಳಬೇಕಾದ ಪರಿಸ್ಥಿತಿ ಇದೆ. ಆದರೆ ಈ ರೀತಿಯ ಕಂದಾಚಾರವನ್ನು ಬಿಟ್ಟವರು ಇದ್ದರು. 'ನನಗೆ ಜಾತಿ ಪದ್ಧತಿಯಲ್ಲಿ ನಂಬಿಕೆಯಿಲ್ಲ. ಮನುಷ್ಯ ಒಳ್ಳೆಯವನಾಗಿದ್ದರೆ ಸಾಕು'[25] ಎಂಬ ಮತ್ತೊಂದು ಮನೆಯ ಮಾಲೀಕನ ಉದಾತ್ತ ಚಿಂತನೆಯು ಕಾಣುತ್ತಿತ್ತು. ಆದರೆ ಒಬ್ಬರು ಹಾಗೆ ವರ್ತಿಸಿ ಉಳಿದವರು ಜಾತಿಗೆ ಮಹತ್ವ ಕೊಟ್ಟು ಮನುಷ್ಯತ್ವವನ್ನು ಕಳೆದುಕೊಂಡವರು ನಮ್ಮ ಸಮಾಜದಲ್ಲಿ ಕಾಣಸಿಗುತ್ತಾರೆ.

ಸಿದ್ಧಲಿಂಗಯ್ಯನವರ ಮೊದಲ ಕವನ ಸಂಕಲನ 'ಹೊಲೆ ಮಾದಿಗರ ಹಾಡು' ಅಂಬೇಡ್ಕರ್ ಅವರ ವಿಚಾರಗಳನ್ನು ಅವರ ಪ್ರತಿಭಟನಾ ಮನೋಭಾವವನ್ನು ತೋರಿಸುವಂತಿತ್ತು. ಅಂಬೇಡ್ಕರ್ ಅವರನ್ನು ಕಂಡಿದ್ದ ಹಾಗೂ ಅವರು ಬೆಳಗಾಂ ಜಿಲ್ಲೆಗೆ ಬಂದಾಗ ನೋಡಿದವರು ಅವರ ಪರಿಚಯವನ್ನು ಇವರಿಗೆ ಹೇಳುತ್ತಿದ್ದರು. ಬಾಬಾಸಾಹೇಬರನ್ನು ನೇರವಾಗಿ ನೋಡಿದ ವ್ಯಕ್ತಿಗಳೊಂದಿಗಿನ ಸಂಪರ್ಕ ಅವರಿಗೆ ಲಭಿಸಿತ್ತು. ರಾಯಣ್ಣನವರು ತಮ್ಮ ಬಳಿ ಇಂಗ್ಲೆಂಡಿನ ಮತ್ತು ಅಂಬೇಡ್ಕರ್ ಅವರ ನಡುವೆ ನಡೆಯುತ್ತಿದ್ದ ಪತ್ರವನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದರು. ಬಿಜಾಪುರದಲ್ಲಿ ರಾಜ್ಯಮಟ್ಟದ ಎರಡನೆ ಬಂಡಾಯ ಸಮ್ಮೇಳನ ನಡೆಯಿತು. ಬಂಡಾಯ ಸಾಹಿತ್ಯ ಸಂಘಟನೆಯ ಮೂರನೆಯ ಸಮ್ಮೇಳನ ರಾಯಚೂರಿನಲ್ಲಿ ನಡೆಯಿತು. ಅವುಗಳಲ್ಲಿ ಸಿದ್ಧಲಿಂಗಯ್ಯನವರು ಭಾಗವಹಿಸಿದ್ದರು.

**ಊರುಕೇರಿ ಭಾಗ–೩**

ಊರುಕೇರಿ ಮೂರನೇ ಭಾಗವು ವಿಶಿಷ್ಟವಾಗಿದ್ದು, ದಲಿತರು ರಾಜಕೀಯ ಅಧಿಕಾರವನ್ನು ಪಡೆದಾಗ ಸಮಾಜದಲ್ಲಿ ಬದಲಾವಣೆಗಳಾಗುತ್ತವೆ ಎಂಬ ಅಂಬೇಡ್ಕರ್ ಅವರ ಚಿಂತನೆಯನ್ನು ಅಳವಡಿಸಿಕೊಂಡು ರಾಜಕೀಯ ಪಕ್ಷದ ಶಾಸಕರಾದರು. ಅಲ್ಲಿಯೂ ಅವರ ಹೋರಾಟದ, ಪ್ರತಿಭಟನೆಯು ಸದಾ ಜಾಗೃತವಾಗಿತ್ತು. ದಲಿತರ ವಿಷಯ ಬಂದಾಗಲೆಲ್ಲ ಪ್ರತಿಕ್ರಿಯೆ ನೀಡುತ್ತಾ ಅದಕ್ಕೆ ಬೇಕಾದ ಪರಿಹಾರವನ್ನು ಸರಕಾರದ ಕಡೆಯಿಂದ ಪಡೆಯುವುದು ಅವರ ಆಲೋಚನೆಯಾಗಿತ್ತು. ಹಲವಾರು ಸಮಸ್ಯೆಗಳ ನಿವಾರಣೆಗೆ ಪರಿಹಾರವನ್ನು ಸೂಚಿಸುತ್ತಿದ್ದರು. ಅವರ ವಾದ ಸರಣಿಗೆ ಆಡಳಿತ ಪಕ್ಷಗಳು ಮಣಿಯುತ್ತಿದ್ದವು.

ಡಾ. ಸಿದ್ಧಲಿಂಗಯ್ಯನವರ ಊರುಕೇರಿ ಭಾಗ ಮೂರು ಇತ್ತೀಚೆಗೆ ಸೆಪ್ಟೆಂಬರ್ ೯, ೨೦೧೮ರಂದು ಲೋಕಾರ್ಪಣೆಯಾಯಿತು. ಈ ಆತ್ಮಕಥೆಯು ಉಳಿದೆರಡು ಭಾಗಗಳ

ಮುಂದುವರಿಕೆಯಾಗಿದೆ. ಸಮಾಜ, ಜನಸೇವೆ ರಾಜಕೀಯ ಪಕ್ಷದಲ್ಲಿದ್ದು ದಲಿತರು, ಬಡವರು, ಯಾರೇ ಅವರ ಬಳಿ ಸಹಾಯವನ್ನು ಕೇಳಿ ಹೋದರೆ ತಮ್ಮ ಕೈಲಾದ ಸಹಾಯವನ್ನು ಮಾಡುವ ರಾಜಕೀಯದ ಮೂಲಕ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವ ಕಾರ್ಯವನ್ನು ಈ ಭಾಗದಲ್ಲಿ ನೋಡಬಹುದು. ರಾಜ್ಯದ ಯಾವ ಮೂಲೆಯಲ್ಲಿ ದಲಿತರಿಗೆ ಅನ್ಯಾಯವಾದರೆ ಅವರ ಪರವಾಗಿ ಧ್ವನಿ ಎತ್ತಿ ನ್ಯಾಯ ಕೊಡಿಸುವ ಕೆಲಸವನ್ನು ಮಾಡಿದ್ದಾರೆ. ಜೊತೆಗೆ ತಮಗೆ ಬೆಂಬಲವಾಗಿ ನಿಂತ, ಅವರ ಬೆಳವಣಿಗೆಗೆ ಕಾರಣರಾದವರನ್ನು ನೆನಪಿಸಿಕೊಳ್ಳಲು ಮರೆತಿಲ್ಲ. ಆದ್ದರಿಂದಲೇ ಊರುಕೇರಿ ಭಾಗ ೩ ವಿಶಿಷ್ಟವೆನಿಸುತ್ತದೆ. ಸುಮಾರು ೧೨೦ ಭಾಗಗಳಲ್ಲಿ ಈ ಆತ್ಮಕಥೆಯು ಮಹತ್ವದ ಅಂಶಗಳನ್ನು ಸ್ವಾರಸ್ಯವಾಗಿ ಹೇಳುತ್ತಾ ಹೋಗುವುದನ್ನು ಕಾಣಬಹುದು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಾನಾಗ ಅಂತಿಮ ಎಂ.ಎ. ವಿದ್ಯಾರ್ಥಿಯಾಗಿದ್ದೆ. ಅಷ್ಟು ಹೊತ್ತಿಗಾಗಲೇ "ನನ್ನ 'ಹೊಲೆ ಮಾದಿಗರ ಹಾಡು' ಕವನ ಸಂಕಲನ ಬಿಡುಗಡೆಯಾಗಿ ನನ್ನ ಹೆಸರು ಅಲ್ಲಲ್ಲಿ ಕೇಳಿ ಬರುತ್ತಿತ್ತು.' ಗೋಪಾಲಸ್ವಾಮಿ ಅಯ್ಯರ್ ವಿದ್ಯಾರ್ಥಿ ನಿಲಯದಲ್ಲಿ ಓದಿ ಕವಿಯಾಗಿ ಪ್ರಸಿದ್ಧರಾದ ಸಿದ್ಧಲಿಂಗಯ್ಯನವರನ್ನು ಹಾಸ್ಟೆಲ್‌ನಲ್ಲಿ ಸನ್ಮಾನಿಸಲು ಆಹ್ವಾನಿಸುತ್ತಾರೆ. ಸನ್ಮಾನ ಸ್ವೀಕರಿಸಿ ಕೃತಜ್ಞತೆಯ ಮಾತನ್ನಾಡಲು ನಿಂತಾಗ 'ಅಚಾನಕ್ಕಾಗಿ ತಲೆ ಎತ್ತಿ ಮುಂಭಾಗದ ಮೊದಲ ಮಹಡಿಯನ್ನು ನೋಡಿದೆ. ಆಗಲೂ ಆ ವಿದ್ಯಾರ್ಥಿನಿಲಯದಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿದ್ದ ನನ್ನ ತಾಯಿ ಪೊರಕೆ ಹಿಡಿದು ನಿಂತು ನನ್ನ ಕಡೆಯೇ ನೋಡುತ್ತಿದ್ದಳು. ತಾಯಿಯನ್ನು ನೋಡಿದ ಕೂಡಲೇ ತಾಯಿಯ ಕಷ್ಟ ಜೀವನದ ಅರಿವಾಗಿ 'ನಾನು ಈ ಮಟ್ಟಕ್ಕೆ ಬೆಳೆಯಲು ನನ್ನ ತಾಯಿಯೇ ದುಡಿಮೆಯೇ ಕಾರಣ. ಈ ವಿದ್ಯಾರ್ಥಿ ನಿಲಯದಲ್ಲಿ ಕಸ ಗುಡಿಸುವ ಕೆಲಸ ಮಾಡಿ ನನ್ನನ್ನು ನನ್ನ ತಾಯಿ ಈ ಮಟ್ಟಕ್ಕೆ ತಂದಿದ್ದಾರೆ. ನನ್ನ ತಾಯಿಗೆ ಕೃತಜ್ಞತೆ ಹೇಳಬಯಸುತ್ತೇನೆ ಎಂದೆ. ಇದರಿಂದ ಎಲ್ಲರೂ ತಿರುಗಿ ಅವರನ್ನು ನೋಡುವಾಗ 'ನನ್ನ ತಾಯಿ' ಕೈಲಿದ್ದ ಪೊರಕೆಯನ್ನು ಮೇಲಕ್ಕೆತ್ತಿ ಅತ್ತ ಇತ್ತ ಬೀಸಿ ಸಂತೋಷ ವ್ಯಕ್ತಪಡಿಸಿದಳು."[26] ಅವಳ ಮುಖ ಅರಳಿತ್ತು. ಒಂದು ರೀತಿಯ ಸಾರ್ಥಕ ಭಾವನೆ ಎದ್ದು ಕಾಣುತ್ತಿತ್ತು. ಇದು ಆತ್ಮಕಥೆಯ ಮಹತ್ವ ಇರುವುದನ್ನು ಇದ್ದ ಹಾಗೆ ಹೇಳುವ ಮಗನಿಗೆ ತಾಯಿಯ ಮುಗ್ಧತೆಯ ಕೃತಜ್ಞತೆ ಎಲ್ಲವೂ ಇಲ್ಲಿ ಮೂಡುತ್ತದೆ. ಅದು ದಲಿತರ ಸಂಸ್ಕೃತಿ, ದಲಿತರ ಆಸ್ಮಿತೆ ಎಂದೇ ಹೇಳಬಹುದು.

ತಾಯಿಯ ಬಗೆಗೆ ಮತ್ತೊಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಕಾಲೇಜಿನ ರಜಾದಿನಗಳಲ್ಲಿ ಹಾಸ್ಟೆಲ್ ಇಲ್ಲದಿರುವುದರಿಂದ ಮನೆಯಲ್ಲಿರಬೇಕಾಗಿತ್ತು. ಏಕೆಂದರೆ ಹಾಸ್ಟೆಲ್‌ನಲ್ಲಿ ಊಟ ಇರುತ್ತಿರಲಿಲ್ಲ. ಮನೆಯ ಊಟಕ್ಕೇ ಕಾಯಬೇಕಾದ ಸ್ಥಿತಿಯಿತ್ತು. ಅವರ ತಾಯಿ ಹಾಸ್ಟೆಲ್‌ನಲ್ಲಿ ಉಳಿದ ಊಟವನ್ನು ಮನೆಗೆ ತಂದು ಮಕ್ಕಳಿಗೆ ಕೊಡುತ್ತಿದ್ದರು. ಎಂದಿನಂತೆ ತಾಯಿ ತಂದ ಮುದ್ದೆ ಗಟ್ಟಿಯಾಗಿತ್ತು. ಅದನ್ನು ಯಾವುದೇ ರೀತಿ ಪ್ರಯತ್ನಿಸಿದರೂ ನುಂಗಲು ಸಾಧ್ಯವಾಗುತ್ತಿರಲಿಲ್ಲ. "ಎರಡು ತುತ್ತು ನುಂಗಿದವನೇ ಇಂಥಾ ಮುದ್ದೆಯನ್ನು ತರುವುದೇ ಎಂದು ತಾಯಿಯ ಮೇಲೆ ರೇಗಾಡಿದೆ'. 'ಊಟದ ತಟ್ಟೆಯನ್ನು ಮುಂದಕ್ಕೆ ತಳ್ಳಿ ಕೈತೊಳೆದುಕೊಂಡು ಕೋಪದಿಂದ ಮನೆಯಿಂದ ಹೊರಗೆ ನಡೆದೆ. 'ಆ ಊಟವನ್ನು ಮಾಡುವಂತೆ ನಮ್ಮ ತಾಯಿ ಬೇಡಿಕೊಂಡರೂ ನಾನು ಮನೆಯಿಂದ

ಎದ್ದು ಹೊರಟಿದ್ದೆ. ಸ್ವಲ್ಪ ದೂರ ಹೋಗಿರಬಹುದು. ನಾನು ಹಸಿವಿನಿಂದ ಹೋಗುತ್ತಿದ್ದದ್ದನ್ನು ಕಂಡ ನನ್ನ ತಾಯಿಗೆ ಕರುಳು ಚುರುಕ್ ಎಂದಿರಬೇಕು."[27] ತಾಯಿಯ ಸಂಕಟದ ಬಗ್ಗೆ ಹೇಳುವಾಗ ಇವರಲ್ಲಿನ ಸಂಕಟವು ಅರಿವಿಗೆ ಬರುತ್ತದೆ. ತಾಯಿಯ ಹೃದಯವನ್ನು ಅವಳ ನೋವನ್ನು ಕಂಡು ಸಹಿಸಲಾಗದಿದ್ದರೂ ಹಸಿವಿನ ಕಾರಣಕ್ಕೆ ತಮ್ಮ ಮೃದು ಮನಸ್ಸನ್ನು ಕಲ್ಲು ಮಾಡಿಕೊಂಡು ಹೋಗುತ್ತಾರೆ. ಇದು ಕರುಣಾಜನಕವಾದ ಸಂದರ್ಭ.

ಕವಿಯಾಗಿ ಗುರುತಿಸಿಕೊಂಡ ಸಿದ್ಧಲಿಂಗಯ್ಯನವರ ಎಲ್ಲಾ ಕವಿತೆಗಳನ್ನು ಕ್ಯಾಸೆಟ್ ರೂಪದಲ್ಲಿ ತಂದಿದ್ದರು. ಸಿನಿಮಾಗಳಿಗೆ ಹಾಡು ಬರೆಯಲು ಪ್ರಾರಂಭಿಸಿ ಸುಮಾರು ೩೦ಕ್ಕೂ ಹೆಚ್ಚು ಹಾಡುಗಳನ್ನು ಬೇರೆ ಬೇರೆ ಸಿನಿಮಾಗಳಿಗೆ ಬರೆದು ಕೊಟ್ಟಿದ್ದರು. ಆದರೆ ಬಂಡಾಯ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದರಿಂದ ಇವರು ಬರೆದ ಚಲನಚಿತ್ರ ಗೀತೆಗೆ ವಿರೋಧಗಳು ವ್ಯಕ್ತವಾದವು. ಆದರೆ ದಲಿತರ ನೋವಿನ ಹಿನ್ನೆಲೆಯಲ್ಲಿ ಬರೆದ ಹಾಡು 'ಜೀತದ ಜೀವಕೆ ಕೊನೆಯೇ ಇಲ್ಲವೆ' ಎಂಬ ಹಾಡು ಜೀತಗಾರನ ಬದುಕನ್ನು ಹೇಳುವುದಾಗಿತ್ತು. ಇದೊಂದು ಉತ್ತಮ ಚಲನಚಿತ್ರ ಗೀತೆ ಎಂದು ಪ್ರಶಸ್ತಿಯು ದೊರೆಯಿತು.

ಮಂಡ್ಯದ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿಯ ಸಭೆ ನಡೆದಿತ್ತು. ಅಲ್ಲಿಂದ ಹದಿನೈದು ಕಿಲೋಮೀಟರ್ ದೂರದಲ್ಲಿದ್ದ ಹಳ್ಳಿಯಲ್ಲಿ ದಲಿತರಿಗೂ ಹಾಗೂ ಸವರ್ಣೀಯರಿಗೂ ಘರ್ಷಣೆಯಾಗಿ ಹಲವರು ಆಸ್ಪತ್ರೆ ಸೇರಿದ್ದರು. ಇವರನ್ನು ಭೇಟಿಯಾದ ದಲಿತ ನಾಯಕರು ತಮ್ಮ ಗ್ರಾಮಕ್ಕೆ ಬಂದು ನ್ಯಾಯ ಕೊಡಿಸಬೇಕೆಂದು ವಿನಂತಿಸಿದ್ದರು. ಅಲ್ಲಿಗೆ ಹೋದ ಸಿದ್ಧಲಿಂಗಯ್ಯನವರು ತಮ್ಮ ಭಾಷಣದಲ್ಲಿ "ಗ್ರಾಮ ಒಂದಾಗಿ ಬಾಳಬೇಕಾದರೆ ಗ್ರಾಮದ ಸವರ್ಣೀಯರು ಮತ್ತು ದಲಿತರು ತಮ್ಮ ಜೀವನೋಪಾಯಕ್ಕೆ ಒಬ್ಬರನ್ನೊಬ್ಬರು ಅವಲಂಬಿಸಿದ್ದಾರೆಂದು ಈ ಅವಲಂಬನೆ ಇಬ್ಬರ ಬದುಕಿಗೂ ಆಧಾರವೆಂದು ಎರಡು ಗುಂಪುಗಳು ಅಣ್ಣ ತಮ್ಮಂದಿರಂತೆ ಬಾಳ್ವೆ ನಡೆಸಬೇಕೆಂದು ಹೇಳಿದೆ."[28] ಇವರ ಮಾತುಗಳು ಎರಡು ಗುಂಪುಗಳಿಗೆ ಅರಿವಾಗಿ ಅವರು ಹೇಳಿದಂತೆ ನಡೆದುಕೊಂಡರು.

ಸಿದ್ಧಲಿಂಗಯ್ಯನವರು ಕೆ.ವಿ. ಸುಬ್ಬಣ್ಣನವರ ಆಹ್ವಾನದ ಮೇರೆಗೆ ಸಂಸ್ಕೃತಿ ಶಿಬಿರದಲ್ಲಿ ಬಾಗವಹಿಸಲು ಶಿವಮೊಗ್ಗಕ್ಕೆ ಹೊರಟರು. ಊರು ತಲುಪಿದಾಗ ಬೆಳಗಿನ ಜಾವ ಇನ್ನು ಕತ್ತಲಿದ್ದು, ಸಾಗರಕ್ಕೆ ಬಸ್ ಹತ್ತಲು ಬಸ್‌ಸ್ಟ್ಯಾಂಡಿಗೆ ಯಾವ ಕಡೆಗೆ ಹೋಗಬೇಕೆಂದು ಒಬ್ಬ ವ್ಯಕ್ತಿಯನ್ನು ಕೇಳುತ್ತಾರೆ. "ಆ ವ್ಯಕ್ತಿ ತಮ್ಮ ಬಳಿ ಇದ್ದ ಒಂದು ದೊಡ್ಡ ಚೀಲವನ್ನು ಹೊತ್ತುಕೊಂಡು ಬರುವುದಾದರೆ ದಾರಿ ತೋರಿಸುತ್ತೇನೆ ಎಂದನು. ನಾನು ವಿಧಾನ ಪರಿಷತ್ತಿನ ಸದಸ್ಯನೆಂಬ ಗುರುತು ಅವನಿಗೆ ಖಂಡಿತ ಇರಲಿಲ್ಲ. ಶಾಸಕನೆಂಬ ಹಮ್ಮು ನನಗೂ ಇರಲಿಲ್ಲ. ಅವನ ಚೀಲ ಹೊತ್ತುಕೊಳ್ಳುವುದು ಸಮಾಜಸೇವೆಯ ಒಂದು ಭಾಗವೆಂದು ತಿಳಿದು ಆತ ಎರಡು ಚೀಲ ನಾನು ಒಂದು ಚೀಲ ಹೊತ್ತುಕೊಂಡು ಬಸ್‌ಸ್ಟ್ಯಾಂಡ್ ತಲುಪಿದೆವು."[29] ಇವರಲ್ಲಿ ಯಾವಾಗಲೂ ಸಹಾಯ ಮಾಡುವ ಮನೋಭಾವ ಜಾಗ್ರತವಾಗಿತ್ತು. ಹೋರಾಟ, ಸಂಘರ್ಷ, ಚಳುವಳಿ ಸೇವಾಗುಣ ಇವರು

ಮೊದಲಿನಿಂದಲೂ ರೂಢಿಸಿಕೊಂಡು ಬಂದ ಗುಣಗಳು. ಅದರಿಂದಲೇ ಜನಪ್ರಿಯತೆ ಗಳಿಸಿಕೊಂಡಿದ್ದಾರೆ. ಅವರ ಜನಪ್ರಿಯತೆಗೆ ಸಾಕ್ಷಿ. ಬಸವರಾಜ ಕಟ್ಟೀಮನಿ ಅವರ ಕಾದಂಬರಿ 'ಹರಿಜನಾಯಣ', ಕಟ್ಟೀಮನಿಯವರು ಕುವೆಂಪು ಅವರ ಕವಿತೆಗಳನ್ನು ತಮ್ಮ ಕಾದಂಬರಿಗಳಲ್ಲಿ ತರುತ್ತಿದ್ದರು. ಆದರೆ ಸಿದ್ಧಲಿಂಗಯ್ಯನವರ ಕವಿತೆ ಇದ್ದ ಹರಿಜನಾಯಣ ಅದ್ಭುತ ಕಾದಂಬರಿಯಾಗಿತ್ತು. ಅದನ್ನು ಓದಿದ ಸಿದ್ಧಲಿಂಗಯ್ಯನವರು 'ನಾನು ಸಾಧಿಸಬೇಕಾದ್ದು ಬಹಳ ಇದೆ. ಮಹಾಕವಿ ಕುವೆಂಪು ಎಲ್ಲಿ, ನಾನೆಲ್ಲಿ ಎಂಬ ಅಳುಕು ಶುರುವಾಯಿತು. ಸಾಹಿತ್ಯಿಕವಾಗಿ ಸಾಮಾಜಿಕವಾಗಿ ದಲಿತ ಸಮುದಾಯ ಅಪೇಕ್ಷಿಸುವ ನನ್ನ ಹೊಣೆಗಾರಿಕೆಯ ಅರಿವಾಯಿತು'[30] ಎಂದುಕೊಳ್ಳುತ್ತಾರೆ. ಇವರು ಶಾಸಕರಾಗಿದ್ದಾಗ ಮಾಡಿದ ಸೇವಾಕಾರ್ಯಗಳನ್ನು ಗುರುತಿಸಿದರೆ ಹಲವಾರು ಈ ಭಾಗದಲ್ಲಿ ಮುದ್ರಣಗೊಂಡಿದೆ. ಬೀದರ್‌ನಲ್ಲಿ ದಲಿತ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಅಧಿಕಾರಿಯನ್ನು ಅರೆಬೆತ್ತಲೆ ಮೆರವಣಿಗೆ ಮಾಡಿದ್ದು' ಪತ್ರಿಕೆಯಲ್ಲಿ ಓದಿ ಅವರ ಪೂರ್ತಿ ವಿವರವನ್ನು ಪಡೆದು ಸದನದಲ್ಲಿ ವಿಷಯವನ್ನು ಮಂಡಿಸುತ್ತಾರೆ. "ದಲಿತ ವಿದ್ಯಾರ್ಥಿಗಳು ಕುಡಿಯುವ ನೀರಿಗಾಗಿ ಎರಡು ವರ್ಷಗಳಿಂದ ಹೋರಾಟ ಮಾಡಿದ್ದನ್ನು ವಿದ್ಯಾರ್ಥಿಯೊಬ್ಬ ಸ್ನಾನ ಮಾಡಲು ಹೋಗಿ ಪಾಳುಬಾವಿಗೆ ಬಿದ್ದು ಸತ್ತದ್ದನ್ನು, ಇದಕ್ಕೆಲ್ಲ ಅಧಿಕಾರಿಯ ನಿರ್ಲಕ್ಷ್ಯವೇ ಕಾರಣವೆಂದು ವಿದ್ಯಾರ್ಥಿಗಳು ಪ್ರತಿಭಟನಾ ಮೆರವಣಿಗೆ ಮಾಡುತ್ತಿದ್ದಾಗ ಎದುರಿಗೆ ಬಂದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯನ್ನು ನೋಡಿ ವಿದ್ಯಾರ್ಥಿಯ ಸಾವಿಗೆ ಈತನೇ ಕಾರಣವೆಂದು ಆತನ ಅರೆಬೆತ್ತಲೆ ಮೆರವಣಿಗೆ ಮಾಡಿದ್ದಾರೆ. ಸರ್ಕಾರ ಇದೇ ರೀತಿ ದಲಿತ ವಿದ್ಯಾರ್ಥಿಗಳಿಗೆ ಸರಿಯಾಗಿ ಊಟ ಕೊಡದೆ, ಕುಡಿಯಲು ನೀರನ್ನು ಕೊಡದೆ ಬೇಜವಾಬ್ದಾರಿಯಿಂದ ವರ್ತಿಸಿದರೆ ನೆನ್ನೆ ದಿನ ಅಧಿಕಾರಿಯ ಅರೆಬೆತ್ತಲೆ ಮೆರವಣಿಗೆ ನಡೆದಿದೆ. ಮುಂದೊಂದು ದಿನ ಬೇಜವಾಬ್ದಾರಿಯ ಅಧಿಕಾರಿಗಳ ಪೂರ್ಣ ಬೆತ್ತಲೆ ಮೆರವಣಿಗೆ ನಡೆಯುವ ದಿನ ದೂರವಿಲ್ಲ'[31] ಎಂದು ಹೇಳುತ್ತಾರೆ. ದಲಿತ ವಿದ್ಯಾರ್ಥಿಗಳ ಪ್ರತಿಭಟನೆಗೆ ಸರ್ಕಾರ ಸ್ಪಂದಿಸಿ ಅವರಿಗೆ ನ್ಯಾಯ ಸಿಗುವಂತೆ ಮಾಡುತ್ತದೆ. ಮಂಡ್ಯದ ದಲಿತ ವಿದ್ಯಾರ್ಥಿಗಳನ್ನು ಹುಡುಕಿ ವಿದ್ಯಾರ್ಥಿವೇತನ ಕೊಡುವಂತೆ ಮಾಡಿದ್ದು, ದಲಿತ ವಿದ್ಯಾರ್ಥಿಗಳನ್ನು ದೇವಾಲಯದೊಳಕ್ಕೆ ಮುಖ್ಯೋಪಾಧ್ಯಾಯರೇ ಮೊದಲು ಕೈಹಿಡಿದು ಕರೆದುಕೊಂಡು ಹೋಗುವಂತೆ ಮಾಡಿದ್ದು, ಧಾರವಾಡ ಜಿಲ್ಲೆಯ ಗಜೇಂದ್ರಗಡದ ದಲಿತ ಉಪನ್ಯಾಸಕಿಗೆ ನೀಡುತ್ತಿದ್ದ ಕಿರುಕುಳವನ್ನು ತಪ್ಪಿಸಿದ್ದು, ಇವೆಲ್ಲ ಸಂಗತಿಗಳನ್ನು ಸದನದಲ್ಲಿ ಸಿದ್ಧಲಿಂಗಯ್ಯನವರು ಪ್ರಶ್ನಿಸಿ ನ್ಯಾಯ ಒದಗಿಸಿದ್ದರು.

ಅಷ್ಟೇ ಅಲ್ಲದೆ 'ಅಗ್ನಿಶಾಮಕರ ಒಡಲಿನ ಬೆಂಕಿ'ಯನ್ನು ಆರಿಸುವವರು ಯಾರು ಎಂದು ಅವರ ನೋವನ್ನು ಕೇಳುವವರಿಲ್ಲ ಎಂದು ಸರ್ಕಾರದ ವಿರುದ್ಧ ಧ್ವನಿ ಎತ್ತಿ ೧೯ ಗಂಟೆಗಳ ದುಡಿಸಿಕೊಳ್ಳುತ್ತಿರುವ ಸರ್ಕಾರವನ್ನು 'ಜೀತ ಪದ್ಧತಿ' ಬಲತ್ಕಾರದ ದುಡಿಮೆ ಎನ್ನುತ್ತಾರೆ. 'ಈ ಜೀತ ಪದ್ಧತಿ ತಪ್ಪಬೇಕಾದರೆ ಎರಡು ಪಾಳಿ ದುಡಿಮೆಯನ್ನು ಮೂರುಪಾಳಿ ಮಾಡಿ ಆಗ ದುಡಿಯುವ ಅವಧಿ ಎಂಟು ಗಂಟೆಯಾಗುತ್ತದೆ ಎಂದೆನು.' ಅದಕ್ಕೆ ಸರ್ಕಾರ ಒಪ್ಪದಿದ್ದಾಗ "ಅಗ್ನಿಶಾಮಕರು ನಮ್ಮ ನಾಡಿನಲ್ಲಿ ಹೊತ್ತಿ ಉರಿಯುತ್ತಿರುವ ಬೆಂಕಿಯನ್ನು ಆರಿಸುತ್ತಿದ್ದಾರೆ.

ಜನಗಳ ಪ್ರಾಣ ಆಸ್ತಿಯನ್ನು ರಕ್ಷಿಸುತ್ತಿದ್ದಾರೆ. ಆದರೆ ಅವರ ಹೊಟ್ಟೆಯಲ್ಲಿ ಉರಿಯುತ್ತಿರುವ ನೋವಿನ ಬೆಂಕಿಯನ್ನು ಆರಿಸುವವರು ಯಾರು"[32] ಎಂದು ಕೇಳಿದರು. ಇದರಿಂದ ಅಗ್ನಿಶಾಮಕರು ಮನೆಯವರೊಂದಿಗೆ ಮಕ್ಕಳೊಂದಿಗೆ ಬದುಕುವ ಅವಕಾಶ ದೊರೆಯಿತು. ಕಣಿಯರ ಸಮಸ್ಯೆ, ಕೊರಗರ ಅಜಲು ಪದ್ಧತಿ ನಿಷೇಧಕ್ಕೆ ಹೋರಾಟವನ್ನು ನಡೆಸಿದ್ದಾರೆ. ಇಂದಿಗೂ ಕಣಿಯರ ಸಮಸ್ಯೆ ಕೇಂದ್ರ ಸರ್ಕಾರದವರೆಗೆ ಹೋಗಿ ನಿರ್ಧಾರವಾಗಲು ಇಂದಿಗೂ ಸಿದ್ಧಲಿಂಗಯ್ಯನವರ ಶ್ರಮವಿದೆ.

**ತುಂಬಾಡಿ ರಾಮಯ್ಯನವರ ಮಣೆಗಾರ : ೧೯೯೯, ೨೦೦೭**

ತುಂಬಾಡಿ ರಾಮಯ್ಯನವರು ವಿಶಿಷ್ಟ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಸಮಾಜವನ್ನು ಅವರದೇ ಆದ ವಿಶೇಷ ರೀತಿಯಲ್ಲಿ ಕಂಡಿದ್ದಾರೆ. ಯಾರನ್ನು ದೂಷಿಸದ ದ್ವೇಷಿಸದ ಮನೋಭಾವ ಇವರದು. ರಾಮಯ್ಯನವರು ಆತ್ಮಕಥೆಯನ್ನು ಸರಳವಾಗಿ ಸುಂದರವಾಗಿ ಮೂಡಿಸಿದ್ದಾರೆ. ಮಣೆಗಾರ ಅವರ ಕಥೆ ಮಾತ್ರವಾಗಿರದೆ ಒಂದು ಜನಾಂಗದ ಚಿತ್ರಣವನ್ನು, ಗ್ರಾಮೀಣ ಸಂಸ್ಕೃತಿಯನ್ನು ಸಾಂಸ್ಕೃತಿಕವಾದ ವೈವಿದ್ಯತೆಯನ್ನು ಕಟ್ಟಿಕೊಡುತ್ತದೆ. ದಲಿತರ ಸ್ಥಿತಿಗಳಲ್ಲಿ ಬದುಕಿನ ರೀತಿ ಒಂದೇ ಆದರೂ ಅವರಲ್ಲಿನ ಕಲೆಯ ಪ್ರಕಾರಗಳು ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತವೆ. ಸ್ವಂತಃ ಕಲಾವಿದರಾದ ರಾಮಯ್ಯನವರು ಸಾಹಿತಿಗಳಾಗಿ, ಹೋರಾಟಗಾರರಾಗಿಯೂ ಚಿರಪರಿಚಿತರು. ಪ್ರಗತಿಪರ ಸಂಘಟನೆ ಹೋರಾಟ, ದಲಿತ ಸಂಘರ್ಷ ಸಮಿತಿಯಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದವರು.

ಮಣೆಗಾರ ಆತ್ಮಕಥೆಯು ಎರಡು ಭಾಗಗಳಲ್ಲಿ ೪೦ ಅಧ್ಯಾಯಗಳನ್ನು ಒಳಗೊಂಡಿದೆ. ತಮ್ಮ ಬದುಕಿನ ಪ್ರಾರಂಭದ ದಿನಗಳನ್ನು ನೆನಪಿಸಿಕೊಳ್ಳುತ್ತಾ ದಲಿತರಲ್ಲಿ ಸಹಜವಾಗಿ ಬಡತನ, ಹಸಿವು ಎಲ್ಲವೂ ಸೇರಿಕೊಂಡಿದ್ದವು. ಅವರು ವಾಸಿಸುವ ಮನೆಯ ಚಿತ್ರಣವನ್ನು ಅವರು ನೀಡುತ್ತಾರೆ. 'ಆ ಸಣ್ಣ ತೊಲೆನಾ ಕಾಳೆಕುಂಟೆ ನಾಗಣ್ಣ ಮೇಸ್ತ್ರು ಕೊಟ್ಟಿದ್ದು, ಈ ಜಂತೆನೆಲ್ಲಾ ಕುರಿ ಮಲ್ಲಪ್ಪನವರ ಈರನಾಗಪ್ಪ ಕೊಟ್ಟಿದ್ದು, ಮೇಲ್ ಮುದ್ದೆ ಹಾಕೋ ದಿನ ಊರಿನ ಮನೆಗೊಬ್ರಂತೆ ಬಂದು ಮೇಲ್ ಮುದ್ದೆ ಹಾಕೊಟ್ರು ಅವತ್ತು ಮೇಲ್ ಮುದ್ದೆ ಹಾಕ್ದೋರಿಗೆಲ್ಲಾ, ಆ ಪುಣಾತ್‌ಗಿತ್ತಿ ಕುಂಚಿಟಿಗರ ಲಕ್ಕಮ್ಮ ಹಿಟ್ ಬೇಯ್ಸಾಕುದ್ಲು. ಆಗ ನಾವು ಪಟ್ಟ ಕಷ್ಟದ ಮುಂದೆ, ಈ ತಿಗಣೆಗಳ ಕಾಟ ಯಾವ ಮಹಾ' ಎಂದು ಎಲ್ಲರನ್ನು ನೆನೆಯುತ್ತಿದ್ದಳು."[33] ಮಾಡಿದ ಸಹಾಯಕ್ಕೆ ಕೃತಜ್ಞತೆಯನ್ನು ಹೇಳುವ ಗುಣವಿರುವುದು ದಲಿತರಲ್ಲಿ ಕಷ್ಟಕಾಲದಲ್ಲಿ ಸಹಾಯ ಮಾಡಿದವರನ್ನು ಕೊನೆಯವರೆಗೂ ಕೃತಜ್ಞತಾಪೂರ್ವಕವಾಗಿ ನೆನೆದುಕೊಳ್ಳುತ್ತಿದ್ದರು.

ಮಣೆಗಾರ ಆತ್ಮಕಥೆ ಇಂಥ ಮಹತ್ವದ ಅಂಶಗಳಿಗೆ ಸಾಕ್ಷಿಯಾಗುವುದು. ಇಲ್ಲಿ ಮಣೆಗಾರ ಎಂದು ಅವರ ಊರಿನ ಕಡೆ ಮಾದಿಗರನ್ನು ಕರೆಯುತ್ತಿದ್ದರೆಂದು ಹೇಳುತ್ತಾರೆ. "ನಮ್ಮೂರು ತುಂಬಾಡಿ ಗೊಲ್ಲಹಳ್ಳಿಯ ಬೆನ್ನಿಗೇ ಇರುವ ವಡ್ಡಗೆರೆ ವೀರನಾಗಮ್ಮನ ಗುಡಿಯೊಳಕ್ಕೆ ನಮ್ಮ ಮಣೆಗಾರರಿಗೆ ಇವೊತ್ತಿಗೂ ಪ್ರವೇಶವಿಲ್ಲ."[34] ದಲಿತರನ್ನು ಯಾವ ಊರಿನಲ್ಲೂ ದೇವಾಲಯದ ಒಳಗೆ ಪ್ರವೇಶ ನೀಡುತ್ತಿರಲಿಲ್ಲ. ಅವರು ದೇವರ ಒಕ್ಕಲುಗಳ ಈ ಜನರಾಗಿದ್ದರು ಅವರಿಗೆಲ್ಲ

ದೇವಾಲಯದ ಒಳಗೆ ಹೋಗಲು ಅನುಮತಿ ನೀಡಿರಲಿಲ್ಲ. ತಾಯಿಯ ಊರು ಕೊರಟಗೆರೆ ಪಕ್ಕದ ಬುಕಾ ಪಟ್ಟಣ. ಅಪ್ಪನದು ಗೊಲ್ಲಹಳ್ಳಿ. ಇದು ತುಂಬಾಡಿಯ ಮಜರೆ ಗ್ರಾಮವಾದ್ದರಿಂದ ತುಂಬಾಡಿ ಗೊಲ್ಲಹಳ್ಳಿ ಎಂಬ ಹೆಸರಿತ್ತು. "ನಮ್ಮ ಮಣೆಗಾರ ಕುಲಗುರುಗಳಾದ ಆದಿ ಜಾಂಬವ ಮುನಿಗಳು ತಮ್ಮ ಪರಿವಾರದೊಂದಿಗೆ ಕುದುರೆ ಮೇಲೆ ಬಂದು ಕಟ್ಟೆಮನೆ ಯಜಮಾನರ ಮನೆಯಲ್ಲಿ ಬಿಡಾರ ಹೂಡುತ್ತಿದ್ದರು. ಈ ಕಟ್ಟೆಮನೆಗೆ ಒಳಪಡುವ ಎಲ್ಲ ಊರುಗಳ ಹಟ್ಟಿಗಳ ಯಜಮಾನರುಗಳು ಆದಿಜಾಂಬವ ಮುನಿಗಳಿಗೆ ಕಪ್ಪ-ಕಾಣಿಕೆಗಳನ್ನು ಒಪ್ಪಿಸಿ ಬರುತ್ತಿದ್ದರು."[35] ಮಣೆಗಾರರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು ಅವರೆಲ್ಲರು ಸುಸಂಸ್ಕೃತರಾಗಿದ್ದರು.

ಮಣೆಗಾರ ಕೃತಿಯಲ್ಲಿ ಯಾವ ಅಂಜಿಕೆಯೂ ಇಲ್ಲದ ಮಾತುಗಳನ್ನು ಕೇಳಬಹುದಾಗಿತ್ತು 'ಅಪ್ಪನ ಕಾಯಕ ಚಪ್ಪಲಿ ಹೊಲಿಯುವುದು ಅವುಗಳನ್ನು ಸಂತೆಗಳಲ್ಲಿ ಮಾರಲು ಹೋಗುವುದು.' "ನಾನು ಸ್ಕೂಲಿನ ರಜಾದಿನಗಳಲ್ಲಿ ಅಪ್ಪನ ಜೊತೆ ಹಳ್ಳಿಗಳಿಗೆ ಚಪ್ಪಲಿ ಹೊಲೆಯಲು ನಾನು ಹೋಗುತ್ತಿದ್ದೆ. ಉಂಗುಷ್ಠ ಹೊಲಿಯುವುದು, ಅಟ್ಟೆಗೆ ಮೊಳೆ ಹೊಡೆಯುವುದು, ಸಣ್ಣ ಟಾಕ ಹಾಕುವುದು ಇವೇ ಮುಂತಾದ ಸಣ್ಣ ಪುಟ್ಟ ಕೆಲಸಗಳನ್ನು ನಾನು ಮಾಡುತ್ತಿದ್ದೆ".[36] ತಮ್ಮ ಕಾಯಕ ವೃತ್ತಿಯನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. 'ಅಕ್ಕಿರಾಂಪುರದ ಸಂತೆ ಶನಿವಾರ ಮಧ್ಯಾಹ್ನದ ಹೊತ್ತಿಗೆ ಸ್ಕೂಲು ಮುಗಿಸಿಕೊಂಡು ಬರುತ್ತಿದ್ದ ನಾನು, ಅಪ್ಪನ ಜೊತೆ ಸಂತೆಗೆ ಚಪ್ಪಲಿ ಹೊಲೆಯಲು ಹೋಗಬೇಕಾಗುತ್ತಿತ್ತು ಇಳಿಹೊತ್ತಿಗೆ ಚಪ್ಪಲಿ ರೀಪೇರಿಯಿಂದ ಬಂದ ಹಣದಲ್ಲಿ ಅಪ್ಪ ಮನೆಗೆ ರಾಗಿ ಮತ್ತು ಸ್ವಲ್ಪ ತರಕಾರಿಯನ್ನು ಕೊಡಿಸುತ್ತಿದ್ದ. ನಾನು ಅದನ್ನು ಹೊತ್ತುಕೊಂಡು ಮನೆಗೆ ಹೋಗುತ್ತಿದ್ದೆ.[37] ದಲಿತರ ಬದುಕಿನ ಚಿತ್ರಣವಿದು. ಕಷ್ಟಜೀವಿಗಳು ದುಡಿದು ಬದುಕುವ, ಅಲೋಚನೆಯನ್ನು ದಲಿತರಲ್ಲಿ ಕಾಣಬಹುದಾಗಿತ್ತು.

ಮಣೆಗಾರರಿಗೆ ವಂಶಪಾರಂಪರ್ಯವಾಗಿ ಬಂದ ಕಲೆ ತಮಟೆ ಬಡಿಯುವುದು. ಅದನ್ನು ಕಡ್ಡಾಯವಾಗಿ ಕಲಿತಿದ್ದರು. "ಸತ್ತ ದನಗಳನ್ನು ಹಟ್ಟಿಗೆ ತಂದು ಕೊಯ್ಯುವ ಕೆಲಸವನ್ನು ನಮ್ಮ ಮಣೆಗಾರರೇ ಮಾಡುತ್ತಿದ್ದರು. ಕೊಯ್ದ ದನದ ಜಠರದ ಹತ್ತಿರ ಸಿಗುತ್ತಿದ್ದ ಪೊರೆಯಂತಹ ತೆಳುವಾದ ಚರ್ಮವನ್ನು ಹೊರತೆಗೆದು, ಅದನ್ನು ಒಡೆದು ಹೋದ ಮಡಕೆಯ ಕಂಠಕ್ಕೆ ಬಿಗಿದು ಕಟ್ಟಿ, ಬಿಸಿಲಲ್ಲಿ ಒಣಗಿಸಿ ಕಡ್ಡಿಯಿಂದ ಬಾರಿಸಿದರೆ ತಮಟೆ ಬಡಿದ ಶಬ್ದ ಬರುತ್ತಿತ್ತು".[38] ಅಗತ್ಯವಾಗಿದ್ದ ಮತ್ತು ಕಲಿಯಲೇಬೇಕಾಗಿದ್ದ ಸಂದರ್ಭವನ್ನು ಹೇಳಿದ್ದಾರೆ. ಬಾಬಾಸಾಹೇಬರು ಅಂದಿಗೆ ದಲಿತರನ್ನು ಕುರಿತು ಭಾಷಣ ಮಾಡುತ್ತಾ 'ಸತ್ತ ದನಗಳನ್ನು ಹೊತ್ತೊಯ್ಯಬಾರದು ಅವರ ಮನೆಯ ಕೆಲಸಗಳನ್ನು ಅವರೇ ಮಾಡಿಕೊಳ್ಳಲಿ' ಎಂಬ ಕರೆಯನ್ನು ನೀಡಿದ್ದರು. 'ಸತ್ತದನದ ಮಾಂಸವನ್ನು ತಿನ್ನುವುದರಿಂದ ನಿಮ್ಮನ್ನು ಅಸ್ಪೃಶ್ಯರೆಂದು ಕರೆದು ನಿಮ್ಮನ್ನು ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂದು ನಿಮ್ಮನ್ನು ಊರಿನಿಂದ ದೂರವಿರುವಂತೆ ಮಾಡಿದ್ದಾರೆ' ಎಂದು ಅಂಬೇಡ್ಕರ್ ಅವರು ಹೇಳುತ್ತಿದ್ದರು. ದಲಿತರು ಎಂದಿನಿಂದ ಊರಿನ ಕೆಲಸ ಕಾರ್ಯಗಳನ್ನು ಕಡ್ಡಾಯವಾಗಿ ಮಾಡಬೇಕೆಂಬ

ನಿಯಮವಿದ್ದು ಅದನ್ನು ಪಾಲಿಸಿಕೊಂಡು ಬಂದಿದ್ದರು. ಇದು ದೇಶದ ಎಲ್ಲಾ ಭಾಗದಲ್ಲಿಯೂ ದಲಿತರು ಮಾಡುತ್ತಿದ್ದ ಕೆಲಸವಾಗಿತ್ತು.

ತಮಟೆ ಬಡಿಯುವುದು ದಲಿತರ ಪ್ರಸಿದ್ಧವಾದ ಕಲೆ. 'ತಮಟೆ ಬಡಿಯುವವನಿಗೆ ಲೋಕದ ಎಲ್ಲ ವಸ್ತುಗಳೂ ಕರಗಿ ಹೋಗಿ, ಕೇವಲ ತಮಟೆ ಮತ್ತು ಅದರ ಲಯ ಮಾತ್ರ ಅವನ ಪ್ರಜ್ಞೆಯಲ್ಲಿರುತ್ತಿತ್ತು.[39] ಅದೊಂದು ನಿರಂತರ ಮತ್ತು ಸ್ವಶ್ರಮ, ಸ್ವಶಕ್ತಿಯ ಕಲಿಯಾಗಿತ್ತು. ತಮಟೆಯ ಸದ್ದಿಗೆ ಮನಸೋಲದೆ ಇರುವವರಿಲ್ಲ. ತಮಟೆಯ ಸದ್ದು ಎಂತಹವರಲ್ಲೂ ಒಂದು ಸಂಚಲನವನ್ನುಂಟು ಮಾಡುತ್ತದೆ. ರಾಮಯ್ಯನವರ ತಂದೆ ಚಪ್ಪಲಿ ಹೊಲೆಯುವ ತಮಟೆ ಒಡೆಯುವ, ಹಂದಿ ಸಾಕಾಣೆ ಮಾಡುವ, ಬೇಸಾಯವನ್ನು ಮಾಡುತ್ತಿದ್ದರು. ಅಂದರೆ ಮನೆ ಮಂದಿಯನ್ನು ಸಾಕಲು ದಿನನಿತ್ಯವು ಕಾಯಕದಲ್ಲಿ ತೊಡಗುತ್ತಿದ್ದರು.

ರಾಮಯ್ಯನವರ ಊರಾದ ತುಂಬಾಡಿ ಗೊಲ್ಲಹಳ್ಳಿಯಲ್ಲಿ ಮಣೆಗಾರರು ಒಂಬತ್ತು ಕುಟುಂಬ, ಹೊಲೆಯರವು ಒಂಬತ್ತು. ಲಿಂಗಾಯುತರದು ಒಂದು, ಹಜಾಮರದು ಒಂದು ಮನೆ, ತಿಗಳರದು ಒಂದು, ತಳವಾರರದು ಏಳು, ಆರು ವಡ್ಡರ ಮನೆ, ಮೂರು ಮಡಿವಾಳರದು, ಜೈನರದು ಎರಡು ಕುಟುಂಬ, ಇಪ್ಪತ್ತು ಕುರುಬರು, ಹದಿನಾರು ಕುಂಚಿಟಗರ ಮನೆಗಳಿದ್ದವು, ಇವುಗಳನ್ನು ಏಕೆ ಹೇಳಿದ್ದಾರೆಂದರೆ ಇವರಲ್ಲಿನ ವ್ಯತ್ಯಾಸಗಳು ಒಂದು ರೀತಿಯದಾದರೆ ಅಸ್ಪೃಶ್ಯ ಜಾತಿಗಳದೆ ಒಂದು ರೀತಿಯಾಗಿತ್ತು. "ನಮ್ಮ ಹಳ್ಳಿಯಲ್ಲಿ ಮಣೆಗಾರರಿಗೆ ಒಂದು ಬಾವಿ, ಹೊಲೆಯರಿಗೆ ಒಂದು ಬಾವಿ ಇತ್ತು. ಅವರ ಬಾವಿಯಲ್ಲಿ ನಾವಾಗಲಿ, ನಮ್ಮ ಬಾವಿಯಲ್ಲಿ ಅವರಾಗಲಿ ಎಂದೂ ನೀರು ಸೇದುವಂತಿರಲಿಲ್ಲ; ಹೊಲೆಯರ ಹೆಂಗಸರು ನಮ್ಮ ಹಟ್ಟಿಗೆ ಕೂಲಿಯಾಳುಗಳನ್ನು ಕರೆಯಲು ಬಂದಾಗ, ಕೆಂಡದ ಮೇಲೆ ನಡೆದು ಬರುವಂತೆ ಬಂದು ಹೋಗುತ್ತಿದ್ದರು. ತಮ್ಮ ಹಟ್ಟಿಗೆ ಹೋದ ಕೂಡಲೆ ಸಗಣಿ–ಗಂಜಲ ತುಳಿದು ತಮ್ಮ ಕಾಲುಗಳನ್ನು ಪಾವನವಾಗಿಸಿಕೊಳ್ಳುತ್ತಿದ್ದರು."[40] ಮೇಲುವರ್ಗದವರು ಅಸ್ಪೃಶ್ಯರನ್ನು ಮುಟ್ಟದೆ, ಮಾತಾಡಿಸಿದರೆ ಮೈಲಿಗೆ ಎಂದುಕೊಂಡಿದ್ದರೇ. ಅಸ್ಪೃಶ್ಯರಲ್ಲಿನ ಈ ಎರಡು ಜಾತಿಗಳಲ್ಲಿಯೂ ಅಸ್ಪೃಶ್ಯತೆಯೂ ಮನೆ ಮಾಡಿತು. ಅವರವರಲ್ಲಿ ಮಡಿ ಮೈಲಿಗೆ ಎಂಬ ಆಲೋಚನೆಯನ್ನಿಟ್ಟುಕೊಂಡು ವರ್ತಿಸುತ್ತಿದ್ದರು. ಒಬ್ಬರಿಂದ ಒಬ್ಬರಿಗೆ ನಡೆಯುತ್ತಿದ್ದ ಶೋಷಣೆಯ ಹಂತಗಳನ್ನು ಗುರುತಿಸಬಹುದಾಗಿತ್ತು.

ಮಣೆಗಾರರಲ್ಲಿದ್ದ ನಂಬಿಕೆಗಳು ಮತ್ತು ಮೂಢನಂಬಿಕೆಗಳನ್ನು ಹೀಗೆ ಗುರುತಿಸುತ್ತಾರೆ. ಅವರ ಊರಿನಲ್ಲಿ ಎಲ್ಲರೂ ಸೇರಿ ಮಾಡುತ್ತಿದ್ದ ಹಬ್ಬಗಳು ಉಗಾದಿ, ಮಾರ್ನೋಮಿ, ಬಾಬಯ್ಯನ ಜಲ್ದಿ, ಆಂಜನೇಯ ಮತ್ತು ಶೆಟ್ಟಿಹಳ್ಳಿ ಮಾರಮ್ಮನ ಆರತಿ ಇವುಗಳನ್ನು ಕಡ್ಡಾಯವಾಗಿ ಎಲ್ಲ ಜಾತಿಯವರು ಮಾಡುತ್ತಿದ್ದರು. ಆ ಊರಿನ 'ಮಣೆಗಾರರು' ಮರ್ನೋಮಿ ಹಬ್ಬವನ್ನು ಮಾಡುತ್ತಿರಲಿಲ್ಲ. ಅದಕ್ಕೇ ಕಾರಣ ಪೂರ್ವಿಕಲ್ಲೊಬ್ಬ ಹಬ್ಬಕ್ಕೆ ಸಾಮಾನು ತರಲು ತಂದೆಯೊಂದಿಗೆ ಹೋದ ಹಿರಿಯ ಮಗ ಬರುವಾಗ ಇದ್ದಕ್ಕಿದಂತೆ ಸತ್ತು ಹೋದನಂತೆ. ಆ ದುಃಖದಲ್ಲಿ ಆ ಹಬ್ಬವನ್ನು ಮಾಡುವುದೇ ಬೇಡವೆಂದು ನಿರ್ಧರಿಸಿ ಇಂದಿನವರೆಗೆ ಹಾಗೆ ನಡೆಯುತ್ತಿದ್ದಾರೆ.

"ನಾನಂತೂ ಸಂಪೂರ್ಣವಾಗಿ ಅನಕ್ಷರಸ್ಥರ ನಡುವೆಯೆ ಬೆಳೆದು ಬಂದವನು. ಆದರೂ ಅವರಲ್ಲಿದ್ದ ಮಾನವೀಯತೆ, ಕಲೆ, ಲೋಕಜ್ಞಾನಗಳನ್ನು ನಾನು ಕಲಿತಿದ್ದೇನೆ."[41] ಇಂತಹ ವಾತಾವರಣದಲ್ಲಿ ರಾಮಯ್ಯ ಬೆಳೆಯುತ್ತಾರೆ. ಆರನೆಯ ತರಗತಿ ಓದುವಾಗ ಬಂದ ಬರಗಾಲದಿಂದ ಇಡೀ ಊರು ತತ್ತರಿಸಿತ್ತು. ಶಾಲೆಯಲ್ಲಿ ಕೊಡುವ ಅರೆಬೆಂದ, ಉಳುವಿನಿಂದ ಕೂಡಿದ, ಎಣ್ಣೆ, ಈರುಳ್ಳಿಯನ್ನು ಕಾಣದ ಉಪ್ಪಿಟ್ಟನ್ನು ನೀಡುತ್ತಿದ್ದರು. ಆಗ ಇಬ್ಬರು ಉತ್ತಮ ಸ್ಥಿತಿಯಲ್ಲಿದ್ದ ಹುಡುಗರಿಗೆ ಪಾಠವನ್ನು ಬರೆದುಕೊಡುತ್ತಿದ್ದರು. ಆ ಹುಡುಗರು ಪ್ರತಿಫಲವಾಗಿ ಅವರಿಗೆ 'ನಮ್ಮವರು ಯಾವತ್ತೂ ಮಾಡಲಾರದಂಥ ತಿಂಡಿಗಳಾದ ದೋಸೆ, ಚಪಾತಿ, ಇಡ್ಲಿಗಳನ್ನು ನೀಡುತ್ತಿದ್ದರು".[42] ರಾಮಯ್ಯನವರಿಗೆ ತಂದು ಕೊಡುತ್ತಿದ್ದರು. ಬಡತನ ಮತ್ತು ಹಸಿವು ದಲಿತ ಮಕ್ಕಳಿಗೆ ಏನನ್ನಾದರೂ ಮಾಡಬೇಕು ಎಂಬ ಪಾಠವನ್ನು ಕಲಿಸಿದ್ದವು. ಏಳನೇ ತರಗತಿಗೆ ತುಮಕೂರಿನ ಹಾಸ್ಟೆಲ್‌ಗೆ ಸೇರಿ ಕಷ್ಟಪಟ್ಟು ಓದಲು ಪ್ರಾರಂಭಿಸಿದರು.

ದಲಿತ ಸಂಘರ್ಷ ಸಮಿತಿಯ ಎಲ್ಲ ಕಾರ್ಯಕ್ರಮಗಳಲ್ಲೂ ಕಾರ್ಯಕರ್ತರ ಕಂಠದಿಂದ ಹೊರಡುತ್ತಿದ್ದ 'ನಮ್ಮೂರ ಗುಡಿಯನ್ನು ಕಟ್ಟಿದೋರು ಯಾರಣ್ಣ?/ ಕಟ್ಟಿದಾ ನಮ್ಮನ್ನೆಲ್ಲಾ ಹೊಲೆಮಾದಿಗ್ರಂತಾರೆ/ ನಾವೆ ಕಟ್ಟಿದಾ ಗುಡಿಗೆ ನಾವೆ ಹೋಗಾಂಗಿಲ್ಲ/ಯಾಕೆಂತ ಕೇಳಿದರೆ ನೀವು ಹೊಲೆಮಾದಿಗ್ರಂತಾರೆ ಎಂಬ 'ಹಾಡು ರಾಮಯ್ಯನವರನ್ನು ಸೆಳೆದಿತ್ತು. ದೇವಾಲಯ ಪ್ರವೇಶ ದೇವರನ್ನು ಮುಟ್ಟುವುದು ಸಾಧ್ಯವಿಲ್ಲವಾಗಿತ್ತು. ಆ ಊರಿನ ಅಂಜನೇಯನ ದೇವಾಲಯವನ್ನು ಹೊಸದಾಗಿ ಕಟ್ಟಲು ಪ್ರಾರಂಭಿಸಿದ್ದರು. "ನಾನು ಸುತ್ತಿದ್ದ ಹುಲ್ಲನ್ನು ಪಕ್ಕಕ್ಕೆ ಸರಿಸಿ, ಆಂಜನೇಯ ವಿಗ್ರಹವನ್ನು ಕೈಯಿಂದ ಮುಟ್ಟಿ ಶರಣು ಮಾಡಿಕೊಳ್ಳುತ್ತಾ ಕಲ್ಲು ಕೀಳುತ್ತಿದ್ದೆ. ಅಲ್ಲಿ ನಾನೊಬ್ಬನೆ ಕೆಲಸ ಮಾಡುತ್ತಿದ್ದರಿಂದ, ಬೇರೆಯವರು ನೋಡುತ್ತಾರೆಂಬ ಭಯವಿರಲಿಲ್ಲ. ಆದ್ದರಿಂದ ಆಂಜನೇಯನನ್ನು ತೃಪ್ತಿಯಾಗುವವರೆಗೂ ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಿದ್ದೆ. ಯಾಕೆಂದರೆ ಆ ಆಂಜನೇಯನ ವಿಗ್ರಹವನ್ನು ಮುಟ್ಟಲು ನನಗೆ ಹಿಂದೆಂದೂ ಅವಕಾಶ ಸಿಕ್ಕಿರಲಿಲ್ಲ. ಮುಂದೆ ದೇವಸ್ಥಾನ ಸಿದ್ಧವಾದ ಮೇಲಂತೂ ಈ ಅವಕಾಶ ಶಾಶ್ವತವಾಗಿ ಇಲ್ಲವಾಗುತ್ತಿತ್ತು."[43] ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರು ಸಾಮಾಜಿಕ ಹೋರಾಟವನ್ನು ಪ್ರಾರಂಭಿಸಿದಾಗ ನೀರು ಮುಟ್ಟುವ, ದೇವಾಲಯವನ್ನು ಪ್ರವೇಶಿಸುವ, ಹಕ್ಕುಗಳನ್ನು ಕುರಿತು ಆಲೋಚಿಸಿ ಚಳುವಳಿ ನಡೆಸಿದ್ದರು. ಆದರೆ ಅವರಿಗೆ ದೇವಾಲಯಕ್ಕೆ ಹೋಗುವುದು ಮುಖ್ಯವಾಗಿತ್ತೇ ಹೊರತು ಅದು ಭಕ್ತಿಗಾಗಿ ಅಲ್ಲದೆ ಹಕ್ಕಿಗಾಗಿ ಎಂಬಂತೆ ಇತ್ತು. ದೇವಾಲಯವನ್ನು ಕಟ್ಟುವವರಿಗೆ ದೇವಾಲಯದೊಳಗೆ ಪ್ರವೇಶವಿಲ್ಲ. ಬಾವಿ ತೋಡುವವರಿಗೆ ನೀರು ಮುಟ್ಟುವ ಕುಡಿಯುವ ಹಕ್ಕಿಲ್ಲ. ಎಲ್ಲರ ಮನೆಗಳನ್ನು ಕಟ್ಟುವವರಿಗೆ ಆ ಮನೆಗಳ ಒಳಗೆ ಪ್ರವೇಶವಿಲ್ಲದ ಸ್ಥಿತಿ ನಮ್ಮ ಸಮಾಜದಲ್ಲಿತ್ತು. "ವೀರ ನಾಗಮ್ಮ ದೇವಸ್ಥಾನದಿಂದ ಚೇಲಗಾನಹಳ್ಳಿ ರಸ್ತೆಯ ಪಕ್ಕದಲ್ಲಿ ದೇವಸ್ಥಾನಕ್ಕೆ ಸೇರಿದ ಒಂದು ಮಜ್ಜನ (ಕಲ್ಯಾಣಿ) ಬಾವಿ ಇತ್ತು. ಅದರಲ್ಲಿ ನಮ್ಮ ಜಾತಿಯವರನ್ನು ಹೊರತುಪಡಿಸಿ ಉಳಿದೆಲ್ಲ ಜಾತಿಯ ಹುಡುಗರು ಅದರಲ್ಲಿ ಇಳಿದು ಈಜಾಡುತ್ತಿದ್ದರು. ಸ್ಕೂಲಿನಲ್ಲಿ ಕೊಟ್ಟ ಉಪ್ಪಿಟ್ಟನ್ನು ತಿಂದಾದ ಮೇಲೆ ನನಗೆ ಬಹಳ ಬಾಯಾರಿಕೆಯಾಗುತ್ತಿತ್ತು. ಆದರೆ ನಾವು ಮಜ್ಜನ ಬಾವಿಯಲ್ಲಿ ಇಳಿದು

ನೀರು ಕುಡಿಯುವಂತಿರಲಿಲ್ಲ. ನಮ್ಮೂರಿನ ಪರಶಿವಮೂರ್ತಿ ಎಂಬ ಬೇರೆ ಜಾತಿಯ ಹುಡುಗ ಬಾವಿಯಲ್ಲಿಳಿದು ತನ್ನ ಬೊಗಸೆಯಲ್ಲಿ ನೀರು ತಂದು, ದೂರದಲ್ಲಿ ನಿಂತಿರುತ್ತಿದ್ದ ನನ್ನ ಬೊಗಸೆಗೆ ಸುರಿಯುತ್ತಿದ್ದ".[44] "ನಮ್ಮ ಜಾತಿಯವರನ್ನು ಬಿಟ್ಟು ಉಳಿದ ಎಲ್ಲಾ ಜಾತಿಗಳ ಹುಡುಗರೂ ಸೀದಾ ದೇವಾಸ್ಥಾನದ ಗರ್ಭಗುಡಿಯವರೆಗೂ ಹೋಗಿ ಕೈಮುಗಿದು ಬರುತ್ತಿದ್ದರು. ನಾನು ಮತ್ತು ನಮ್ಮ ಜಾತಿಯ ಹುಡುಗರು, ಅಲ್ಲಿಂಯೇ ಬೇರೆ ಹುಡುಗರು ಕುಂಕುಮ ತಂದು ಕೊಡುವವರೆಗೂ ಕೈ ಮುಗಿಯುತ್ತಾ ನಿಂತಿರುತ್ತಿದ್ದೆವು.[45] ದಲಿತರ ಸ್ಥಿತಿ ಹೀಗೇ ಇತ್ತು. ಪಿಯುಸಿ ಓದುವಾಗ ಹಾಸ್ಟೆಲ್‌ನಲ್ಲಿ ಊಟಕ್ಕೆ ತೊಂದರೆಯಾದರೂ ಸಹಿಸಿಕೊಂಡು ಎರಡನೆ ಪಿಯುಸಿಯಲ್ಲಿ ಮೊದಲ ದರ್ಜೆಯಲ್ಲಿ ಪಾಸಾಗಿದ್ದರು. ೧೯೭೫ರಲ್ಲಿ ಬಿ.ಎ.ಗೆ ಸೇರಿದರು.

ದಲಿತ ವಿದ್ಯಾರ್ಥಿಗಳಿಗೂ ಇತರ ಜಾತಿಯ ವಿದ್ಯಾರ್ಥಿಗಳಿಗೂ ಹೊಡೆದಾಟ ಶುರುವಾದಾಗ ತುಮಕೂರಿನ ಮಾದಿಗರ ಹಟ್ಟಿಯವರೂ ದಲಿತ ವಿದ್ಯಾರ್ಥಿಗಳ ರಕ್ಷಣೆಗೆ ನಿಂತರು. "ತುಮಕೂರಿನಲ್ಲೂ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಘಟಕವನ್ನು ಸ್ಥಾಪಿಸುವ ಉದ್ದೇಶದಿಂದ ನಗರಸಭೆ ಆವರಣದಲ್ಲಿ ಒಂದು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಇದೇ ಕಾರಣದಿಂದ ಬಿ. ಕೃಷ್ಣಪ್ಪನವರು ಮೊದಲ ಬಾರಿಗೆ ತುಮಕೂರಿಗೆ ಬಂದರು". ಬಿ.ಎ.ಮುಗಿಸಿ ಎಲ್.ಎಲ್.ಬಿ ಗೆ ಸೇರಿದಾಗ ದ.ಸಂ.ಸ.ಯ ಕಾರ್ಯಕರ್ತರ ಸಂಪರ್ಕದಿಂದ 'ನಾನು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಹೆಂಡ ಸಾರಾಯಿ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಕೈಗೊಳ್ಳಬೇಕೆಂದು ತೀರ್ಮಾನಿಸಿದ್ದರು". ದಲಿತಪರ ಹೋರಾಟಗಳಿಗಾಗಿಯೇ ಹುಟ್ಟು ಪಡೆದ ದಲಿತ ಸಂಘರ್ಷ ಸಮಿತಿಯು ಕ್ರಮೇಣ ಎಲ್ಲ ಜಾತಿಯ ಬಡವರನ್ನು ಸಂಘಟಿಸುತ್ತಾ, ಅವರ ಪರವಾದ ಹೋರಾಟಗಳಿಗೂ ತನ್ನನ್ನೂ ತೊಡಗಿಸಿಕೊಳ್ಳುತ್ತಿತ್ತು.[46]

ತುಂಬಾಡಿ ರಾಮಯ್ಯನವರು ತಮ್ಮ ಬದುಕು ಹಾಗೂ ಸಮಾಜದ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಇವರ 'ಮುತ್ತಿನ ಜೋಳ' ನೆನಪುಗಳ ಕಥನ ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಆತ್ಮಕಥೆಯಂತೆಯೇ ಇಲ್ಲಿನ ತಮ್ಮ ಜೀವನದ ಹಲವು ನೆನಪುಗಳನ್ನು ಕಟ್ಟಿಕೊಟ್ಟಿದ್ದಾರೆ. "ಬಿ.ಎ. ಪದವಿ ಪರೀಕ್ಷೆಯಲ್ಲಿ ನಾನು ಉತ್ತಮ ಅಂಕ ಪಡೆದೆ. ಇದರಿಂದಾಗಿ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ನನಗೆ ಪ್ರಥಮ ಎಂ.ಎ. ತರಗತಿಗೆ ಮೊದಲ ಪಟ್ಟಿಯಲ್ಲಿಯೇ ಸೀಟು ದೊರೆಯಿತು. ಆ ದುರ್ದಿನಗಳಲ್ಲಿ ಕೇವಲ ಮೂರುನೂರು ರೂಪಾಯಿ ಕಟ್ಟಲಾಗದೆ ನಾನು ಎಂ.ಎ ತರಗತಿಗೆ ಸೇರಲು ಸಾಧ್ಯವಾಗಲಿಲ್ಲ."[47] ಬಡತನದ ಕುಟಂಬದಲ್ಲಿ ಕಷ್ಟದಿಂದಲೇ ಓದಿದ ಇವರಿಗೆ ಉನ್ನತ ವಿದ್ಯಾಭ್ಯಾಸವನ್ನು ಬಡತನದಿಂದಾಗಿಯೇ ಮಾಡಲು ಸಾಧ್ಯವಾಗಿರಲಿಲ್ಲ.

"ಗುಲ್ಬರ್ಗಾದ ಕಾರ್ಮಿಕ ಇಲಾಖೆಗೆ ನಾನು ೧೯೮೭ರಲ್ಲಿ ನಿರೀಕ್ಷಕನಾಗಿ ಆಯ್ಕೆಯಾಗಿದ್ದೆ" ಅತ್ಯಂತ ಕಷ್ಟದಲ್ಲಿ ಬಡತನ ಹಸಿವು ಒದ್ದಾಟಗಳ ನಡುವೆ ಓದಿ ಸರ್ಕಾರಿ ಸೇವೆಗೆ ಸೇರಿದರು. ನಂತರದಲ್ಲಿ ಅವರ ಬದುಕಿನಲ್ಲಿ ಸ್ವಲ್ಪ ಚೇತರಿಕೆಯುಂಟಾಗಿತ್ತು ಇಂತಹ ಹಲವು ಘಟನೆಗಳನ್ನು

ಈ ಕೃತಿಯಲ್ಲಿ ಮೂಡಿಸಿದ್ದಾರೆ. ಅವರಿಗೆ ಸಹಾಯ ಮಾಡಿದ ಪ್ರೀತಿಯಿಂದ ಕಂಡ ದಲಿತರಲ್ಲದವರನ್ನು ನೆನಪಿಸಿಕೊಳ್ಳುತ್ತಾರೆ. ಕಷ್ಟದಲ್ಲಿದ್ದಾಗ ಸಹಾಯಹಸ್ತ ನೀಡಿದ ಅವರ ಜೊತೆಯಾಗಿದ್ದ ಸ್ನೇಹಿತರನ್ನು ಅಧಿಕಾರಿಗಳನ್ನು, ಹೋರಾಟಗಾರರನ್ನು. ಕರುಳುಬಳ್ಳಿಯ ಸಂಬಂಧವನ್ನು ಈ ಕೃತಿಯಲ್ಲಿ ಮೂಡಿಸಿದ್ದಾರೆ. ಈ ಆತ್ಮಕಥೆಯು ಮತ್ತೊಂದು ಅಪರೂಪದ ಕೃತಿಯಾಗಿದೆ.

**ಕೆ. ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ : ೨೦೦೦**

ಕೆ. ಗೋವಿಂದರಾಜು ಅವರು ತಮ್ಮ ಬದುಕಿನಲ್ಲಿ ನಡೆದ ಚಿತ್ರ ವಿಚಿತ್ರವೆನಿಸುವ ಘಟನೆಗಳನ್ನು, ಮನುಷ್ಯ ಸಂಬಂಧಗಳ ಅರಿವಿಲ್ಲದೆ ನಡೆಯುವ ಚಿತ್ರಣವನ್ನು 'ಮನವಿಲ್ಲದವರ ಮಧ್ಯೆ' ಆತ್ಮಕಥೆಯಲ್ಲಿ ಮೂಡಿಸಿದ್ದಾರೆ. ಮನುಷ್ಯ ಜೀವನದ ಮೂರು ಹಂತಗಳು ನಡೆದು ಸಾಗುವಾಗ ಅಲ್ಲಿನ ಏಳು-ಬೀಳುಗಳು ವಿಚಿತ್ರವೆನಿಸುತ್ತವೆ. ಇದು ಸಾಮಾನ್ಯವಾಗಿ ಎಲ್ಲರದು ಆಗಿದೆ. ಆದರೆ ದಲಿತರ ಬದುಕಿನ ರೀತಿಯೇ ಬೇರೆಯಾಗುತ್ತದೆ. ಗೋವಿಂದರಾಜು ಅವರು ದಲಿತರಾದರು ಉತ್ತಮ ಸ್ಥಿತಿಯಲ್ಲಿದ್ದವರು. ತಂದೆ-ತಾಯಿ ಕಷ್ಟ ಜೀವಿಗಳಾದರೂ ಇವರು ಹುಟ್ಟುವಷ್ಟರಲ್ಲಿ ಊಟ, ಬಟ್ಟೆ, ವಸತಿ ಯಾವುದಕ್ಕೂ ಕೊರತೆಯಿಲ್ಲದೆ ಉತ್ತಮವೆನಿಸುವ ಬದುಕನ್ನು ಕಟ್ಟಿಕೊಂಡಿದ್ದರು. ದೊಡ್ಡಲಗೇರಿಯ ಬದುಕಾದರೂ ಸ್ವಂತ ಮನೆಯಲ್ಲಿ ಶುದ್ಧವಾಗಿ ಸ್ವಚ್ಛಮನಸ್ಸಿನಿಂದ ಬೆಳೆಸಿದ ತಂದೆ ತಾಯಿಯ ಹಿರಿಯ ಮಗ ಗೋವಿಂದರಾಜು ಅವರು ವಿದ್ಯಾಭ್ಯಾಸ ಪಡೆದು ಬ್ಯಾಂಕ್‌ವೊಂದರಲ್ಲಿ ನೌಕರರಾಗಿ ಕೆಲಸಕ್ಕೆ ಸೇರಿದಾಗ ಅವರ ಬದುಕು ಬಲು ಸುಂದರವಾಗಿ ನಡೆಯುತ್ತದೆ.

ಮನವಿಲ್ಲದವರ ಮಧ್ಯೆ ೩೬ ಅಧ್ಯಾಯಗಳನ್ನು ಒಳಗೊಂಡ ಆತ್ಮಕಥನವಾಗಿದೆ. ಗೋವಿಂದರಾಜು ಅವರೇ ಹೇಳುವ ಹಾಗೆ "ನಾನು ಹುಟ್ಟಿ ಬೆಳೆದ ಊರು ಕೇರಿಯನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ, ನನ್ನ ಸುತ್ತಲಿನ ಸ್ನೇಹಿತರ, ಸಂಬಂಧಿಗಳ ಮನಸ್ಸು, ಭಾವನೆಗಳೆಂಥವು ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆಂದು ತೊಡಗಿದ ವೇಳೆ ನನಗಾದ ಅಪಮಾನ, ನೋವು ತಲ್ಲಣಗಳಿಂದ ತಳಮಳಿಸಿದ ಸಂದರ್ಭಗಳನ್ನು ಯಾವುದೇ ಪೂರ್ವಾಗ್ರಹಗಳಿಲ್ಲದೆ ಹೇಗಾದರೂ ಹೊರ ಹಾಕಬೇಕೆನಿಸಿತು. ಯಾವುದೋ ದಿಕ್ಕಿನಲ್ಲಿ ಯಾವ ಸಮಸ್ಯೆಯೂ ಇಲ್ಲದಂತೆ ಸಾಗಬೇಕಿದ್ದ ನನ್ನ ಬದುಕು ಕುಸಿದು ಬಿದ್ದು, ಸುಳ್ಳು ವಂಚನೆಗಳ ಜಾಲದಲ್ಲಿ ಸಿಕ್ಕಿಹಾಕಿಕೊಂಡಿದ್ದನ್ನೆಲ್ಲ ಬರೆಯಬೇಕೆನಿಸಿತು. ಸರಳ, ಸರಾಗ ಹಾದಿಯಲ್ಲಿ ಸಾಗಬೇಕಿದ್ದ ನನ್ನ ಸಾಮಾನ್ಯ ಜೀವನ ಕ್ರಮ ಅನಿರೀಕ್ಷಿತವಾಗಿ ದಿಕ್ಕು ತಪ್ಪಿಬಿಟ್ಟಿತು"[48] ಎಂಬ ಮಾತುಗಳನ್ನು ಆರಂಭದಲ್ಲಿಯೇ ಹೇಳಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಬಳಗದೊಂದಿಗಿನ ಒಡನಾಟದಲ್ಲಿ, ಓದುತ್ತಾ ಬರೆಯುತ್ತಾ ಸಾಹಿತ್ಯ ದಿಗ್ಗಜರ ಪರಿಚಯದೊಂದಿಗೆ ಚರ್ಚಿಸುತ್ತಾ ಸಾಗುತ್ತಿದ್ದ ಬದುಕು ಒಮ್ಮೆಲೆ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿ ಛಿದ್ರ ಛಿದ್ರವಾಗುತ್ತದೆ. ಅವರ ಬದುಕಿನಲ್ಲಿ ಬಂದ ಸಂಗಾತಿ ಸುಶೀಲ ಬೇರೆಯವರ ಒಡನಾಡದಲ್ಲಿದ್ದು ಅವಳ ವರ್ತನೆಗಳು ಬದಲಾದಾಗ ಮನೆಯ ನಿಷೇಧಗಳಿಂದ ನೊಂದು ಸಿಡಿಮಿಡಿಯಾಗಿ ವರ್ತಿಸುತ್ತಾಳೆ. ಗಂಡನಿಂದ ದೂರವಾಗುವ ಅವಳ ಮನಸ್ಸು ವಿಚಿತ್ರವಾಗಿ ವರ್ತಿಸುತ್ತದೆ. ತನ್ನಿಷ್ಟಕ್ಕೆ ವಿರುದ್ಧವಾದ ಸಂದರ್ಭವೊದಗಿದಾಗ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ

ಅವಳು ಯಾವುದೇ ಸಮಸ್ಯೆಗಳಿಲ್ಲದೇ ಇದ್ದಾಗಲೂ ಸಮಸ್ಯೆಯನ್ನು ತಾನೇ ಸೃಷ್ಟಿಸಿಕೊಂಡು ಬದುಕನ್ನು ಕೊನೆಯಾಗಿಸಿಕೊಳ್ಳುತ್ತಾಳೆ. ನಂತರದ ದಿನಗಳು ಗೋವಿಂದರಾಜು ಹಾಗೂ ಅವರ ಅಪ್ಪ ಅಮ್ಮ ತಮ್ಮ ತಂಗಿ ಎದುರಿಸಬೇಕಾದ ಘಟನೆಗಳಿಗೆ ಅವಳೇ ಕಾರಣವಾಗಿರುತ್ತಾಳೆ. ಸುಶೀಲಳ ಮನೆಯವರು ವರದಕ್ಷಿಣೆಯ ನೆಪವೊಡ್ಡಿ ದೂರು ಸಲ್ಲಿಸುತ್ತಾರೆ. ಪೋಲಿಸರಿಂದ ಜನಗಳಿಂದ ಒಡೆತಗಳಿಂದ, ಬೈಗುಳಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ನರಕಯಾತನೆಯನ್ನು ಅನುಭವಿಸುತ್ತಾರೆ. ಗೋವಿಂದರಾಜು ಮತ್ತು ಅವರ ಅಪ್ಪ ಅಮ್ಮನನ್ನು ಪೋಲಿಸಿನವರು ಹಿಡಿದುಕೊಂಡು ಹೋಗಿ ಅವರಿಗೇ ಸುಸ್ತಾಗುವವರೆಗೂ ಹೊಡೆದು ಹಿಂಸಿಸಿ ನಂತರ ಜೈಲಿಗೆ ಕರೆದೊಯ್ಯುತ್ತಾರೆ. 'ಮಾಡದ ತಪ್ಪಿಗೆ ಅನುಭವಿಸುವ ನೋವು ಹೆಚ್ಚು' ಎಂಬಂತೆ ಮೂರು ಜನರು ಜೈಲಿನಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ನೊಂದು ಮುದುಡಿ ಹೋಗುತ್ತಾರೆ. ಒಮ್ಮೆಗೆ ಅವರಿಗೆ ಬೇಲ್ ದೊರೆತರು ಯಾರು ಶೂರಿಟಿ ಕೊಡದಿದ್ದಾಗ ಹಾಗೂ ಕೊಡಬಾರದೆಂಬಂತೆ ಮಹಿಳಾ ವೇದಿಕೆಯವರ ಪ್ರತಿಭಟನೆ ನಡೆಯುತ್ತಿದ್ದು ಮತ್ತೆ ಶಿಕ್ಷೆ ಮುಂದುವರೆದು ಎಂಟು ತಿಂಗಳ ನಂತರ ಬಿಡುಗಡೆಯಾಗುತ್ತಾರೆ. ನಂತರದಲ್ಲಿಯೂ ಮಾನಸಿಕವಾಗಿ ಕಾಡುವ ಸುತ್ತಮುತ್ತಲ ಜನ, ಬಂಧು ಬಳಗ, ಸಂಬಂಧಿಕರು ಹೀಗೆ ಎಲ್ಲರ ವಿಚಿತ್ರ ದೃಷ್ಠಿಯನ್ನು ಎದುರಿಸಿಬೇಕಾದದ್ದೇ ಗೋವಿಂದರಾಜು ಅವರ ಬದುಕಿನ ಸಂಘರ್ಷವಾಗಿದೆ. ಪ್ರಗತಿಪರ ಚಿಂತಕರೊಂದಿಗೆ ಒಡನಾಟವಿದ್ದಾಗಲೂ ಅವರ ನೋವು ಸಂಕಟಗಳಿಗೆ ಕಡಿವಾಣವಿರುವುದಿಲ್ಲ.

ಮನವಿಲ್ಲದವರ ಮಧ್ಯೆ ಒಂದು ವಿಭಿನ್ನ ಮನೋಧರ್ಮದ ಆತ್ಮಕಥೆ. ದಲಿತರ ಶೋಷಣೆಯನ್ನು ಮೇಲು ಕೀಳು ಭಾವನೆಯನ್ನು ಜೊತೆಗೆ ಅಪರಾಧಿಯಂತೆ ಕಂಡ ಜಗತ್ತಿನ ಜನರನ್ನು ಎದುರಿಸಿದ್ದರು. ಜೈಲಿನಲ್ಲಿನ ಖೈದಿಗಳಿಂದ ಹಿಡಿದು ಎಲ್ಲರೂ ಅವರನ್ನು ಉಗ್ರ ಅಪರಾಧಿಗಳು ಕೊಲೆಗಡುಕರು ಎಂದಾಗ ಅವರಲ್ಲಿದ್ದ ಆತ್ಮವಿಶ್ವಾಸ ಒಂದೇ 'ನಾವು ತಪ್ಪು ಮಾಡಿಲ್ಲ ನಮ್ಮ ಬಿಡುಗಡೆಯಾಗುತ್ತದೆ' ಎಂಬ ಆಶಾವಾದ ಅವರಲ್ಲಿ ಕಾಣುತ್ತಿತ್ತು. ಉತ್ತಮ ಲಾಯರ್ ಅವರ ಕೃಪೆಯಿಂದ ಹೊರಬಂದು ಹೊಸದಾಗಿ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯಿಂದ ನಲುಗಿ ಹೋಗುತ್ತಾರೆ. ಆದರೆ ಅವರದು ಛಲದ ಬದುಕು ದಿಕ್ಕಾಪಾಲಾಗಿದ್ದ ಸಂಸಾರವನ್ನು ಒಗ್ಗೂಡಿಸಿ ಹುಟ್ಟಿದ ಊರಿನಲ್ಲೇ ಬದುಕಬೇಕೆಂಬ ಛಲವನ್ನು ಹೊತ್ತು ಬಂದಿದ್ದರು. ಯಾರ ಮಾತಿಗೂ ಮಹತ್ವ ಕೊಡದೆ, ಯಾರ ಬೈಗುಳಗಳನ್ನು ಕೇಳಿಸಿಕೊಳ್ಳದೆ ತನ್ನ ತಂದೆ ತಾಯಿ ತಮ್ಮ ತಂಗಿಯನ್ನು ರಕ್ಷಣೆ ಮಾಡುತ್ತಾ, ಓದನ್ನು ಮುಂದುವರೆಸುತ್ತಾರೆ. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಅವರು ತಾವಂದುಕೊಂಡ ಎಲ್.ಎಲ್.ಎಂ. ತರಗತಿಯಲ್ಲಿ ವ್ಯಾಸಂಗ ಮುಂದುವರೆಸುತ್ತಾರೆ.

ಗೋವಿಂದರಾಜು ಅವರ ಬದುಕಿನಲ್ಲಿ ಏನೇ ಘಟನೆಗಳು ನಡೆದರು ಅವರು ಹೊಸ ಬದುಕನ್ನು ಕಟ್ಟಿಕೊಳ್ಳುವ ವಿದ್ಯಾಭ್ಯಾಸವನ್ನು ಕುರಿತು ಆಲೋಚಿಸುವ ಕ್ರಮ ಅಂಬೇಡ್ಕರ್ ಅವರ ಪ್ರಭಾವದಿಂದಲೇ ಸಾಧ್ಯವಾಗುತ್ತದೆ ಎನಿಸುತ್ತದೆ. ಏಕೆಂದರೆ ದಲಿತರ ಬದುಕು ಹಾಗೆ ಇರುತ್ತದೆ ಜಾತೀಯತೆ ತಾರತಮ್ಯದ ಜೊತೆಗೆ ಸಾಮಾಜಿಕವಾದ ಅಸಮಾನತೆ ಅವರನ್ನು ಹೆಚ್ಚು ಕಾಡುತ್ತದೆ. ಹಾಗೆಯೇ ದಲಿತರಲ್ಲಿಯೇ ಉತ್ತಮ ಸ್ಥಿತಿಯಲ್ಲಿದ್ದ ಗೋವಿಂದರಾಜು ಅವರ ಕುಟುಂಬವನ್ನು

ಕಂಡು ಹಗೆ ಸಾಧಿಸಿದವರೇ ಹೆಚ್ಚು. ಅದರಲ್ಲಿಯೂ ಸಂಬಂಧಿಕರು ಹೆಚ್ಚೇ ಇದ್ದರು. ದಲಿತರಲ್ಲಿನ ಈ ಹೊಟ್ಟೆಕಿಚ್ಚಿನ ಮನೋಭಾವಕ್ಕೆ ಇವರ ಕುಟುಂಬ ಬಲಿಯಾಗಿತ್ತು. ಏಕೆಂದರೆ ಅವರನ್ನು ಕಂಡವರು, ಗಂಡಹೆಂಡತಿಯ ಅನ್ಯೋನ್ಯತೆಯನ್ನು ಕಂಡಿದ್ದರೂ ಸತ್ಯ ಹೇಳದೆ ಮರೆಮಾಚಿದವರು ಅಲ್ಲಿದ್ದರು. ಆದರೆ ಗೋವಿಂದರಾಜು ಅವರಲ್ಲಿ ಮೊದಲಿನಿಂದಲೇ ಹೋರಾಟದ ಮನೋಭಾವವಿದ್ದುದ್ದರಿಂದ ಯಾರಿಗೂ ಯಾವುದಕ್ಕೂ ಅಂಜದೆ ಬದುಕನ್ನು ಮುಂದುವರೆಸಿದ್ದರು.

ಗೋವಿಂದರಾಜು ಅವರು ಚಿಕ್ಕಂದಿನಿಂದಲೂ ಯಾವುದೇ ಅಂಜಿಕೆ ಮತ್ತು ಭಯವಿಲ್ಲದೆ ಬೆಳೆದವರು. ದಲಿತರಾದರು ಅವರಲ್ಲಿ ಯಾವ ಆತಂಕವೂ ಕಾಣುತ್ತಿರಲಿಲ್ಲ. ಏಕೆಂದರೆ ಅವರ ಜೀವನ ಶೈಲಿ. ಚಿಕ್ಕಂದಿನ ವಿಷಯಗಳನ್ನು ನೆನಪು ಮಾಡಿಕೊಳ್ಳುತ್ತಾ "ಮೈಸೂರಿನ ಕೋಟೆ ಮಾರಮ್ಮ ದೇವರ ಹಬ್ಬ". "ಮೊದ ಮೊದಲು ನಮ್ಮೂರ ಜನರನ್ನು ದೇವಸ್ಥಾನದ ಒಳಗಡೆ ಬಿಡುತ್ತಿರಲಿಲ್ಲ. ಮೈಸೂರು ಮಹಾರಾಜರ ಬಳಿ ಈ ದೂರನ್ನು ಕೊಂಡೊಯ್ದಾಗ ಅವರ ಮಧ್ಯೆ ಪ್ರವೇಶಿಕೆಯಿಂದಾಗಿ ನಮ್ಮ ಜನರನ್ನು ಒಳಗಡೆಗೆ ಪೂಜೆ ಮಾಡಿಕೊಳ್ಳಲು ದಾರಿ ಮಾಡಿಕೊಟ್ಟರು." 'ನಮ್ಮವ್ವ ಎಲ್ಲಾ ಹಬ್ಬಗಳನ್ನು ಮಾಡುತ್ತಿದ್ದಳು. ತನ್ನ ಮಕ್ಕಳು ಬೇರೆಯವರ ಮನೆ ಬಾಗಿಲಲ್ಲಿ ನಿಲ್ಲಬಾರದು ಎಂದು ಹಸಿದುಕೊಂಡು ಹಬ್ಬ ಮಾಡುತ್ತಿದ್ದಳು'[49] ಸ್ವಾಭಿಮಾನಿ ತಾಯಿಯ ನಡೆ ಇವರಿಗೂ ಬಂದಿತ್ತು. ಯಾರ ಬಳಿಯೂ ಕೈಚಾಚದೆ ಕಷ್ಟಪಟ್ಟು ದುಡಿಯುವ ಕೆಡುಕನ್ನು ಬಯಸದ ಮನೋಭಾವ ಇವರಲ್ಲಿಯೂ ಇತ್ತು. ಸ್ವಾಭಿಮಾನಿ ತಾಯಿ ಯಾರ ಸಹಾಯವನ್ನು ಅಪೇಕ್ಷಿಸದೆ ತನ್ನ ಬಾಣಂತನವನ್ನು ತಾನೇ ಮಾಡಿಕೊಂಡು ಮಕ್ಕಳನ್ನು ಸಾಕಿದವರು. ತಮ್ಮ ತಂಗಿಯರು ಹುಟ್ಟಿದಾಗ ಗೋವಿಂದರಾಜು ಅಮ್ಮನಿಗೆ ಮನೆಕೆಲಸಗಳಲ್ಲಿ ಸಹಾಯ ಮಾಡುತ್ತಾ ಏಳನೇ ತರಗತಿಯಲ್ಲಿ ಉತ್ತಮ ಅಂಕಗಳಿಂದ ಪಾಸಾಗಿದ್ದರು.

೧೯೭೦ರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದರು. ಅಂಬೇಡ್ಕರ್ ಅವರ ಪುಣ್ಯತಿಥಿಯನ್ನು ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದರು. ಬಸವಲಿಂಗಪ್ಪನವರು ಭಾಷಣ ಮಾಡುವವರಿದ್ದರು. "ಅಂಬೇಡ್ಕರ್ ಅವರ ಹೆಸರಿನಲ್ಲಿ ಹೊಸ ಹೊಸ ವಿಚಾರಗಳನ್ನು ದಲಿತ ಯುವಕರ ಎದೆಯಲ್ಲಿ ಹರಿದುಬಿಟ್ಟಿದ್ದರು. ನಿಮ್ಮ ದೇವರುಗಳನ್ನು ಗಟಾರಕ್ಕೆ ಎಸೆಯಿರಿ".[50] "ಕನ್ನಡ ಸಾಹಿತ್ಯದಲ್ಲಿ ಕೆಲಮಟ್ಟಿಗೆ ಬೂಸಾತನವು ಸೇರಿಕೊಂಡಿದೆ. ಕನ್ನಡದ ಬರಹಗಾರರು ಬರೆದಿರುವುದೆಲ್ಲಾ ಗಟ್ಟಿ ಸಾಹಿತ್ಯವಲ್ಲ ಎಂದರು. ಅಂದಿನಿಂದಲೇ ಅವರ ಮೇಲೆ ವಿರೋಧ ವ್ಯಕ್ತವಾಯಿತು."[51] ಎಲ್ಲಾ ಕಡೆಯು ಪರ ವಿರೋಧದ ಹೋರಾಟವು ನಡೆಯುತ್ತಿದ್ದವು. "ದಲಿತರನ್ನು ತುಳಿಯುವ ಸಲುವಾಗಿ ಶತಶತಮಾನಗಳಿಂದ ಸಾಮಾಜಿಕ ನ್ಯಾಯದಿಂದ ವಂಚಿತರಾಗಿದ್ದಾರೆ ಎಂಬ ಆತ್ಮಸಾಕ್ಷಿಯನ್ನು ಬದಿಗಿಟ್ಟು ವಿದ್ಯಾವಂತರಾದ ಈ ಯುವಕರು ಮತ್ತೆ ಮತ್ತೆ ಅಂದು ದಲಿತರನ್ನು ಬಯ್ಯುತ್ತಾ ಸಾರ್ವಜನಿಕವಾಗಿ ಹೀಯಾಳಿಸುತ್ತಾ ನಡೆದದ್ದು ಮಾತ್ರ ಇಂದು ಚರಿತ್ರೆಯಲ್ಲಿ ಹಾಗೆಯೇ ಉಳಿದುಕೊಂಡಿದೆ."[52] ಎರಡು ಮೆರವಣಿಗೆಗಳು ಏಕಕಾಲದಲ್ಲಿ ವಿರುದ್ಧ ದಿಕ್ಕುಗಳಲ್ಲಿ ಚಲಿಸತೊಡಗಿದ ಮೇಲೆ ಪೋಲಿಸರಿಗೆ ಭಾರಿ ತಲೆ ನೋವಾಯಿತು'. 'ಬಸವಲಿಂಗಪ್ಪನವರಿಗೆ ಇದ್ದ ಸಾಮಾಜಿಕ ಕಳಕಳಿ ವಿಷಯವೊಂದರಲ್ಲಿ ಇರುತ್ತಿದ್ದ

ಬದ್ಧತೆ ಜನರನ್ನು ಕರುಣೆಯಿಂದ ನೋಡುತ್ತಿದ್ದ ರೀತಿ ಮಾತನಾಡಿಸುವ ಪರಿಯಿಂದಾಗಿ ನಮ್ಮೂರಿನಲ್ಲಿ ಅವರು ಅರಾಧ್ಯ ದೈವವೆನಿಸಿದರು. ನಮ್ಮೂರಿನ ಜನ ಅವರನ್ನು ಬೀದಿ ಬೀದಿಗಳಲ್ಲಿ ಹೂವುಗಳನ್ನು ಎರಚಿ ಮೆರೆಸಿದರು. ಆರತಿ ಎತ್ತಿ ಬೆಳಗಿದರು. ಅವರು ಬದುಕಿರುವವರೆಗೂ ಅದೇ ಅಭಿಮಾನವನ್ನು ಪ್ರೀತಿಯನ್ನು ಇಟ್ಟುಕೊಂಡಿದ್ದರು."[53]

೧೯೭೭ರಲ್ಲಿ ಮೈಸೂರು ಬ್ಯಾಂಕ್‌ನಲ್ಲಿ ಕೆಲಸ ದೊರೆಯಿತು. ಆದರೆ ಅಲ್ಲಿಯ ವ್ಯವಸ್ಥಾಪಕರು "ಏನಪ್ಪಾ, ನೀನು ಬಲಗೈಯವನೋ ಎಡಗೈ ಗುಂಪಿಗೆ ಸೇರಿದವನೋ ಹೇಳು" ಎಂದರು. ನಾನು ನನಗೇನು ಗೊತ್ತಿಲ್ಲಾ ಸಾರ್ ಎಂದೆನು. "ಹೂಂ ಪರವಾಗಿಲ್ಲ ಹೇಳು" ಎಂದು ಒತ್ತಾಯಿಸಿದರು. ನನಗೆ ನಿಜವಾಗಿಯೂ ಗೊತ್ತಿರಲಿಲ್ಲ. ನಮ್ಮೊಳಗೆ ಈ ತರಹ ಒಳಭೇದಗಳಿವೆ ಎಂಬ ಅರಿವಿರಲಿಲ್ಲ"[54] ಎನ್ನುತ್ತಾರೆ. ಅಸ್ಪೃಶ್ಯತೆಯ ಅನುಭವ ಕೆಲಸ ಮಾಡುವ ಕಡೆ ಆದರೆ ಅವುಗಳಲ್ಲಿಯೂ ಬೇಧವನ್ನು ಎಣಿಸುವ ಅವರನ್ನು ಹಿಂಸಿಸುವ ಕ್ರಿಯೆ ನಡೆಯುತ್ತಿತ್ತು. "ನಾನು ಹುಟ್ಟಿದ ಸ್ಥಳದಲ್ಲಿ. ಬೆಳೆದ ಪರಿಸರದಲ್ಲಿ, ಓದಿದ ವಿದ್ಯಾಭ್ಯಾಸದ ಸಂಸ್ಥೆಗಳಲ್ಲಿ ಆ ತೆರನಾದ ಅಸ್ಪೃಶ್ಯತೆಯ ಅನುಭವ ನನಗೇನೂ ನಮ್ಮೂರಿನ ಯಾರಿಗೂ ಆಗುವುದಕ್ಕೆ ಅವಕಾಶವಿರಲಿಲ್ಲ". ಯಾಕೆಂದರೆ ದಲಿತರು ಮಾತ್ರವೇ ವಾಸಿಸುತ್ತಿದ್ದ ಪ್ರದೇಶವಾಗಿದ್ದ ಇವರ ವಾಸಸ್ಥಳ ಅವರಿಗೆ ಅಸ್ಪೃಶ್ಯತೆಯ ಅನುಭವವನ್ನು ನೀಡಲಿಲ್ಲ. "ನಮ್ಮೂರು ದೊಡ್ಡಲಗೇರಿ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ "ಅಶೋಕಪುರಂ" ಎಂದು ನಾಮಕರಣಗೊಂಡಿತು."[55] ಕರ್ನಾಟಕ ರಾಜ್ಯದ ಭೂಪಟದಲ್ಲಿ "ಅಶೋಕಪುರಂ" ಎಂದರೆ ದಲಿತರ ರಾಜಧಾನಿ ಎಂದೇ ಗುರುತಿಸಲಾಯಿತು. ಕವಿಗಳು, ವಿಚಾರವಾದಿಗಳು, ಚಿಂತಕರು ಇಲ್ಲಿನ ಒಗ್ಗಟ್ಟನ್ನು ನೋಡಿ ಬೆರಗಾದರು."[56]

೧೯೮೪ರಲ್ಲಿ 'ಲಾ' ಪರೀಕ್ಷೆಯನ್ನು ಪಾಸು ಮಾಡಿದ್ದರು. ಆಗಲೇ 'ಮುಂದಾರಿ' ಎಂಬ ಕವನ ಸಂಕಲನವನ್ನು ಮುದ್ರಣಗೊಳಿಸಿದ್ದರು. ಅಲ್ಲಿಯವರೆಗೂ ಎಲ್ಲವು ಸುಂದರ ಮದುವೆಯ ನಂತರದಲ್ಲಿ ಎಲ್ಲವೂ ಬದಲಾಯಿತು. ಇಷ್ಟಪಟ್ಟು ಮದುವೆಯಾದ ಹುಡುಗಿ ಸುಶೀಲ, ಅವರ ಸಂಸಾರ ಸುಃಖವಾಗಿತ್ತು. ಆದರೆ ಅವಳ ವರ್ತನೆ ಮುಂದುವರೆದು, ಸ್ವಲ್ಪ ದಿನಗಳಲ್ಲಿ ತನ್ನ ಮೂಲ ವರ್ತನೆಗೆ ಒಳಗಾಗಿದ್ದಳು. ಗಂಡನ ಪ್ರೀತಿಯನ್ನು ಧಿಕ್ಕರಿಸಿ ನಡೆಯುತ್ತಿದ್ದಳು. ಆದರೆ ಅವಳು ಬಹುಬೇಗ ಜೀವನದ ಅಂತ್ಯವನ್ನು ಕಂಡುಕೊಂಡಳು.

ಗೋವಿಂದರಾಜು ಅವರು ನಂತರದ ದಿನಗಳಲ್ಲಿ ಪಟ್ಟಪಾಡು ಅಷ್ಟಿಷ್ಟಲ್ಲ. ಸುಃಖಸಂಸಾರ ಛಿದ್ರವಾಗಿ ಎಲ್ಲರೂ ದಿಕ್ಕಾಪಾಲಾಗುವಂತೆ ಮಾಡಿತ್ತು. ಮತ್ತೆ ಸಮಾಜವನ್ನು ಎದುರಿಸಿ ಬದುಕಬೇಕಾದಾಗ ಅವರ ಮನಸ್ಸು ಕಲ್ಲಿನಂತಾಗುತ್ತದೆ. ದಲಿತರ ಹೋರಾಟ ಚಿಂತನೆಗಳನ್ನು ಅಂಬೇಡ್ಕರ್ ಅವರ ವಿಚಾರಗಳನ್ನು ರೂಢಿಸಿಕೊಂಡಿದ್ದರಿಂದ ಬದುಕಬೇಕು ಎಂಬ ಛಲ ಮೂಡಿ ಉತ್ತಮ ಸಾಹಿತಿಯೂ ಆಗಿದ್ದಾರೆ.

**ದು. ಸರಸ್ವತಿಯವರ ಈಗೇನ್ ಮಾಡೀರಿ ? – ೨೦೦೧**

ಈಗೇನ್ ಮಾಡೀರಿ ದು. ಸರಸ್ವತಿ ಅವರ ಆತ್ಮಕಥೆಯಾಗಿದೆ. ಇದು ನೆನಪುಗಳೊಂದಿಗಿನ ಅನುಭವ ಕಥನವಾಗಿದೆ. ಅವರೇ ಹೇಳುವ ಹಾಗೆ 'ಈಗೇನ್ ಮಾಡೀರಿ?' ಇದು ನನ್ನ ಸಮಗ್ರ

ಬದುಕಿನ ಆತ್ಮಕಥನವಲ್ಲ. ಆದರೆ ಅದೊಂದು ಭಾಗದ ಅನುಭವದ ಕಥನ ಸಂಪೂರ್ಣವಾಗಿ ಬರೆದಿಲ್ಲ. ಹಾಗಾಗಿ ಇದೊಂದು ಪುಟ್ಟದಾದ ಅನುಭವ ಕಥನದ ನೆನಪು. ಅದು ಎಂದೆಂದಿಗೂ ಆರದ ಗಾಯದ ಮಾಸದ ಹಗಲಿರುಳಿನ ಸಿಹಿ–ಕಹಿ ಭಾವನೆ'[57] ಎನ್ನುತ್ತಾರೆ. ಈ ಕಥನವು ೧೫ ಅಧ್ಯಾಯಗಳಲ್ಲಿ ಅನುಭವವನ್ನು ತೆರೆದಿಡುತ್ತಾ ಸಾಗುತ್ತದೆ. ಅನುಭವಗಳ ನೆನಪಿನಲ್ಲಿ ಸಿಹಿ–ಕಹಿ ಎರಡು ಇರುತ್ತವೆ. ಆದರೆ ದಲಿತರಲ್ಲಿ ಸಿಹಿಗಿಂತ ಕಹಿಯೇ ಹೆಚ್ಚು. ಏಕೆಂದರೆ ಮುಗ್ಧರಾದ ಜನಾಂಗ. ಅನಕ್ಷರತೆ, ಅಜ್ಞಾನ, ಮೌಢ್ಯವಿದ್ದಾಗ ಉಂಟಾಗುವ ಕಹಿಯೇ ಬೇರೆ. ವಿದ್ಯಾವಂತರಾದ ನಂತರದಲ್ಲಿ ಅವರು ಅಜ್ಞಾನಕ್ಕೆ ಒಳಗಾಗುವ, ಮುಗ್ಧತೆಗೆ ಒಳಗಾಗುವಾಗ ಆಗುವ ನೋವು ಅಪಾರ. ಹೆಣ್ಣು ಮಗಳು ಅದರಲ್ಲೂ ದಲಿತ ಹೆಣ್ಣು ಮಗಳು ಎಂದಾಗ ಅವರ ಮೇಲೆ ಸಮಾಜದ ಕಣ್ಣಿನ ದೃಷ್ಟಿ ಬೇರೆಯೇ ರೀತಿಯಲ್ಲಿ ಕಾಯುತ್ತಿರುತ್ತದೆ. ಸಿಕ್ಕ ಅವಕಾಶವನ್ನು ಬಳಸಿಕೊಂಡು ಎರಗಿಬರುವ ಸಮಾಜ ಏನನ್ನಾದರೂ ಮಾಡಲು ಸಮಯ ಕಾಯುತ್ತದೆ. ಇಂತಹ ಸಂದರ್ಭಕ್ಕೆ ಒಳಗಾದವರು ದು.ಸರಸ್ವತಿ. ಚಿಕ್ಕಂದಿನಿಂದ ಸತ್ಯ ಪ್ರಮಾಣಿಕತೆ ಗಟ್ಟಿತನದಿಂದ ಬದುಕುವುದನ್ನು ಧೈರ್ಯವಾಗಿ ಸಮಾಜವನ್ನು ನೋಡಲು ಕಲಿಸಿದ ತಾಯಿ ನಂಬಿಕೆಗೆ ಅರ್ಹರಾಗುವವರ ಬಗೆಗೆ ಹೇಳಲಿಲ್ಲವೆನಿಸುತ್ತದೆ. ಅವರಲ್ಲಿ ಪ್ರಾಮಾಣಿಕತೆ ಮತ್ತು ಯಾರನ್ನು ನೋಯಿಸದ ಅನುಮಾನಿಸದ ಸಂದರ್ಭಗಳಿಂದಾಗಿ ಸಮಾಜ ಸಂಪೂರ್ಣವಾಗಿ ಹಾಗೇ ಇರುತ್ತದೆ ಎಂದು ನಂಬಿದವರು. 'ಮಗಳಿಗೆ ತಂದೆ ತಾನು ಕಷ್ಟಪಟ್ಟು ಕೆಲಸ ಮಾಡಿ ಒಳ್ಳೆಯ ಹೆಸರುಗಳಿಸಿದ್ದೇನೆ ಎಂದು ಹೇಳುವಾಗ ಜನರ ಬಗೆಗೆ ಏಕೆ ಹೇಳಲಿಲ್ಲ? ಮೋಸದ ಜನರ ಬಗೆಗೆ ಯಾಕೆ ಹೇಳಲಿಲ್ಲ. ಅವರಿಗೆ ಅಂತಹ ಅನುಭಗಳಾಗಿರಲಿಲ್ಲವೆ' ಎನಿಸುತ್ತದೆ. ಸರಸ್ವತಿಯವರು ಏನು ನಡೆಯುತ್ತಿದೆ ಎಂಬುದನ್ನು ಅರಿತುಕೊಳ್ಳುವಷ್ಟರಲ್ಲಿ ಆ ಘಟನೆ ನಡೆದು ಹೋಗಿರುತ್ತದೆ. 'ನನ್ನದು ನನ್ನಂತಹವರದ್ದು ಎಲ್ಲೋ ಇವೆ ಎಂದುಕೊಳ್ಳುವ ಕೋರ್ಟು, ಪೋಲಿಸು, ಸರ್ಕಾರಗಳು ಯಾವಾಗ ಬೇಕಾದರೂ ನಮ್ಮ ಬದುಕಿನೊಳಗೆ ನುಗ್ಗಿ ತಲ್ಲಣಗೊಳಿಸಿಬಿಡಬಹುದು. ತಲ್ಲಣಗೊಂಡ ಬದುಕು ಮತ್ತೆ ಬದುಕಾಗಬೇಕಾದರೆ ಮಣ್ಣೊಳಗೆ ಹೂತು ಮರು ಮೊಳಕೆಯೊಡೆದಂತೆ ಕುಂಬಾರನಿಗೆ ಒಂದು ದಿನ, ದೊಣ್ಣೆಗೆ ಒಂದೇ ನಿಮಿಷ"[58] ಎನ್ನುತ್ತಾರೆ. ದಲಿತರ ಬದುಕಿನ ಮತ್ತೊಂದು ಮುಖ ಹೇಗಿರುತ್ತದೆ ಎಂಬುದಕ್ಕೆ ಈ ಸಂದರ್ಭ ಸಾಕ್ಷಿಯಾಗಿದೆ. ಅದು ದಲಿತರ ನಂಬಿಕೆಯಾಗಿದೆ. ಯಾರನ್ನು ಬೇಕಾದರೂ ನಂಬುವ ಸ್ಥಿತಿ ಅವರದು. ಅಂದರೆ ಯಾರ ಮೇಲೂ ಅನುಮಾನಗಳಿರುವುದಿಲ್ಲ. ತಮ್ಮ ಮೇಲಿನ ನಂಬಿಕೆಯ ಮಾತು ಒಂದು ಕಡೆಯಾದರೆ ಇತರರನ್ನು ನಂಬುವುದನ್ನು ಎಂದಿಗೂ ಬಿಡುವುದಿಲ್ಲ. ಹಾಗೆಯೇ ತಮ್ಮ ಮೇಲೆ ಬಂದ ಅಪವಾದ ಅಪರಾದವಾಗಿ ಜೈಲು ಸೇರಬೇಕಾದಾಗಲೂ ಅವರಲ್ಲಿದ್ದ ನಂಬಿಕೆ ಒಂದೇ 'ನಾನು ತಪ್ಪು ಮಾಡಿಲ್ಲ'. ಹಾಗೆಯೇ ನಾನು ಮೋಸ ಹೋಗಿದ್ದೇನೆ. ಅದರಿಂದ ಹೊರ ಬಂದು ಬದುಕು ರೂಪಿಸಿಕೊಳ್ಳುತ್ತೇನೆ ಎಂಬ ಆತ್ಮವಿಶ್ವಾಸ ಅವರಲ್ಲಿತ್ತು. ಮುಂದೆಯೂ ನಂಬಿಕೆಗಳು ಮುಖ್ಯವಾಗುತ್ತವೆ. ನಂಬಿಕೆ ಕಳೆದುಹೋದರೆ ಮನುಷ್ಯ ಮನುಷ್ಯನಾಗಿರುವುದಿಲ್ಲ. ಅವನಲ್ಲಿನ ಉತ್ತಮ ಗುಣಗಳು. ಮೌಲ್ಯಗಳು ಎಲ್ಲವೂ ನಾಶವಾಗುತ್ತದೆ. ಇಂತಹ ಸಂದರ್ಭ ಸಮಾಜಕ್ಕೆ ಅತ್ಯಂತ ಹಾನಿಕರವಾಗುತ್ತದೆ. ಆದ್ದರಿಂದ

ಸಮಾಜ ಮತ್ತು ಜನರು ಇಂಥವರನ್ನು ಅವರಿದ್ದ ಹಾಗೇ ಕಂಡರೆ ಅವರ ದೃಷ್ಟಿಯಲ್ಲಿ ಮನುಷ್ಯತ್ವ ಉಳಿದಿರುತ್ತದೆ. ಎಂಥಹ ಸಂದರ್ಭವನ್ನಾದರೂ ಎದುರಿಸಿ ನಿಲ್ಲುವ ಶಕ್ತಿ ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರು ನೀಡಿದ್ದಾರೆ. ಅವರಿಗಾಗುವ ಹೆಜ್ಜೆ ಹೆಜ್ಜೆಯ ಅವಮಾನಗಳನ್ನು ಅಂಬೇಡ್ಕರ್ ಧಿಕ್ಕರಿಸಿ ಸಾಧನೆಯ ಕಡೆಗೆ ಸಾಗುತ್ತಾರೆ. ಎಂಥಹ ಸಂದರ್ಭವನ್ನಾದರೂ ಎದುರಿಸಿ ನಿಲ್ಲುವ ಸಾಮರ್ಥ್ಯ ಬರುವುದು ಅಂಬೇಡ್ಕರ್ ಅವರಿಂದಲೇ, ಅದರಲ್ಲೂ ದಲಿತರ ಎಲ್ಲ ಸಂಕಷ್ಟಗಳಿಗೆ ಪರಿಹಾರವನ್ನು ನೀಡಿದವರೇ ಬಾಬಾಸಾಹೇಬರು. ಅವರು ನೀಡಿದ ಶಿಕ್ಷಣದ ಮಹತ್ವ ಎಲ್ಲಾ ಸಂದರ್ಭವನ್ನು ಧೈರ್ಯದಿಂದ ಎದುರಿಸುವಂತೆ ಮಾಡುತ್ತದೆ. ಸರಸ್ವತಿಯವರಿಗೂ ಅವರ ತಾಯಿಯ ಧೈರ್ಯ ಮತ್ತು ಪ್ರಾಮಾಣಿಕ ತನದ ಪಾಠ ಎಲ್ಲ ಸಂದರ್ಭದಲ್ಲೂ ಗಟ್ಟಿಯಾಗಿತ್ತು.

ಸರಸ್ವತಿಯವರಿಗೆ ಸಣ್ಣವರಿದ್ದಾಗ ದೊರೆತ ಐದು ಪೈಸೆ ನಂದು ಎಂದು ತಾಯಿಗೆ ಹೇಳುವಾಗ ಅದು ನಿನ್ನದಲ್ಲ ಬೇರೆಯವರದು ಅದನ್ನು ಬಳಸಬಾರದು ಬೇರೆಯವರು ಕಳೆದುಕೊಂಡಿದ್ದಾರೆ. ನೀನು ಅದನ್ನು ಬಳಸಬಾರದು ಎನ್ನುತ್ತಾರೆ. "ತಪ್ಪು ತಪ್ಪು ನಾವ್ ದುಡಿದ್ದಷ್ಟೇ ನಮ್ದು, ಉಣ್ಣ ಅನ್ನನೂವೆ ಒಂದ್ ತುತ್ ಜಾಸ್ತಿ ಉಂಡ್ರೆ, ಇನ್ನೊಬ್ರನ್ನ ಕಿತ್ಕಂಡಂಗೆ, ನಮ್ ಪಾಲಿಂದುಲ್ದೇ ಇನ್ನೊಬ್ರದ್ಕೆ ಕೈ ಆಕ್‌ಬಾರದ್ದು ಸಿವ ಮೆಚ್ಚಲ್ಲ"[59] ಎಂಬ ಪ್ರಾಮಾಣಿಕವಾದ ಮನುಷ್ಯತ್ವದ ಮಾತುಗಳನ್ನಾಡಿದ್ದರು. ಇಂದಿನವರು ಈ ಮಾತುಗಳನ್ನು ಅಳವಡಿಸಿಕೊಂಡರೆ ಎಷ್ಟೋ ಜನರು ನೆಮ್ಮದಿಯ ಜೀವನವನ್ನು ಸಾಗಿಸಬಹುದು. ಅವರು ಎದುರಿಸುವ ಅವಮಾನದ ಸಂದರ್ಭಗಳು ಒಂದು ರೀತಿಯದಲ್ಲ ಅವರು ಎಂಟನೇ ತರಗತಿಗೆ ಇಂಗ್ಲೀಷ್ ಮೀಡಿಯಂ ಸೇರಿದಾಗ ಗಣಿತದ ಟೀಚರ್ ಕೇಳಿದ ಪ್ರಶ್ನೆಗೆ ಉತ್ತರಿಸಲಾಗದೆ ನಿಂತಾಗ ಅವರು ಬೈಯುತ್ತಾರೆ. ಇವರ ಉತ್ತರ ಗೊತ್ತಿದ್ದರು ಇಂಗ್ಲೀಷ್‌ನಲ್ಲಿ ಹೇಳಲಿಕ್ಕಾಗದೆ ನಿಂತಾಗ ಟೀಚರ್ "ತಲೆ ಒಳ್ಗೆ ಸೆಗ್ಣಿ ತುಂಬಿದೆ. ಒಂದ್ ಸಣ್ ಪ್ರಶ್ನೆಗೂ ಉತ್ರಕೊಡೋಕೆ ಬರಲ್ಲ ಎದೆ ಸೀಳಿದ್ರೆ ನಾಕ್ ಅಕ್ಷರ ಇಲ್ಲ ಜಾತಿ ಹೆಸ್ರು ಹೇಳ್ಕೊಂಡು ಬಂದು ಬಿಡ್ತೀರ ಶಾಲೆ ಮರ್ಯಾದೆ ತೆಗ್ಯೋಕೆ ಎಂದು ಅರಚಿ ಹೇಳುತ್ತಾರೆ."[60] ಆದರೆ ತಾಯಿ ಅವರಿಗೆ ತರಗತಿಯಲ್ಲಿ ಸಮಾಧಾನದಿಂದ ಉತ್ತರ ಹೇಳಬೇಕು, ಧೈರ್ಯವಾಗಿರಬೇಕು, ಗೊತ್ತಿರುವುದನ್ನು ಧೈರ್ಯವಾಗಿ ಶಿವನನ್ನು ನೆನಸಿಕೊಂಡು ಹೇಳಬೇಕು ಎಂದಾಗ ಮರುಮಾತಾಡದೆ ತಾಯಿಯ ಮಾತನ್ನು ಕೇಳುತ್ತಾರೆ. ತಾಯಿ ಮಾತಿನಿಂದ ಅವರಲ್ಲಿ ನಿಜವಾಗಿಯೂ ಧೈರ್ಯ ಬಂದಿರುತ್ತದೆ. ಅದರಿಂದಲೇ ತರಗತಿಯಲ್ಲಿ ಪಾಸಾಗುತ್ತಾರೆ.

ಸರಸ್ವತಿ ಅವರು ಕಾಲೇಜಿನಲ್ಲಿದ್ದಾಗ ಕೇಳಿದ ಹಾಡು 'ದೊಡ್ಡ ಗೌಡರ ಬಾಗಿಲಿಗೆ ನಮ್ಮ ಮೂಳೆಯ ತೋರಣ...... ಬಂಗಲೆಯಂಗಳಕ್ಕೆ ನಮ್ಮ ರಕ್ತ ರಂಗೋಲೆ' ಹಾಗೂ 'ಹಳ್ಳಿಗಾಡ ಹಸುಗೂಸೆ ಹಸುಕಾಯೋ ಧೀರ ಬಾಲನೆ ಹಾಲು ಮರೆತು ದಿನವೆಷ್ಟಾಯಿತೋ...'[61] ಎಂಬ ಹಾಡುಗಳು ಅವರನ್ನು ಮತ್ತಷ್ಟು ಗಟ್ಟಿಗೊಳಿಸಿದವು. ಅವರಿಗೆ ಆ ಹಾಡುಗಳ ಪ್ರಭಾವ ಎಷ್ಟಿತ್ತೆಂದರೆ ಅವರು "ಅಂದಿನಿಂದ ಜಾತಿ ಹೆಸರು ಹೇಳುವಾಗ ಕಸಿವಿಸಿಯಾಗದೆ ಧೈರ್ಯದಿಂದ ಹೇಳಬೇಕೆಂದು ತೀರ್ಮಾನಿಸಿದ್ದೆ"[62] ಎನ್ನುತ್ತಾರೆ. ದಲಿತರಲ್ಲಿ ಧೈರ್ಯ ಮತ್ತು ಅವರಲ್ಲಿನ ಕಲೆಗೆ ಆ ಸಂದರ್ಭ ಸಾಕ್ಷಿಯಾಗಿತ್ತು. ಹಾಡು ಹಾಡಿದವರು ಸಾಮಾನ್ಯರು. ಬದುಕಿನ ವಾಸ್ತವ ಸಂಗತಿಯನ್ನು ಧೈರ್ಯವಾಗಿ

ಹೇಳುವುದನ್ನು ಕಲಿಸಿದ್ದರು. ಆದರೆ ಸೂಟುಧಾರಿಯಾಗಿದ್ದು ಮಹಾಜ್ಞಾನಿ ಪಂಡಿತರು ಆದ ಬಾಬಾಸಾಹೇಬ್ ಅಂಬೇಡ್ಕರ್ ಅವರು ಉನ್ನತ ಸ್ಥಾನಕ್ಕೆ ಹೋಗಲಾಗಲಿಲ್ಲ. ಆದರೆ ಗಾಂಧೀಜಿಯವರಿಗೆ ಸಿಕ್ಕ ಮಾನ್ಯತೆ ಅಂಬೇಡ್ಕರ್ ಅವರಿಗೆ ದೊರೆಯಲಿಲ್ಲವೆಂಬ ಆಲೋಚನೆ ಬರುತ್ತದೆ.

"ಕೆಲಸಕ್ಕೆ ಸೇರಿ ಎರಡು ವರ್ಷಗಳಾದ ಮೇಲೆ ದೊಡ್ಡ ಅಕೌಂಟ್ ಪುಸ್ತಕ ಬರೆಯಲು ಶುರು ಮಾಡಿದ್ದೆ. ನಾನು ಬರೆದ ಅಂಕಿ ಸಂಖ್ಯೆಗಳು ಬದಲಾಗುತ್ತಿದ್ದವು. ಸೊನ್ನೆಗಳು ಹೆಚ್ಚಾಗುತ್ತಿದ್ದವು. ನೋಡಿಕೊಳ್ಳಲಿಲ್ಲ. ನಿತ್ಯವೂ ಬರೆಯದೆ ಆಗಾಗ್ಗೆ ಬರೆಯುತ್ತಿದ್ದರಿಂದ ಪೇಜು ತಿರುಗಿಸಿ ನೋಡಲಿಲ್ಲ. ಬರೆದಾಗ ಟ್ಯಾಲಿ ಆಗದೆ ಪರದಾಡುವಾಗ ಕ್ಯಾಶಿಯರ್ ನಾನು ಟ್ಯಾಲಿ ಮಾಡ್ತಿನಿ, ನೀವು ಸೈನ್ ಮಾಡಿ ಮೇಡಂ ಅಂತ ವಿನಯವಾಗಿ ಹೇಳುತ್ತಿದ್ದ. ನನ್ನ ಪ್ರಾಮಾಣಿಕತೆಯನ್ನು ಬಳಸಿಕೊಂಡು ಸುಳಿಗೆ ಕೆಡವಬಹುದೆಂದು ಅನುಮಾನಿಸಲಿಲ್ಲ. ನನಗದು ಅರಿವಾಗುವ ವೇಳೆಗೆ ಎಲ್ಲವೂ ನಡೆದು ಹೋಯಿತು."[63] ಅರೆಸ್ಟ್ ಆಗಿದೀನಿ ಅಂತ ಗೊತ್ತಾಗಲಿಲ್ಲ. "ಹಾಳಾಗಿ ಹೋಗು ನೀನು? ಅರೆಸ್ಟ್ ಆಗಿದಿಯಾ, ಜೈಲಿಗೆ ಕರ್‍ಕೊಂಡೋಗ್ತಾರೆ. ಹೋಗು ಹೋರ್‍ಹೋಗು" ಅಂತ ಕೈಯೊಡ್ಡಿ ಮುಖ ತಿರುಗಿಸಿಕೊಂಡ. ತತ್ತರಿಸಿ ಹೋದ ಈ ಅಪ್ಪಯ್ಯ ನನಗೆ ಯಾವ ನೋವು ಬರದಂತೆ ಯಾವಾಗ್ಲೂ ಕಾಪಾಡೊ ಅಪ್ಪಯ್ಯ ಅಸಹಾಯಕನಾಗಿ ಕೈ ಚೆಲ್ಲಿ ನಿಂತಿದ್ದಾನೆ."[64] ಅವರ ಬದುಕಿನಲ್ಲಿ ಅಂದುಕೊಳ್ಳದೆ ಇರುವುದು ನಡೆದೇ ಹೋಗಿತ್ತು. ಆದ್ರೆ ತಂದೆ ಅದ ಕಂಡು ಸಂಕಟಪಡುತ್ತಿದ್ದರು. "ಎಲ್ಲರಿಂದಲೂ ಗೌರವದಿಂದ ಕೈ ಮುಗಿಸಿಕೊಳ್ಳುವ ನನ್ನ ಸಲುವಾಗಿ ತಲೆಬಗ್ಗಿಸಿ ಬೇಡಿಕೊಳ್ಳುವುದನ್ನು ನೋಡಿ ಹೊಟ್ಟೆಯೊಳಗಿನ ಕರುಳಿನೊಡನೆ ಕತ್ತರಿ ಆಡುತ್ತಿತ್ತು"[65] ಬದುಕಿನ ದಾರಿ ಬದಲಾಯಿತು. ಯಾರನ್ನು ದೂಷಿಸದೆ, ದ್ವೇಷಿಸದೆ, ಇರಬೇಕಾಗಿತ್ತು, ಬದುಕಬೇಕಾಗಿತ್ತು. ಅದಕ್ಕಾಗಿ ಕೆಲಸ ಮಾಡಲು ನಿರ್ಧರಿಸಿದರು. ಪ್ರಾಜೆಕ್ಟ್‌ಗಳ ಕೆಲಸ, ಬೊಂಬೆಯಾಟದ ಪ್ರದರ್ಶನ ಕೆಲಸ ಹೀಗೆ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಇಂದಿಗೆ ತಮ್ಮನ್ನು ವಿವಿಧ ಕಾರ್ಯಗಳಲ್ಲಿ ಮಹಿಳಾಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿಯುತ್ತಿದ್ದಾರೆ.

**ಲಕ್ಷ್ಮಣ್ ಅವರ ಸಂಭೋಳಿ : ೨೦೦೩**

ಲಕ್ಷ್ಮಣ್ ಅವರದು ಸಂವೇದನಾ ಶೀಲವಾದ ವ್ಯಕಿತ್ವ ಅಸಮಾನತೆಯ ನೋವಿನ ಹಿನ್ನೆಲೆಯಲ್ಲಿ ವಿಶಿಷ್ಟವಾಗಿ ಬೆಳೆದು ಬಂದವರು ಲಕ್ಷ್ಮಣ್ ಅವರು. ಅವರದು ಸಂಕಷ್ಟಗಳ ವರ್ಣಾನಾತೀತ ಬದುಕು. ಅವರ ಬದುಕಿನ ಯಾತನಾಮಯವಾದ ಚಿತ್ರಣವನ್ನು ಸಂಭೋಳಿ ಕಟ್ಟಿಕೊಡುತ್ತದೆ.

'ಸಂಭೋಳಿ' ಲಕ್ಷ್ಮಣ್ ಅವರ ಆತ್ಮಕಥನವಾಗಿದೆ. ತಮ್ಮ ಬದುಕಿನ ಏರಿಳಿತಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಮಾದಿಗ ಸಮುದಾಯದ ಕಡುಬಡತನದ ಮನೆಯಲ್ಲಿ ಹುಟ್ಟಿದ ಇವರ ಜೀವನದ ಪ್ರತಿಯೊಂದು ಹಂತದ ಸಮಸ್ಯೆಯನ್ನು ಎದುರಿಸುತ್ತಾ ಮುಂದೆ ಸಾಗುತ್ತಾರೆ. ಬಾಲ್ಯದಿಂದಲೂ ಅವರ ಸ್ಮೃತಿ ಪಟಲದಲ್ಲಿ ಹೆಪ್ಪುಗಟ್ಟಿದ ಅವರ ಬದುಕಿನ ಚಿತ್ರಣವನ್ನು ಸಂಭೋಳಿ ಆತ್ಮಕಥೆಯಲ್ಲಿ ಕಾಣಬಹುದು.

ಸಂಭೋಳಿ ಕೃತಿಯಲ್ಲಿ ಲಕ್ಷ್ಮಣ್ ಅವರು ತಮ್ಮ ಬಾಲ್ಯ ವಿದ್ಯಾಭ್ಯಾಸ, ಉದ್ಯೋಗ, ಹೋರಾಟ, ಕ್ರೌರ್ಯ, ಹಿಂಸೆ ಎಲ್ಲವನ್ನು ಚಿತ್ರಿಸುತ್ತಾ ಹೋಗುತ್ತಾರೆ. ಪ್ರತಿಯೊಂದು ಘಟನೆಯಲ್ಲೂ ನೋವಿದೆ. ಅಮಾನವೀಯತೆ ಇದೆ. ಇವೆಲ್ಲವನ್ನು ಸಹಿಸಿ ಬದುಕುವ ಶಕ್ತಿ ಲಕ್ಷ್ಮಣ್ ಅವರಿಗಿದೆ. 'ಗೋಡೆ ಇಲ್ಲದ ಅರ್ಮನೆಯಾಗ್ನ ಸುಃಖ ನಿದ್ದೆ' ಬಡವರ ಮನೆಯ ಚಿತ್ರಣ. "ನನ್ತಾತ್ನ ಮನ್ಗೆ ಗೋಡೆ ಇರ್ಲಿಲ್ಲ. ಇಚಲ್ಗರಿಗಳನ್ನ ಒಂದ್ರ ಪಕ್ಕ ಒಂದ್ನ ನಿಲ್ಸಿ ನಡ್ಮದ್ದೆ ಒಂದು ಬಿದ್ರಿನ ದಬ್ಬೆ ಮಡ್ಗಿ ಅದ್ಕೆ ಕತ್ತಾಳೆ ನಾರ್ನಿಂದ ಬಿಗ್ದಿದದ್ದೆ ಗೋಡೆ. ಮೊಣ್ಕಾಲು ಉದ್ದದ ನಾಲ್ಕು ಯಾತ್ರುದ್ದೋ ಮರ್ದ ಕವಲುಗಳೇ ಆಧಾರ ಸ್ತಂಭಗಳು. ಆ ಕವಲುಗಳಲ್ಲಿ ಉದ್ದನೇ ಬಿದಿರಿನ ಚೊಂಬುಗಳು ತಲೆ ಮೇಲೆ ಮನೆ ಉದ್ದಕ್ಕೂ ಒಂದು ಮರ್ದ ತೊಲೆ ಅದ್ರಿಂದ ಗಳಗಳು ಇಳೇ ಬಿದ್ದಿದ್ದೇ, ಅದ್ರ ಮೇಲೆ ಕಬ್ಬಿನ ಸ್ವಾಗೆ ಹೋದ್ದಿಸಿದ್ರು. ಅದ್ನ ಕತ್ತಾಳೆ ನಾರ್ನಿಂದ ಬಿಗ್ದಿದ್ರು. ಆ ಮನೆಯಲ್ಲಿ ಎಂದೂ ಸಖೆ ಆಗ್ತಿರ್ಲಿಲ್ಲ. ಅಷ್ಟೊಂದು ಚಳಿನೂ ಆಗ್ತಿರ್ಲಿಲ್ಲ. ಒಂದ್ಕಡೆ ಒಲೆ. ಅದ್ರ ಪಕ್ದಾಗೆ ಅರ್ಕಲ್ಲು ಅದ್ರ ಪಕ್ದಾಗೆ ಗುಂಡ್ಕಲ್ಲು, ಅದ್ರ ಪಕ್ದಾಗೆ ಮಡ್ಕೆ ಸಾಲ್ಗಳು. ಅದ್ರ ಪಕ್ದಾಗೆ ನೀರರ್ವಿ, ಬಿಲ್ಪಗ್ದಾಗೆ ಒಂದ್ಮೂಲೆಯಲ್ಲಿ ದೇವ್ರಪಟಗಳು ಅಲ್ಲೇ ದೀಪಾಲೆ ಕಂಬಾ, ಅದ್ರ ಮುಂದೆನೇ ಊಟ, ಇಚಲ್ಗರಿಗಳ್ನ ಒಂದ್ರ ಪಕ್ಕ ಒಂದ್ನ ನಿಲ್ಸಿ ಅವಗಳ್ನ ಬಿಗ್ದು ಬಾಗಿಲು ಮಾಡಿದ್ರು, ಅದ್ಕೆ ಬೀಗ ಇರ್ಲಿಲ್ಲ."[66] ಇದು ಎಲ್ಲಾ ದಲಿತರ ಮನೆಯ ಸ್ಥಿತಿಯಾಗಿತ್ತು. ಕಷ್ಟಪಟ್ಟು ದುಡಿಯುವುದು ಗುಡಿಸಲು ಮನೆಗಳಲ್ಲಿ ವಾಸಿಸುವುದು. ಮೇಲುವರ್ಗದವರ ಮನೆಗಳಲ್ಲಿ ದುಡಿಯುವುದು ದಲಿತರ ಬದುಕಿನ ಚಿತ್ರಣವಾಗಿತ್ತು. ಆದರೆ ಲಕ್ಷ್ಮಣ್ ಅವರಿಗೆ ಚಿಕ್ಕ ವಯಸ್ಸಿಗೆ ಮುಂದಾಲೋಚನೆ ಹಾಗೂ ಇರುವುದನ್ನು ಇದ್ದ ಹಾಗೆ ಹೇಳುವುದನ್ನು ರೂಢಿಸಿಕೊಂಡಿದ್ದರು. ತಾಯಿಯ ಒತ್ತಾಯದಿಂದ ಹಿರಿಯರು ಸತ್ತೋರಿಗೆ ಮಾಡುವ ಪೂಜೆ ಅಷ್ಟೊಂದು ಮುಖ್ಯವಲ್ಲವೆಂಬಂತೆ ತಿಳಿಸಿ ಹೇಳುವ ಕ್ರಮ ಸೊಗಸಾಗಿದೆ ಮತ್ತು ನೈಜವಾಗಿದೆ. 'ಯಣಕ್ಕೆ ಶೃಂಗಾರ ಮಾಡೋದು, ಗುಂಡಿಗೆ ಗೋರಿ ಕಟ್ಟೋದು, ಸುತ್ತೋರ್ಗೆ ಯಡೆ ಹಾಕೋದು ಇವುಗಳಿಂದ ಸತ್ತ ಆ ವ್ಯಕ್ತಿಗೆ ಸಿಗೊ ಸಂತೋಷ ಏನು!' ಎಂದಾಗ ಅವರ ತಾಯಿ 'ಮಗ ಅಂಗಾದ್ರೆ ನಾವು ಸತ್ರೂನೂ ನೀನು ನಮ್ಗೆ ಯಡೆ ಹಾಕಲ್ವಾ' ಎಂದು ಕೇಳುತ್ತಾರೆ. ಆಗ ಇವರು 'ಇಲ್ಲಾ' ಎಂದು ಹೇಳುತ್ತಾರೆ. ಆದರೆ ಅವರು ತಾಯಿಗೆ ತಿಳಿಸಿ ಹೇಳುವ ಮಾತು 'ನೋಡಮ್ಮಾ ನೀವು ಬದುಕಿರುವವರೆಗೂ ನಿಮ್ಗೆ ಬೇಕಾದ್ದು ತಂದ್ಕೊಟ್ಟು ಸುಃಖ್ವಾಗಿ ನೋಡ್ಕಳಾದು ನನ್ನ ಕರ್ತವ್ಯ. ಬದುಕಿರುವಾಗ ತಂದೆ, ತಾಯ್ನ ಚೆನ್ನಾಗಿ ನೋಡ್ಕಳ್ದಿರಾ ಸತ್ಮೇಲೆ ಯಡೆ ಹಾಕಿದ್ರೆ ಏನ್ಬಂತು. ಈ ರೀತಿ ಮಾಡುವುದು ಮೌಢ್ಯವಾಗ್ತದೆ"[67] ಎಂಬ ನಿಷ್ಠೂರವಾದ ಹಾಗೂ ನೇರವಾದ ಮಾತುಗಳನ್ನಾಡುತ್ತಾರೆ.

'ಬಿಕ್ಷೆ ಕಾಸ್ನಿಂದ ಕೋಳಿಗಳ ಯಜ್ಮಾನನಾದೆ' ಎಂದು ಯಾವುದೇ ಮುಜುಗರವಿಲ್ಲದೆ ಹೇಳಿಕೊಳ್ಳುತ್ತಾರೆ. ಊರಿನಲ್ಲಿನ ದೊಡ್ಡುಗ್ಟೆಗೆ ಪೂಜೆ ಸಲ್ಲಿಸಲು ಬರುವ ಕ್ರಿಶ್ಚಿಯನ್ನರ ಬಳಿ 'ಸ್ವಾಮಿ ಮುರ್ಕಾಸು ಕೊಡ್ರಿ' ಎಂದು ಬೇಡುತ್ತಿದ್ದೆ. ಆ ಹೊತ್ತು ಹೊಟ್ಟೆ ತುಂಬ ಕಲ್ಲಂಗಡಿ ಹಣ್ಣು, ಕರ್ರೂಜದ ಹಣ್ಣು ಐಸ್‌ಕ್ಯಾಂಡಿ ಮತ್ತು ಕ್ರಿಶ್ಚಿಯನ್ ಜನ್ಗಳು ನಾವು ಎಂದೂ ನೋಡ್ದೆ, ಎಂದೂ ತಿನ್ದೆ ಇದ್ದ ತಿಂಡಿಗಳನ್ನ ಕೊಡ್ತಿದ್ರು. ಅದ್ನೆಲ್ಲಾ ತಿಂದೂ ತಿಂದೂ ಹೊಟ್ಟೆ ತುಂಬೊಗ್ಬುಡ್ತಿತ್ತು"[68]

ಎನ್ನುತ್ತಾರೆ. ಅವರು ನೀಡಿದ ಹಣದಿಂದಲೇ ಕೋಳಿಕೊಂಡು ಯಜಮಾನನಾದೆ ಎಂದು ಹೇಳಿಕೊಳ್ಳುತ್ತಾರೆ. "ಸುಂಕೇನಹಳ್ಳಿ ಗೌಡ್ರತ್ರಾ ಮೂರು ತಿಂಗಳು ಕೂಲಿ ಮಾಡಿದ್ದೆ. ಬೇಸಿಗೆ ರಜಾ ಮುಗ್ದು ಇಸ್ಕೂಲು ಪ್ರಾರಂಭವಾಯ್ತು. ಆ ಗೌಡ್ನ ಮಗ್ನ ಅಳತೆಗೆ ಹೊಲಿಸಿದ್ದ ಒಂದು ಖಾಕಿ ಚೆಡ್ಡಿ ಬಿಳಿಕುಡ್ತಾ ನನಗೆ ಕೊಟ್ಟರು. ಅದ್ನ ಇಕ್ಕೊಂಡು ಸಂಭ್ರಮದಿಂದ ಹಟ್ಟಿಯೆಲ್ಲಾ ಸುತ್ತಾಡಿ ಸಿಕ್‌ಸಿಕ್ಕೋರಿಗೆಲ್ಲಾ ನಾಳೆಗೆ ಇಸ್ಕೂಲೋಗ್ತಿನಿ ಹೇಳ್ಕಂಡು ಬಂದಿದ್ದೆ.[69] ಚಿಕ್ಕಂದಿನಿಂದಲೂ ಕಷ್ಟದ ಬದುಕಿಗೆ ಒಗ್ಗಿಕೊಂಡು ಬಿಟ್ಟಿದ್ದರು. "ನಾನು ಕಡೇ ಬೆಂಚಲ್ಲಿ ಕುಂತ್ಕತಿದ್ದೆ. ಹಸಿವು ಬಾಯಾರ್ಕೆಯಿಂದ ನಾನು ಮಾತಾಡುವುದಕ್ಕೂ ಶಕ್ತಿ ಇಲ್ದೆ ಸದಾ ಮೌನವಾಗಿರ್ತಿದ್ದೆ."[70] ಹೊಟ್ಟೆಯ ಹಸಿವು ಅವರನ್ನು ತಳಮಳಗೊಳಿಸುತ್ತಿದ್ದರು ಸಹಿಸಿಕೊಂಡಿದ್ದರು. ಆದರೆ ಗೆಳೆಯನ ಸಹಾಯದಿಂದ ಹಾಸ್ಟೆಲ್‌ಗೆ ಸೇರುವಂತಾಯಿತು. ಇದರಿಂದ ಊಟದ ಚಿಂತೆ ಕಡಿಮೆಯಾಯಿತು. ನಂತರದ ದಿನಗಳಲ್ಲಿ ಅವರ ಬದಲಾದ ಪರಿಸ್ಥಿತಿಯಿಂದಾಗಿ ಅವರ ದಿನನಿತ್ಯದ ಬದುಕಿನಲ್ಲಿಯೂ ಬದಲಾವಣೆಗಳಾದವು. ನಿತ್ಯಸ್ನಾನ, ಪೂಜೆ, ದೇವಾಸ್ಥಾನ ಆಟ ಹೀಗೆ ತಮ್ಮನ್ನು ತೊಡಗಿಸಿಕೊಂಡಿದ್ದರು. ವಾಪಸ್ಸು ಮನೆಗೆ ಹೋಗುವಾಗ ಅವರಲ್ಲಾದ ಬದಲಾವಣೆಯಿಂದ ಜನ ಅವರನ್ನು ಮಾತಾಡಿಸುತ್ತಿರಲಿಲ್ಲ. ದೂರದಿಂದಲೇ ನೋಡುತ್ತಿದ್ದರು "ನಮ್ಮಲ್ಲಿ ಜನ್ರು ನನ್ನ ಮಾತಾಡಿಸಲು ಎದುರ್ತಿದ್ರು, ನಮ್ಮೂರಿನ ಜನ್ರು ದೂರದಿಂದಲೇ ನನ್ನ ನೋಡ್ತಿದ್ರು ಹತ್ತಿರ ಬಂದು ಮಾತಾಡಿಸ್ತಿರ್ಲಿಲ್ಲ. ಆಗ ನನ್ಗೆ ವಿದ್ಯೆಯ ಮಹತ್ವ ಅರ್ಥವಾಯ್ತು. ಈ ಹಾಳಾದ ಹಣ, ಅಧಿಕಾರ, ಜ್ಞಾನ, ಆಡಂಬರ ಮುಗ್ಧ ಜನರನ್ನು ಬೆರಗುಗೊಳಿಸುತ್ತದೆ ಭಯ ಭೀತರನ್ನಾಗಿಸುತ್ತದೆ.[71] ವಿದ್ಯೆ ಕಲಿತು ಶಿಸ್ತಿನಿಂದ ಸ್ವಚ್ಛವಾಗಿದ್ದ ಶುದ್ಧವಾದ ಬಟ್ಟೆಗಳನ್ನು ಧರಿಸಿ ಓಡಾಡುತ್ತಿದ್ದವರನ್ನು ಊರಿನವರು ಗೌರವ ಭಯ ಭಕ್ತಿಗಳಿಂದ ಕಾಣುವಷ್ಟು ಮುಗ್ದರಾಗಿದ್ದರು. ಲಕ್ಷ್ಮಣ್ ಅವರಲ್ಲಿನ ಬದಲಾವಣೆ ಎಲ್ಲರನ್ನು ಅಚ್ಚರಿಗೊಳಿಸಿತ್ತು. ಹಸಿವು ಅಪಮಾನಗಳು ಕಳೆದು ಎಸ್.ಎಸ್.ಎಲ್.ಸಿ.ವರೆಗೂ ಬಂದಿದ್ದರು. ಸರ್ಕಾರಿ ಕೆಲಸಕ್ಕೂ ಅರ್ಜಿ ಹಾಕಿ ಕಾಯುತ್ತಿದ್ದರು. 'ಕಾಲಾಂತ್ರದಿಂದ ನಮ್ಮ ವಂಶದಲ್ಲಿ ಯಾರ್ಗೂ ಸರ್ಕಾರಿ ಕೆಲ್ಸ ಸಿಕ್ಕಿರ್ಲಿಲ್ಲ. ನಮ್ಮ ಮನೆಯವ್ರಿಗೆಲ್ಲಾ ಸಂತೋಷವೇ ಸಂತೋಷ.'[72] ಕೆಲಸಕ್ಕೆ ಹಾಜರಾದರು. ಆದರೆ ಅಲ್ಲಿಯೂ ಅವರು ಶೋಷಣೆಗೆ ಒಳಗಾದರು. ಅವರನ್ನು ದುರುಗುಟ್ಟಿ ನೋಡುವುದು. ಕೆಮ್ಮಿ ಕ್ಯಾಕರಿಸಿ ನೆಲಕ್ಕೆ ಉಗಿಯುವುದು. ಮುಖ ಸಿಂಡರಿಸುವುದು ನಡೆದೇ ಇತ್ತು. ಸ್ವಲ್ಪ ದಿನಗಳಲ್ಲಿ ಮೋಸದಿಂದ ಕೆಲಸದಿಂದ ತೆಗೆದು ಹಾಕಿದ್ದರು. ಬಡವರ ಸ್ಥಿತಿ ಕೇಳುವವರು ಯಾರು. ಡಿ.ಡಿ.ಪಿ. ಅವರ ಕಾಲು ಹಿಡಿದು "ಸ್ವಾಮಿ ನಾವು ಬಡವ್ರು, ಈ ಕೆಲ್ಸನಾ ನಂಬ್ಕೊಂಡು ನಮ್ಮಣ್ಣನ ಮದ್ವೆಗೆ ಪಟೇಲ್ರೂ ಹತ್ರ ಸಾಲ ಮಾಡಿದ್ದೀವಿ ಸ್ವಾಮಿ"[73] ಎಂದು ಕೈಮುಗಿದು ಬೇಡಿದರೂ ಅವರನ್ನು ಹೊರಗೆ ತಳ್ಳುತ್ತಾರೆ. ಆದರೆ ಈ ಸ್ಥಿತಿ ತನ್ನೊಬ್ಬನದಲ್ಲ ಇಡೀ ದಲಿತ ಜನಾಂಗ ಜಾತಿ ದೌರ್ಜನ್ಯಕ್ಕೆ ಸಿಕ್ಕು ನರಳುತ್ತಿರುವುದನ್ನೇ ಗುರುತಿಸಿಕೊಳ್ಳುತ್ತಾರೆ. ಇದಕ್ಕೆ ಮತ್ತೊಂದು ಉದಾಹರಣೆ ಅವರ ಗೆಳೆಯ ಜಗದೀಶನ ಅಕ್ಕ ಕಮಲ ತನ್ನೊಂದಿಗೆ ಮಾತಾಡಿದ್ದಕ್ಕೆ ಅವಳ ತಂದೆ ಕಮಲ ತಲೆಗೆ ಸಲಾಕೆಯಿಂದ ಹೊಡೆದು ಗಾಯಗೊಳಿಸಿದ್ದನು. ಕಮಲ ತಾಯಿಯ ಮಾತಿಗೆ ನೀಡುವ ಪ್ರತ್ಯುತ್ತರ "ಆ ಹುಡ್ಗ ಅವ್ರ ಜಾತಿಯಲ್ಲಿ ಹುಟ್ಟಬಾರ್ದಾಗಿತ್ತು. ಅಂಥ ಒಳ್ಳೆ ಹುಡುಗನ್ನಾ ನೋಡೇ ಇಲ್ಲಾ ಅಂತ ಅಪ್ಪ ನೀನು

ನಮ್ಗೆಲ್ಲಾ ಎಷ್ಟೋ ಸಾತಿ ಹೇಳಿಲ್ವಾ? ಅಂತ ಒಳ್ಳೆ ಹುಡುಗ್ನತ್ರಾ ಮಾತಾಡಿದ್ರೆ ಏನ್‌ತಪ್ಪ.[74] ಪ್ರೀತಿಗೂ ಜಾತಿಯನ್ನು ಅಡ್ಡವಾಗಿಸಿ ಒಳ್ಳೆಯದನ್ನು ಮರೆತುಬಿಡುವ ವ್ಯಕ್ತಿತ್ವಗಳು ಹೆಚ್ಚಾಗಿಯೇ ಕಾಣುತ್ತವೆ.

ದಲಿತ ಸಂಘರ್ಷ ಸಮಿತಿ ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾದಲ್ಲಿ ಉರಿವ ಪಂಜು ಕೈಲಿಡಿದು ಸಂಘಟನಾಕಾರರು ಹೇಳ್ಕೊಡ್ತಿದ್ದ ಘೋಷಣೆಗಳನ್ನ ಗಿಳಿಪಾಠದಂತೆ ಹೇಳ್ತಾ ಕಲ್ಲು ಮುಳ್ಳು, ಗುಟ್ಟೆ, ಬೆಟ್ಟಗಳನ್ನ ಅತ್ತಿ ಇಳಿದು ಬರಿಗಾಲ್ನಲ್ಲೇ ನಡೆಯುತ್ತಿದ್ದೆ[75] ಎನ್ನುತ್ತಾರೆ. ಸಮಾಜದ ಸ್ಥಿತಿಯನ್ನು ಕಂಡು ಮರುಗಿ ಹೇಳುವ ಮಾತುಗಳೆಂದರೆ "ಈ ಹಿಂದೂ ಸಮಾಜಕ್ಕೆ ಜಾತಿಯೆಂಬ ಕ್ಯಾಂಸರು ತಗುಲೈತೆ. ಆ ಕಾಯ್ಲೆಯ ಗುಣಲಕ್ಷಣಗಳೆಂದರೆ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನಾ ಗೌರವಿಸದೆ ಇರೋದು ಇನ್ನೊಬ್ಬರನ್ನು ಸಮಾನತೆಯಿಂದ ಕಾಣ್ದೆ ಇರೋದು ಜಾತಿಯತೆಯ ಕಾಯ್ದೆ ಹೆಚ್ಚಾಗಿರುವವರು ಸದಾ ಅಶಾಂತಿ, ಅನುಮಾನ ಭಯದಿಂದಿರುತ್ತಾರೆ. ಜಾತಿಯ ಕಲ್ಪನೆ ಇರುವ ವ್ಯಕ್ತಿ ಮಾನವೀಯತೆಯ ಗುಣಲಕ್ಷಣಗಳನ್ನು ಕಳೆದುಕೊಂಡಿರುತ್ತಾನೆ"[76] ಎಂಬುದು ಅವರ ಅಭಿಪ್ರಾಯವಾಗಿತ್ತು.

೧೯೮೦ರಲ್ಲಿ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಾಶಿವ ನಗರದಲ್ಲಿರುವ ಪದವಿ ಪೂರ್ವ ಕಾಲೇಜಿನಲ್ಲಿ ನನ್ಗೆ ಅಟೆಂಡರ್ ಕೆಲ್ಸ ಸಿಕ್ತು. ಈ ಪಟ್ಟದ ಜನ ವಿದ್ಯಾವಂತರು, ಬುದ್ಧಿವಂತರು, ನಾಗರೀಕರು ಇವ್ರಲ್ಲಿ ಜಾತೀಯತೆಯೆಂಬ ರೋಗ ಅಷ್ಟೊಂದು ಜಾಸ್ತಿ ಇರುವುದಿಲ್ಲವೆಂದುಕೊಂಡಿದ್ದೆ. ಆ ಭ್ರಮೆ ಬೇಗನೆ ಸುಟ್ಟು ಬೂದಿಯಾಯ್ತು".[77] "ಈ ಹಾಳಾದ ಜನ್ಗಳು ನನ್ನ ಜಾತಿ ತಿಳಿದ ಕೂಡಲೇ ಕುಷ್ಟರೋಗಿಗಳನ್ನಾ ನೋಡಿ ಯದರಿಕೊಂಡು ದೂರ ದೂರ ನಿಲ್ಲುವಂತೆ ನನ್ನನ್ನ ನಡೆಸಿಕೊಳ್ಳುತ್ತಾರಲ್ಲ"[78] ಎಂಬ ಚಿಂತೆ ಅವರನ್ನು ಹೆಚ್ಚು ಕಾಡುತ್ತಿತ್ತು. ಜಾತಿವಿನಾಶ ವೇದಿಕೆಯನ್ನು ಪ್ರಾರಂಭಿಸಿ ಜಾತಿವಿನಾಶಕ್ಕಾಗಿ ದುಡಿದರು. 'ಜಾತಿಯತೆ ಅಳಿಯಲಿ ಮಾನವೀಯತೆ ಉಳಿಯಲಿ' ಎಂಬುದು ಅವರ ಘೋಷವಾಕ್ಯವಾಗಿತ್ತು.

**ಡಾ. ಸಮತಾ ಬಿ. ದೇಶಮಾನೆಯವರ ಮಾತಂಗಿ ದೀವಟಿಗೆ : ೨೦೧೫**

'ಮಾತಂಗಿ ದೀವಟಿಗೆ' ಡಾ. ಸಮತಾ ಬಿ. ದೇಶಮಾನೆಯವರ ಆತ್ಮಕಥೆಯಾಗಿದೆ. ಅನುಭವ ಕಥನವನ್ನು, ನೆನಪುಗಳ ಸಂಗ್ರಹವನ್ನು ಈ ಕಥನ ಕಟ್ಟಿಕೊಡುತ್ತದೆ, ಸುಮಾರು ೧೫ ಅಧ್ಯಾಯಗಳಲ್ಲಿ ಈ ಆತ್ಮಕಥೆ ಮೂಡಿಬಂದಿದೆ. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ತಂದೆಯವರಿಂದ ಕೇಳುತ್ತ ಅವರ ಪ್ರಭಾವಕ್ಕೆ ಒಳಗಾಗಿ ಅವರ ಸಿದ್ಧಾಂತಗಳನ್ನು ಅಳವಡಿಸಿಕೊಂಡು ನಡೆದಂತಹ ಕುಟುಂಬ ಇವರದು. 'ಅಂಬೇಡ್ಕರ್ ಜಯಂತಿ ಎಂದರೆ ಹಬ್ಬದ ರೀತಿ ಆಚರಿಸಿ ಬೆಳಗ್ಗೆಯೇ ಶುಚಿಯಾಗಿ ಹೊಸಬಟ್ಟೆ ಧರಿಸಿ ಅವರ ಊರಿನಲ್ಲಿದ್ದ ಅಂಬೇಡ್ಕರ್ ಪ್ರತಿಮೆಯ ಬಳಿ ಹೋಗಿ ಹೂವಿನ ಹಾರ ಹಾಕಿ ಅಲ್ಲಿದ್ದವರಿಗೆ ಸಿಹಿಬೂಂದಿಯನ್ನು ಹಂಚಿ ಸಂಭ್ರಮಿಸುತ್ತಿದ್ದವರು ಅವರ ತಾಯಿ ರತ್ನ ದೇಶಮಾನೆ'. ಇವುಗಳನ್ನು ನೋಡಿ ಬೆಳೆದವರು ಸಮತಾ. ಗುಲ್ಬರ್ಗಾ ಜಿಲ್ಲೆಯ ಕೊಳಗೇರಿಯಲ್ಲಿ ಎಂಟು ಮಕ್ಕಳಲ್ಲಿ ಒಬ್ಬರಾಗಿದ್ದರು. ಆ ಸಮಯದಲ್ಲಿ ಉತ್ತರ ಕರ್ನಾಟಕ

ಎಂದಾಗ ಶರಣರ ಪರಂಪರೆ, ಭಕ್ತಿಪರಂಪರೆಗೆ ಹೆಸರಾದಂತೆ, ಇತಿಹಾಸದ ಭಾಗವಾಗಿದ್ದ ಪ್ರದೇಶ. ಹಾಗೆಯೇ ಅಲ್ಲಿದ್ದ ಸಾಮಾಜಿಕ ಸಮಸ್ಯೆಗಳಾದ, ದೇವದಾಸಿ ಜೋಗತಿ ಪದ್ಧತಿಗಳು ಜೀವಂತವಾಗಿದ್ದವು. ಕರ್ನಾಟಕದಲ್ಲಿಯೇ ಅತ್ಯಂತ ಬಡತನವಿದ್ದ ಪ್ರದೇಶವಾಗಿದ್ದ ಅತಿವೃಷ್ಠಿ, ಅನಾವೃಷ್ಠಿಗೆ ಒಳಗಾಗುತ್ತ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತಿದ್ದ ಪ್ರಕೃತಿ ಚಿತ್ರಣವಿತ್ತು. ಊರಿನಲ್ಲಿ ಕಡುಬೇಸುಗೆಯಿದ್ದರೆ ಬಡತನದಿಂದ ಬಸವಳಿದವರ ಹೊಟ್ಟೆಯಲ್ಲಿ ಹಸಿವಿನ ಬೆಂಕಿ ತಾಂಡವವಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ಬೆಳೆದವರು ಸಮತಾ. ತಾಯಿಯ ಭಕ್ತಿ ಆದರ್ಶದ ಗುಣಗಳು, ತಂದೆಯ ಹೋರಾಟ ಸಮಾಜ ಸೇವೆ ಎಲ್ಲವೂ ಇವರಲ್ಲಿವೆ. ಶರಣರ ನಾಡು ಎಂಬುದಕ್ಕೆ ಸಾಕ್ಷಿಯಾಗಿದ್ದ ಪ್ರದೇಶ ಗುಲ್ಬರ್ಗ. 'ನಮ್ಮ ಕೇರಿಗೆ ಪ್ರತಿದಿನವು ನಸುಕಿನಲ್ಲಿ ಸ್ವಾಮಿಗಳು ಬರುತ್ತಿದ್ದರು. ಕೇಸರಿ ಬಣ್ಣದ ಛತ್ರಿ ಅವರ ಎಡಗೈಲಿದ್ದರೆ ಬಲಗೈಯಲ್ಲಿ ಒಂದು ಕೋಲು ಇರುತ್ತಿತ್ತು'.[79] ಸ್ವಾಮಿಗಳ ಎಡ ಹೆಗಲಿಗೆ ಒಂದು ಬಿಳಿಯ ಜೋಳಿಗೆ ಸದಾ ನೇತಾಡುತ್ತಿತ್ತು. ಅದರಲ್ಲಿ ದಪ್ಪದೊಂದು ವಿಭೂತಿ, ಅದರಲ್ಲಿ ಭಕ್ತರು ತುಂಬುತ್ತಿದ್ದ ಜೋಳ, ಜೋಳದ ಹಿಟ್ಟು ತೊಗರಿಬೇಳೆ ಚಿಲ್ಲರೆ ದುಡ್ಡು ಹಾಕಿಸಿಕೊಳ್ಳುತ್ತಿದ್ದರು.[80] ಶರಣರು, ಸಂತರು ಬಂದು ಹಾಡುವುದರೊಂದಿಗೆ ಬೆಳಗಾಗುತ್ತಿದ್ದ ಊರು. ನಮ್ಮ ಕೇರಿಗೆ ಬರುವ ಆ ಸ್ವಾಮಿಗಳು ಯಾವತ್ತು ಮೇಲು–ಕೀಳು, ಜಾತಿ–ಧರ್ಮ, ಹೆಣ್ಣು–ಗಂಡು, ಬಡವ–ಶ್ರೀಮಂತ, ಹೊಲೆಯ ಮಾದಿಗ ಮೋಚಿ ಸಮಗಾರ ಡೋಹರ ಎಂಬ ಬೇಧ ಭಾವ ಮಾಡುತ್ತಿರಲಿಲ್ಲ. ಎಲ್ಲರ ಮನೆಯಲ್ಲೂ ನೀರನ್ನು ಕುಡಿಯುತ್ತಿದ್ದರು.

ಕಲಬುರ್ಗಿಯ ಗಾಜೀಪುರದಲ್ಲಿ ಸಮತಾ ಜನಿಸಿದರು. ಇವರ ತಾತ ಚಪ್ಪಲಿ ಹೊಲಿಯುವ ಹಾಗೂ ಮಾರಾಟ ಮಾಡುವ ಕೆಲಸವನ್ನು ಮಾಡಿಕೊಂಡಿದ್ದವರು. 'ಆರ್ಯ ಸಮಾಜದವರು' ನೀವೆಲ್ಲ ಸ್ವಚ್ಛತೆಯಿಂದ ಇರಬೇಕು. ನಯ–ವಿನಯ ಭಯ ಭಕ್ತಿ ವಿನಮ್ರತೆಯಿಂದ ನಮ್ಮ ಜೊತೆಗೆ ಯಾವಾಗಲೂ ಶಕ್ತಿಯಾಗಿ ಬೆಂಬಲಿಸುತ್ತಾ ಇರಬೇಕು ಎಂದು ಹೇಳುತ್ತಿದ್ದರು'[81] ಈ ಮಾತುಗಳನ್ನು ಕೇಳಿದ ಇವರ ತಂದೆ ಬಾಬುರಾವ್ ಅವರು ಆರ್ಯಸಮಾಜದ ಸದಸ್ಯರಾದರು. ಆಗಲೇ ವಿವಾಹವಾಗಿದ್ದ ಅವರು ಕುಟುಂಬ ನಿರ್ವಹಣೆಗಾಗಿ ದುಡಿಯುವುದು ಅಗತ್ಯವೆನಿಸಿ ಕೆಲಸ ಮಾಡಲು ಪ್ರಾರಂಭಿಸಿದರು. ಆದರೆ ಸಮಾಜಸೇವೆ ಅವರನ್ನು ಕೆಲಸ ಬಿಟ್ಟು ಬರುವಂತೆ ಮಾಡಿತು. ಗಾಂಧೀಜಿಯವರನ್ನು, ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಕಂಡು ಪ್ರಭಾವಿತರಾಗಿದ್ದರು. ಕಾರ್ಮಿಕರಾಗಿ ಅವರ ಪರವಾದ ಹೋರಾಟ ಮಾಡಿದರು. ಅವರನ್ನು ಜನತೆ ನಾಯಕನೆಂದು ಗುರುತಿಸಿತು. ವಿದ್ಯೆಯನ್ನು ಕಲಿಯುವ ಹಂಬಲದಿಂದ 'ಉಸುಕಿನ ರಾಶಿಯ ಮೇಲೆ ಅಕ್ಷರ ಕಲಿತರು. ಅದು ಬೇರೆಯವರು ಕಲಿಯುತ್ತಿದ್ದನ್ನು ನೋಡಿ ಕೇಳಿ ಕಲಿತದ್ದು. ಯಾರು ಅವರಿಗೆ ವಿದ್ಯೆ ಕಲಿಸಲು ಮುಂದೆ ಬಂದಿರಲಿಲ್ಲ'. ನನಗೆ ಯಾವ ಶಾಲೆಯಲ್ಲಿ ಯಾರು ವಿದ್ಯೆಯನ್ನು ಕಲಿಸಿಕೊಡಲಿಲ್ಲ. ಅಸ್ಪೃಶ್ಯನೆಂದು ಮುಟ್ಟಲಿಲ್ಲ. ಈ ಅವಮಾನ ಹಿಂಸೆ ನೋವು ಮುಂದೆ ನನ್ನ ಮಕ್ಕಳಿಗೆ ಆಗಬಾರದು ಎಷ್ಟೇ ಕಷ್ಟವಾಗಲಿ ನನ್ನ ಮಕ್ಕಳಿಗೆ ವಿದ್ಯೆಯನ್ನು ಕಲಿಸುತ್ತೇನೆ'[82] ಎಂದು ಶಪಥ ಮಾಡಿದ್ದರು. ಅಂತೆಯೇ ಅವರ ಎಂಟು ಜನ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುವಂತೆ ಮಾಡಿದ ಕೀರ್ತಿ ಬಾಬುರಾವ್ ಮತ್ತು ರತ್ನ ದಂಪತಿಗಳಿಗೆ ಸಲ್ಲುತ್ತದೆ.

ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಿ, ಶಾಲೆಯ ಬಳಿ ಹಣ್ಣು ತರಕಾರಿಗಳನ್ನು ಮಾರುತ್ತಾ ಜೀವನ ಸಾಗಿಸಿದ್ದರು. ಹಿರಿಯ ಮಗಳನ್ನು ಡಾಕ್ಟರ್ ಮಾಡಬೇಕೆಂಬ ಕನಸು ಹೊತ್ತು ಅವರ ಪೀಜ್‌ಗೆ ಹಣ ಹೊಂದಿಸಲು ರತ್ನಮ್ಮಳ ಬಳಿ ಬಂದು "ರತ್ನ ನಿನ್ನ ಕೊರಳಲ್ಲಿರುವ ತಾಳಿ ತೆಗೆದುಕೊಂಡು ನೀನು ಈವತ್ತು ಈ ತಾಳಿ ಕೊಟ್ಟರೇ ಅದನ್ನು ಯಾರಲ್ಲಿಯಾದರೂ 'ಒತ್ತೆ' ಇಟ್ಟು ವಿಜುಗೆ ಕಾಲೇಜಿನ ಪೀಜ್‌ಗೆ ಹಣ ತರಬಹುದು"[83] ಎಂದು ಕಣ್ಣೀರು ಸುರಿಸುತ್ತಾ ಕೇಳಿದಾಗ, ರತ್ನಮ್ಮ ತನ್ನ ಮಗಳ ಉಜ್ವಲ ಭವಿಷ್ಯಕ್ಕಾಗಿ ದೇವರಲ್ಲಿ ಪ್ರಾರ್ಥಿಸಿ ತಾಳಿ ತೆಗೆದುಕೊಟ್ಟರು. ಇದೊಂದು ದಲಿತ ಜನಾಂಗದ ನೋವು ತಮ್ಮ ಹಾಗೆ ಮಕ್ಕಳು ಆಗಬಾರದು ಅವರಿಗೆ ವಿದ್ಯೆ ಕೊಡಿಸಬೇಕೆಂದು ಹಂಬಲ ತಂದೆ ತಾಯಿಗಿತ್ತು. ಇದು ದಲಿತ ಜನಾಂಗದ ಎಲ್ಲ ತಂದೆ ತಾಯಿಗಳ ಬಹುದೊಡ್ಡ ಕನಸು. ಅವರ ತಲೆಮಾರಿನವರೆಗೆ ಕಂಡ ಕಡುಕಷ್ಟ ತಮ್ಮ ಕಾಲದಲ್ಲಿಂತೇ ಕೊನೆಯಾಗಿ ತಮ್ಮ ಮಕ್ಕಳು ವಿದ್ಯಾವಂತರಾಗಿ ಸುಃಖವಾಗಿರಬೇಕು ಎಂಬ ಕನವರಿಕೆ ಪ್ರತಿ ತಂದೆ–ತಾಯಿಯರಲ್ಲಿತ್ತು. ಆದರೆ ಈ ಆತ್ಮಕಥನದಲ್ಲಿ ಒಬ್ಬರು ಇಬ್ಬರು ಮಕ್ಕಳಲ್ಲಿ ಎಂಟು ಜನ ಮಕ್ಕಳು. ಅದರಲ್ಲಿ ಏಳು ಜನ ಹೆಣ್ಣುಮಕ್ಕಳು ಒಬ್ಬನೇ ಗಂಡು ಮಗ. ಆದರೆ ಯಾವುದೇ ತಾರತಮ್ಯ ಮಾಡದೇ ಹೆಣ್ಣುಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಆ ತಾಯಿ ತಾಳಿಯನ್ನು ಮರುಚಿಂತನೆ ಮಾಡದೆ ನೀಡಿದ್ದರು. ಅವರ ಹಿರಿಯ ಮಗಳು ವಿಜಯಲಕ್ಷ್ಮಿ ತಂದೆ ತಾಯಿಯ ತ್ಯಾಗವನ್ನು ಮರೆಯದೆ ಅವರ ಶ್ರಮವನ್ನು ಸಾರ್ಥಕಗೊಳಿಸಿದರು. ಎಂ.ಬಿ.ಬಿ.ಎಸ್. ಮುಗಿಸಿ ಅವರ ಆಸೆಯಂತೆ ಡಾಕ್ಟರ್ ಆದರು". ಆ ದಿನಗಳಲ್ಲಿ 'ಮಾದಿಗ ಯುವತಿ' ಯರನ್ನು ಪ್ರತಿಯೊಂದು ಮನೆಯಲ್ಲಿ ಒಬ್ಬರಂತೆ ಅದು ಹಿರಿಯ ಮಗಳನ್ನು 'ದೇವದಾಸಿ'ಯಾಗಿ ಬಿಡುವ ಪದ್ಧತಿ ಹೆಚ್ಚಾಗಿತ್ತು. ಆ ಕೇರಿಯಲ್ಲಿ ಯಾರು ಓದಿದವರಿರಲ್ಲಿಲ್ಲ ತಿಳುವಳಿಕೆಯೂ ಇರಲಿಲ್ಲ. ದೇವರು, ಧರ್ಮ, ಸಂಪ್ರದಾಯ, ಆಚರಣೆ, ಮೌಢ್ಯತೆ, ಅನಕ್ಷರತೆ ಮನೆಮಾಡಿತ್ತು"[84] ಆದರೆ ಅವರ ತಾಯಿ ಗಟ್ಟಿ ನಿರ್ಧಾರ ಮಾಡಿ ಇಡೀ ಊರಿನ ಜನ ಸಂಪ್ರದಾಯ ಎಲ್ಲವನ್ನು ಧಿಕ್ಕರಿಸಿ 'ಮಗಳನ್ನು ತಂದೆಯೊಂದಿಗೆ ಎಂ,ಎಸ್, ಮಾಡಲು ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಕಳುಹಿಸಿಕೊಟ್ಟರು. ಅವರ ತಾಯಿ ಹೇಳುವ ಧೈರ್ಯದ ಮಾತುಗಳು. 'ತಂಗಿ, ಜಗತ್ತಿನ್ಯಾಗ ಕೆಟ್ಟ ಜನ ಜಾಸ್ತಿ ಇದ್ದಾರೆ. ಮೈತುಂಬ ಕಣ್ಣಿರಬೇಕು, ಜೋಪಾನವಾಗಿ ಓದಬೇಕು. ಮನಿಕಡಿಗೆ ಏನು ಚಿಂತಿ ಮಾಡಬ್ಯಾಡ ನೀ ಓದಿ ದೊಡ್ಡ ಡಾಕ್ಟರ್ ಆದ್ರ ಎಲ್ಲಾ ಚಲೂ ಆಗುತ್ತದೆ"[85] ಎಂದು ಧೈರ್ಯ ತುಂಬಿ ಕಳುಹಿಸಿದ್ದರು.

ಸಮತಾ ಅವರ ಅಪ್ಪ ಸಮಾಜದ ಸಮಸ್ಯೆಗಳ ಬಗೆಗಿನ ಹೋರಾಟದೊಂದಿಗೆ ಸಂಸಾರದ ಹೋರಾಟವನ್ನು ನಡೆಸುತ್ತಿದ್ದರು. ಎಂ.ಎಸ್.ಕೆ ಮಿಲ್ಸ್‌ನಲ್ಲಿ ಕೆಲಸಕ್ಕೆ ಸೇರಿ ದುಡಿಯುತ್ತಿದ್ದರು. ಸಂಬಳದ ದಿನ ಮಕ್ಕಳಿಗೆ ತಿಂಡಿಯನ್ನು ಮರೆಯದೆ ತಂದರೆ ತಾಯಿ ಎಲ್ಲ ಮಕ್ಕಳಿಗೂ ಸಮನಾಗಿ ಹಂಚುತ್ತಿದ್ದರು. ದಲಿತರ ಶಕ್ತಿ ಇದೆ. ಎಷ್ಟೇ ಮಕ್ಕಳಿದ್ದರೂ ಎಲ್ಲರನ್ನು ಸಮಾನ ಪ್ರೀತಿಯಿಂದ ಕಾಣುವ ಶಕ್ತಿ ಇವರಲ್ಲಿ ಮಾತ್ರ ಸಾಧ್ಯ. ನಮ್ಮೂರಿಗೆ ಮಳೆಗಾಲ ಇರುತ್ತಿರಲಿಲ್ಲ. ಬೇಸಿಗೆಕಾಲ ಮತ್ತು ಚಳಿಗಾಲ ಮಾತ್ರ ಮನುಷ್ಯನನ್ನು ತತ್ತರಗೊಳಿಸುತ್ತಿದ್ದವು. ನಮ್ಮ ಕೇರಿಯ ಅಸ್ಪೃಶ್ಯರಿಗೆ ಯಾರಿಗೂ ಸ್ವಂತವಾಗಿ ಭೂಮಿ ಇರಲಿಲ್ಲ'.[86] ಇದು ಎಲ್ಲ ದಲಿತರ ಸ್ಥಿತಿಯಾಗಿತ್ತು ಒಬ್ಬ ಗೌಡರ

ಮನೆಯಲ್ಲಿ ಶೇಂಗಾ ಬೀಜಗಳನ್ನು ಸುಲಿಯಲು ಕೂಲಿಯಾಳಗಿ ಹೋಗುತ್ತಿದ್ದ ಸಮತಾ ಆ ಕೆಲಸವನ್ನು ವೇಗವಾಗಿ ಮಾಡುತ್ತಿದ್ದರು. ಒಂದು ಸೇರು ಶೇಂಗಾ ಬೀಜ ಸುಲಿದರೆ ೨೫ ಪೈಸೆ ಸಿಗುತ್ತಿತ್ತು. ಆದರೆ ಇವರು ಅವುಗಳನ್ನು ಹೆಚ್ಚು ತಿನ್ನಲು ಆ ಕೆಲಸಕ್ಕೆ ಹೋಗುತ್ತಿದ್ದರು. 'ಒಮ್ಮೊಮ್ಮೆ ಒಂದು ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಿದ್ದೆ. ನನ್ನ ಕೆಲಸ ನೋಡಿ ಆ ಗೌಡತಿನೇ ಹಿಡಿ ಸೇಂಗಾ ಉಡಿಗೆ ಹಾಕಿ ನಾಳೇನೂ ಬೇಗ ಬಾ ಎಂದು ಹೇಳುತ್ತಿದ್ದಳು"[87] ಆದರೆ ಆ ಗೌಡತಿ ಇವರಿಗೆಲ್ಲ ನೀರು ಹಾಕಲು 'ಅವರು ಸಂಡಾಸಿಗೆ ಬಳಸುವ ತಂಬಿಗೆಯಿಂದ ಕುಡಿಯುವ ನೀರನ್ನು ಎತ್ತಿ ಮೇಲಿಂದ ಹಾಕುತ್ತಿದ್ದರು. ಹಾಗೆ ಹಾಕುವಾಗ ಒಂದು ರೀತಿಯ ಅವಮಾನವಾಗಿ ಅದಕ್ಕೆ ಅಸ್ಪೃಶ್ಯತೆಯ ಆಚರಣೆ ಅಂತಾರೆ ಅಂದ್ರೇನೇ ನನಗೆ ಗೊತ್ತಿರಲಿಲ್ಲ. ಆದರೂ ಒಂದೊಂದು ಸಲ ಆ ತಂಬಿಗೆ ಎತ್ತಿ ದೂರ ಎಸೆದು ಹೊರಕ್ಕೆ ಓಡೋಡಿ ಬರುತ್ತಿದ್ದೆ. ಮಾನಸಿಕವಾಗಿ ಸಮಾಧಾನವಾಗುತ್ತಿತ್ತು".[88] ಸ್ವಾಭಿಮಾನ ದಲಿತರ ಆಸ್ತಿ ಚಿಕ್ಕಮಕ್ಕಳಲ್ಲಿಯೂ ಅದು ಗೋಚರಿಸುತ್ತಿತ್ತು. ಬಿಡುವಿನ ವೇಳೆಯಲ್ಲಿ ಕಟ್ಟಿಗೆ ಮಾರಲು ಹೋಗುತ್ತಿದ್ದರು. "ಮುಂದಿನ ಕ್ಲಾಸ್‌ಗೆ ಹೋಗುವ ಖುಷಿಯಲ್ಲಿ ಆ ಖಂಡಗಗಟ್ಲೇ ಇರುವ ಕಟ್ಟಿಗೆ ಅಡ್ಡದಿಂದ ಅವರ ಮನೆಗೆ ತೆಗೆದುಕೊಂಡು ಹೋಗುತ್ತಿದ್ದೆ". 'ನಾನು ಕೂಲಿ ಮಾಡುತ್ತಿದ್ದೇನೆಂಬ ಕೀಳರಿಮೆ ನನಗೆ ಇರಲಿಲ್ಲ' (ಪುಟ-೮೬) ತಲೆಯ ಮೇಲೆ ಬುಟ್ಟಿಯಲ್ಲಿ ತಗೊಂಡೋಗಿ ಹಾಕಿ ತಲೆ ನೋವಾಗುತ್ತಿತ್ತು. ಕುತ್ತಿಗೆ ನೋವಿನಿಂದ ಅತ್ತ-ಇತ್ತ ಅಲುಗಾಡಿಸಲು ಆಗುತ್ತಿರಲಿಲ್ಲ".[89] ಅವರ ಕಷ್ಟದ ಜೀವನ ಹೆಚ್ಚಾಗಿಯೇ ಇತ್ತು. ಅಣ್ಣ ಸರಕಾರಿ ಕಾಲೇಜಿಗೆ ಸೇರಿ ಹಾಸ್ಟೆಲ್‌ನಲ್ಲಿದ್ದನು. ಮನೆಯಲ್ಲಿರುವವರ ನೆನಪಾಗಿ 'ತಾನು ಊಟ ಮಾಡಿ ಉಳಿದ ಇಪ್ಪತ್ತು ಇಪ್ಪತ್ತೈದು ಚಪಾತಿಯನ್ನು ತನ್ನ ಶರ್ಟ್‌ನಲ್ಲಿ ಬಚ್ಚಿಟ್ಟುಕೊಂಡು ತನ್ನ ಕೋಣೆಗೆ ಬಂದು ಅಲ್ಲಿದ್ದ ಒಂದು ಪೇಪರ್‌ನಲ್ಲಿ ಚೆನ್ನಾಗಿ ಸುತ್ತಿ ಮಹಡಿಯ ಮೇಲಿನಿಂದ ಹಿಂದೆ ಜೋರಾಗಿ ಎಸೆಯುತ್ತಿದ್ದನು. ಅದು ನೇರವಾಗಿ ಹಾಸ್ಟೆಲ್ ಹಿಂದಿದ್ದ ದೊಡ್ಡ ಕಸದ ತಿಪ್ಪೆಯಲ್ಲಿ ಬೀಳುತ್ತಿತ್ತು. ಒಮ್ಮೊಮ್ಮೆ ರಸ್ತೆಯಲ್ಲಿಯೂ ಬೀಳುತ್ತಿತ್ತು".[90] ನಂತರ ಅದನ್ನು ತಂದು ಮನೆಯಲ್ಲಿರುವವರಿಗೆ ಕೊಡುತ್ತಿದ್ದನು.

ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣ ಕಲಿಸುವ ಅವಕಾಶವಿಲ್ಲದಿದ್ದಾಗ 'ಪರಮಪೂಜ್ಯ ದೊಡ್ಡಪ್ಪನವರು ತಮ್ಮ ಸ್ವಂತ ಟಾಂಗಾಗಳನ್ನು ಶೋಷಿತರ ಅಸ್ಪೃಶ್ಯರ ಕೇರಿಗಳಿಗೆ ಕಳುಹಿಸಿ ಶಾಲೆಗೆ ಮುಕ್ತ ಆಮಂತ್ರಣವನ್ನು ನೀಡುತ್ತಿದ್ದರು".[91] ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ವಿಭೂತಿಯನ್ನು ಹಣೆಗೆ ಹಚ್ಚಿ ಕಳುಹಿಸುತ್ತಿದ್ದರು".

'ಓದುವುದರಿಂದ ಈ ಬಡತನ ದೂರ ಓಡಿಹೋಗುತ್ತದೆ. ನೋಡ್ರಿ ಅಂಬೇಡ್ಕರ್ ಹ್ಯಾಂಗ್ ಓದಿದ್ದಾರೆ. ನೀವು ಕಷ್ಟಪಟ್ಟು ಓದಬೇಕು, ಓದುವುದು ಅಂದ್ರ ಹುಲಿಯ ಹಾಲು ಕುಡಿದಂಗ ಹುಲಿಹಂಗೇ ನೀವೆಲ್ಲಾ ವಿದ್ಯಾವಂತರಾದರೆ ಬಡವರ ಬಗ್ಗೆ ಗರ್ಜಿಸಲು ಸಾಧ್ಯವಾಗುತ್ತದೆ'[92] ಎಂದು ಅವರ ತಾಯಿ ಎಲ್ಲರಿಗೂ ಶಿಕ್ಷಣ ಮತ್ತು ಅದರಿಂದುಂಟಾಗುವ ಜ್ಞಾನವನ್ನು ಕುರಿತು ಹೇಳುತ್ತಿದ್ದರು.

ಅಂಬೇಡ್ಕರ್ ಅವರು ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ ಕಾಲೇಜನ್ನು ತೆರೆದಿದ್ದರು 'ಮಹಿಳೆಯೊಬ್ಬಳು ಕಲಿತರೆ ಅದರಿಂದ ಆ ಮನೆ ಊರು ದೇಶಕ್ಕೆ ಒಳಿತಾಗುತ್ತದೆ' ಎಂಬ ಅಂಬೇಡ್ಕರ್ ಅವರ ಮನದಾಳದಂತೆ ಮಾತಂಗಿ ದೀವಟಿಗೆ ಆತ್ಮಕಥನದಲ್ಲಿ ಮಹಿಳೆಯರು ಉನ್ನತ ವಿದ್ಯಾಭ್ಯಾಸ, ಉನ್ನತ ಹುದ್ದೆಯನ್ನು ಅವಲಂಬಿಸಿದ್ದಾರೆ. ಇದೆಲ್ಲವೂ ಸಾಧ್ಯವಾಗಿದ್ದು ಅನಕ್ಷರಸ್ಥ ತಾಯಿಯ ಗಟ್ಟಿತನದಿಂದ. ಅವರು "ಯಾವ ಶಾಲೆಗೂ ಹೋಗದ ನನ್ನವ್ವ ಅಪ್ಪ ಅಕ್ಷರ ಜ್ಞಾನಕ್ಕಾಗಿ ಎಷ್ಟ ಕಷ್ಟ ಪಟ್ಟಿದ್ದಾರೆ. ಆದರೆ ಅವರಿಬ್ಬರು ಜ್ಞಾನದ ನಿಧಿಯೇ ಆಗಿದ್ದಾರೆ"[93] ಎನ್ನುತ್ತಾರೆ. ಅವರ ಆಶಯ ಮತ್ತು ಕನಸನ್ನು ಎಲ್ಲರೂ ಸಾಕಾರಗೊಳಿಸಿದ್ದಾರೆ. ತಂದೆ ತಾಯಿಯ ಶ್ರಮವನ್ನು ಸಾರ್ಥಕಗೊಳಿಸಿ ಅವರಿಗೆ ತೃಪ್ತಿಯ ಬದುಕನ್ನು ಕಲ್ಪಿಸಿದ ಚಿತ್ರಣ ಈ ಮಾತಂಗಿ ದೀವಟಿಗೆ ಆತ್ಮಕಥನ ನೀಡುತ್ತದೆ.

**ಡಾ. ಎಲ್. ಹನುಮಂತಯ್ಯನವರ ಒಂಟಿಕಾಲಿನ ನಡಿಗೆ – ೨೦೧೫**

ಡಾ.ಎಲ್. ಹನುಮಂತಯ್ಯನವರ ಆತ್ಮಕಥೆ ಒಂಟಿಕಾಲಿನ ನಡಿಗೆ. ಈ ಆತ್ಮಕಥೆಯು ವಿಭಿನ್ನವಾದ ಕೃತಿಯಾಗಿದೆ. ಸುಮಾರು ೫೪ ಅಧ್ಯಾಯಗಳಲ್ಲಿ ರಚನೆಯಾಗಿರುವ ಈ ಕೃತಿಯು ದಲಿತರ ಮತ್ತೊಂದು ರೀತಿಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ಹಸಿವು, ಬಡತನದೊಂದಿಗೆ ಸಾಕಿದ ತಂದೆ ತಾಯಿಗಳು ತಮ್ಮ ಕಷ್ಟವನ್ನು ಸಹಿಸಿಕೊಂಡು ಮಗನನ್ನು ಓದಿಸುತ್ತಾರೆ. 'ದಲಿತರಿಗೆ ಶಿಕ್ಷಣ ಕಡ್ಡಾಯವಾಗಬೇಕು. ಎಲ್ಲರು ಕಡ್ಡಾಯವಾಗಿ ಶಿಕ್ಷಣ ಪಡೆದಾಗಲೇ ಸಾಮಾಜಿಕ ಪರಿವರ್ತನೆ, ಸಮಾನತೆ ಸಾಧ್ಯವಾಗುತ್ತದೆ' ಎಂಬ ಅಂಬೇಡ್ಕರ್ ಮಾತುಗಳು ಇವರೆಲ್ಲರ ಮೇಲೂ ಪ್ರಭಾವಿತವಾಗಿತ್ತು. ಅಂಬೇಡ್ಕರ್ ಅವರು ಎಲ್ಲಾ ತಂದೆ ತಾಯಿಗಳನ್ನು ನಿಮ್ಮ ಹಾಗೆ ಮಾಡಬೇಡಿ ಕಷ್ಟಪಟ್ಟು ಅವರನ್ನು ಶಿಕ್ಷಣ ಪಡೆಯುವಂತೆ ಮಾಡಿರಿ' ಎಂದು ಹೇಳುತ್ತಿದ್ದ ಮಾತುಗಳು ಎಲ್ಲಾ ತಂದೆ ತಾಯಿಗಳಿಗೂ ಅನ್ವಯಿಸುತ್ತದೆ. ಅಂತೆಯೇ ಹನುಮಂತಯ್ಯನವರ ತಂದೆ ತಾಯಿ ಅವರನ್ನು ಕಷ್ಟಪಟ್ಟು ಪ್ರೀತಿಯಿಂದ ಸಾಕಿ ಬೆಳೆಸುತ್ತಾರೆ. ಹನುಮಂತಯ್ಯನವರು ಸಹ ತಂದೆ ತಾಯಿಯ ಕಷ್ಟದ ಬದುಕನ್ನು ವ್ಯರ್ಥಗೊಳಿಸಿದೆ ಆಸಕ್ತಿಯಿಂದ ವಿದ್ಯೆ ಕಲಿಯುತ್ತಾರೆ. ಸಾಮಾಜಿಕವಾದ ದಲಿತರ ಕೇರಿ ಆಹಾರಕ್ರಮ, ದಲಿತರ ಜೀವನ ಶೈಲಿ ಎಲ್ಲವೂ ಈ ಆತ್ಮಕಥೆಯಲ್ಲಿದೆ.

ದಲಿತ ಚಳುವಳಿ, ಬಂಡಾಯ ಸಂಘಟನೆ ಹೀಗೆ ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿಕೊಂಡು ದುಡಿಯುತ್ತಿದ್ದಾರೆ. ಮನೆಯ ವಾತಾವರಣದಲ್ಲಿ ಯಾರು ಕಲಿಯದಿದ್ದರೂ ಇವರು ಕಲಿತು ಎಲ್ಲರಿಗೂ ಮಾದರಿಯಾದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ರಾಮೇಶ್ವರ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದರು. ಅವರ ತಾತ ಗೌಡನ ಮನೆಯಲ್ಲಿ ಜೀತಗಾರ. ಆದರೆ ಅವರು ಊರಿನ ತಳವಾರಿಕೆಯನ್ನು ನಡೆಸುತ್ತಿದ್ದರು. ಅವರೇ ಹೇಳುವ ಹಾಗೆ 'ತಳವಾರಿಕೆ ಎಂಬ ಕೆಲಸ ಸಂಬಳ ತರುವ ಉದ್ಯೋಗವಲ್ಲ. ಅದೊಂದು ಬಿಟ್ಟಿ ಚಾಕರಿ"[94]

ಅಂಬೇಡ್ಕರ್ ಅವರು ದಲಿತರ ಸ್ಥಿತಿಯನ್ನು ಭಾರತದಾದ್ಯಂತ ಗುರುತಿಸುತ್ತಾ ಬಿಟ್ಟಿ ಚಾಕರಿ ಮಾಡುತ್ತಿದ್ದರು ಎಂಬುದನ್ನು ಹೇಳುತ್ತಾರೆ. ದಲಿತರ ಸಾಮಾಜಿಕ ಸ್ಥಿತಿಯನ್ನು ಹೇಳುವುದು

ಹೀಗೆ "ಸತ್ತ ಹಸು ಎಮ್ಮೆ ಮುಂತಾದ ಪ್ರಾಣಿಗಳನ್ನು ಎತ್ತಿ ಊರಾಚೆ ಹಾಕುವುದರಿಂದ ಹಿಡಿದು ಊರಲ್ಲಿ ಯಾರಾದರೂ ಸತ್ತರೆ, ಹೆತ್ತರೆ ಸುದ್ದಿ ಮುಟ್ಟಿಸಿ ಬರುವ 'ಕೆಲಸವನ್ನು ಮಾಡುತ್ತಿದ್ದರು. ಬಾಬಾಸಾಹೇಬರು ೧೯೨೭ರ ಹೊತ್ತಿಗೆ ಸಾಮಾಜಿಕ ಹೋರಾಟವನ್ನು ಪ್ರಾರಂಭಿಸುವಾಗ ದಲಿತರನ್ನು ಕುರಿತು ಮೇಲೆ ಹೇಳಿದ ಯಾವ ಕೆಲಸವನ್ನು ಮಾಡಬೇಡಿ ಮೇಲ್‌ವರ್ಗದವರು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಲಿ'. ಸತ್ತ ಪ್ರಾಣಿಗಳನ್ನು ಅವರೇ ಹೊತ್ತೊಯ್ಯಲಿ ನೀವ್ಯಾರು ಆ ಕೆಲಸವನ್ನು ಮಾಡಬೇಡಿ ಎಂಬ ಕರೆಯನ್ನು ಎಚ್ಚರಿಕೆಯನ್ನು ನೀಡುತ್ತಾರೆ.

ತಾತನ ತಳವಾರಿಕೆಯಲ್ಲಿ ತುಂಡು ಜಮೀನನ್ನು ಪಡೆದಿದ್ದರು. ಅದು ಎಲ್ಲಾ ಊರಿನಲ್ಲಿಯೂ ಇದ್ದ ಕ್ರಮವಾಗಿತ್ತು. ಆ ಜಮೀನನ್ನು ಹತ್ತು ಕುಟುಂಬಗಳು ಹಂಚಿಕೊಳ್ಳುತ್ತಿದ್ದವು. "ತಾತನಿಗೆ ಅರ್ಧ ಎಕರೆ 'ಮಾನ್ಯ'ದ ಜಮೀನಿತ್ತು. ಒಂದು ಎಕರೆ ಕಂದಾಯ ಜಮೀನಿತ್ತು. ಕಂದಾಯದ ಜಮೀನೆಂದರೆ ಸರ್ಕಾರಕ್ಕೆ ಕಂದಾಯ ಪಾವತಿ ಮಾಡುವ ಕುಳವಾಡಿ'[95] ಎಂದ ಅರ್ಥ. 'ಸ್ವಾಮಿ ನನಗೆ ಜಮೀನಿಲ್ಲ' ಎಂದು ಕೇಳಿದಾಗ ಊರಿನ ಶ್ಯಾನುಭೋಗರು ಜಮೀನು ಮಂಜೂರು ಮಾಡುವವರು ಮೈಸೂರಿನ ಮಹಾರಾಜರು ಎನ್ನುತ್ತಾರೆ. ಆಗ ಅವರ ತಾತ ಮೈಸೂರಿನವರೆಗೂ ನಡೆದುಕೊಂಡು ಹೋಗಿ ಮಹಾರಾಜರನ್ನು ಕಂಡು ತಮ್ಮ ಬೇಡಿಕೆಯನ್ನು ಈಡೇರಿಸಿಕೊಂಡ ತಾತ ಮತ್ತೆ ಕಾಲ್ನಡಿಗೆಯಲ್ಲಿ ಊರಿಗೆ ನಡೆದು ಬರುತ್ತಾರೆ. ಆದರೆ ಮಹಾರಾಜರು ಭೂಮಿಯನ್ನು ಮಂಜೂರು ಮಾಡಿದರು ಊರಿನ ಶ್ಯಾನುಭೋಗರು ಭೂಮಿ ಕೊಡಲು ಸತಾಯಿಸುತ್ತಿದ್ದರು. ಎಷ್ಟು ದಿನವಾದರೂ ಕೊಡದೆ ಇದ್ದಾಗ ತಾತ ಒಂದು ದಿನ ಅವರ ಮೇಲೆ ಆಕ್ರಮಣ ಮಾಡಲು ಯೋಚಿಸುತ್ತಾರೆ. ಶ್ಯಾನುಭೋಗರು ಒಬ್ಬರೆ ಸಿಕ್ಕಾಗ 'ಲೇ ಶೇಷಗಿರಿ ಎಷ್ಟು ದಿನಾಂತ ನಾನು ಕಾಯೋದು ನನಗೆ ಜಮೀನು ಮಾಡಿಕೊಡ್ತೀಯಾ ಇಲ್ಲ ತಲೆ ಎರಡು ಹೋಳು ಮಾಡಲೋ, ಇಲ್ಲೇ ಮುಗಿಸಿ ಬಿಡ್ತೀನಿ ಎಂದು ರೌದ್ರಾವತಾರ ತಾಳಿದನು.[96] ನಂತರ ಅವರ ಹೆಸರಿಗೆ ಜಮೀನು ದೊರೆಯಿತು.

ಅಂಬೇಡ್ಕರ್ ಅವರು ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿನ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ಕಂಡು ಬೌದ್ಧದಮ್ಮಕ್ಕೆ ಮತಾಂತರವಾಗುತ್ತಾರೆ. ಬೌದ್ಧದಮ್ಮದಲ್ಲಿ ಸಮಾನತೆ, ಸಹೋದರತೆ, ಸ್ವಾತಂತ್ರ್ಯವಿದೆ ಎಂಬುದಾಗಿತ್ತು. ಆದರೆ ಭಾರತದಲ್ಲಿ ಬ್ರಿಟೀಷರ ಆಳ್ವಿಕೆ ಪ್ರಾರಂಭವಾದಾಗ ಅವರ ಮೂಲ ಉದ್ದೇಶ ಕ್ರಿಶ್ಚಿಯನ್ ಧರ್ಮಕ್ಕೆ ಭಾರತೀಯರನ್ನು ಮತಾಂತರಗೊಳಿಸುವುದಾಗಿತ್ತು. ಹನುಮಂತಯ್ಯನವರ ಚಿಕ್ಕಪ್ಪನವರು ಸಹ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿದ್ದರು. 'ಅಸ್ಪೃಶ್ಯತೆಯ ಕೂಪದಿಂದ ಹೊರಗೆ ಬರಬೇಕೆಂದು ಉದ್ದೇಶಪೂರ್ವಕವಾಗಿಯೇ ಮದ್ದೂರಯ್ಯ ಮಾಡಿದ ಪ್ರಯತ್ನ ಪರಿಶಿಷ್ಟ ಜಾತಿಗೆ ಸಿಗುವ ಮೀಸಲಾತಿಯ ಆಮಿಷದಿಂದ ಮೂಲ ಜಾತಿಯಲ್ಲಿಯೇ ಉಳಿಯುವಂತಾಯಿತು.[97] ಗ್ರಾಮೀಣ ಪ್ರದೇಶದ ಜನರು ಬಹುಬೇಗ ಆಮಿಷಗಳಿಗೆ ಬಲಿಯಾಗುತ್ತಿದ್ದರು. ಆದರೆ ಬಾಬಾಸಾಹೇಬರು 'ಹಿಂದೂವಾಗಿ ಹುಟ್ಟಿದ್ದೇನೆ ಹಿಂದೂವಾಗಿ ಸಾಯಲಾರೆ' ಎಂಬ ಹೇಳಿಕೆಯನ್ನು ನೀಡಿದ್ದರು.

ಸಾವಿರದ ಒಂಬೈನೂರ ಅರವತ್ತು-ಎಪ್ಪತ್ತರ ದಶಕಗಳಲ್ಲಿ ನಮ್ಮ ಹಳ್ಳಿಗಳು ಬಡತನದಿಂದ, ಅನಕ್ಷರತೆಯಿಂದ ಬಳಲುತ್ತಿದ್ದ ಪಾಪಕೂಪಗಳಾಗಿದ್ದವು. 'ಊರದೇವರ ಮೆರವಣಿಗೆ ಹೊರಟಿತೆಂದರೆ ಇವರೆಲ್ಲರ ಉಪಸ್ಥಿತಿ ಎದ್ದು ಕಾಣುತ್ತಿತ್ತು. ಒಕ್ಕಲಿಗರು ಮೆರವಣಿಗೆ ದೇವರನ್ನು ಹೆಗಲ ಮೇಲೆ ಹೊತ್ತು ನಡೆಯುತ್ತಿದ್ದರೆ, ಮಡಿವಾಳರು ಪಂಜು ಹಿಡಿದು ಹಿಂದೆ ಸಾಗುತ್ತಿದ್ದರು. ಮಾದಿಗರು ತಮಟೆ ವಾದ್ಯ ನುಡಿಸುತ್ತಾ ಮುಂದೆ ಹೊರಟರೆ, ಜೊತೆಯಲ್ಲಿ ವಾಲಗ ಊದುತ್ತಾ ಕ್ಷೌರಿಕರ ಪುಟ್ಟಸಾಮಯ್ಯನವರು ಬರುತ್ತಿದ್ದರು. ಆ ಊರಿನಲ್ಲಿ ಜಾತಿಗೊಂದು ದೇವರು ಮತ್ತು ದೇವಸ್ಥಾನಗಳಿದ್ದವು.[98] ಪ್ರತಿ ಊರಿನಲ್ಲಿಯೂ ಇಂತದ್ದೆ, ಪರಿಸರವಿತ್ತು. ಭಾರತೀಯ ಮನಸ್ಸು ಇಷ್ಟೊಂದು ಆಧ್ಯಾತ್ಮಿಕವಾಗಿರುವುದರಿಂದಲೇ ಕೆಲವರಿಗೆ ಇದೇ ಬಂಡವಾಳ. ಈ ಭಾವನೆಗಳ ಬಂಡವಾಳವೇ ನಮ್ಮ ವ್ಯಾಪಾರದ ಮೂಲವಾಗಿದೆ. ಇದು ದೇವರ ಮತ್ತು ಮನುಷ್ಯರ ಅವಿನಾಭಾವ ಸಂಬಂಧದ ಪರಿಚಯ ಮಾಡಿಕೊಳ್ಳುತ್ತಲೇ ಈ ಮನಸ್ಥಿತಿಯ ಬಗ್ಗೆ ಆಶ್ಚರ್ಯ ಮತ್ತು ಕುತೂಹಲ ಎರಡು ಉಂಟಾಗುತ್ತದೆ.[99]

ಶಾಲೆಯಲ್ಲಿ ಓದುವಾಗ ಅತ್ಯಂತ ಚುರುಕಾಗಿದ್ದ ಹನುಮಂತಯ್ಯನವರು ಮಾಧ್ಯಮಿಕ ಶಾಲೆಯಲ್ಲಿ ಚೆನ್ನಾಗಿ ಓದುವ ವಿದ್ಯಾರ್ಥಿಯೆಂದೇ ಗುರುತಿಸಿಕೊಂಡಿದ್ದರು. ನೂರಕ್ಕೆ ನೂರು ಅಂಕಗಳನ್ನು ಗಣಿತದಲ್ಲಿ ಪಡೆದು ಏಳನೇ ತರಗತಿ ಪಾಸಾಗಿದ್ದರು. ೧೯೭೦-೭೧ರ ಅವಧಿಗೆ ಹೈಸ್ಕೂಲ್ ಸೇರಿದರು. ೧೯೭೩ರಲ್ಲಿ ಎಸ್.ಎಸ್.ಎಲ್.ಸಿ ಪಾಸು ಮಾಡಿ, ಮುಂದೆ ಓದಲು ಬೆಂಗಳೂರಿಗೆ ಹೋಗಬೇಕಾಗಿತ್ತು" ನನ್ನ ತಂದೆ ತಾಯಿ ಇಬ್ಬರಿಗೂ ಇಷ್ಟವಿಲ್ಲದ ವಿಷಯವಾಗಿತ್ತು. ಅವರು ಅಂದು ಮಾಡಿದ ಧೈರ್ಯ ನನ್ನನ್ನು ಇಲ್ಲಿಯವರೆಗೆ ಕರೆತಂದಿದೆ."[100] ತಮ್ಮ ಕಷ್ಟ ಜೀವನ ತಮ್ಮ ಮಕ್ಕಳಿಗೆ ಬರಬಾರದೆಂದು ಕಷ್ಟವಾದರೂ ಓದಿಸಬೇಕೆಂಬ ಛಲ ಇವರ ತಂದೆ ತಾಯಿಗಿತ್ತು. ಒಬ್ಬನೇ ಮಗನೆಂದು ಅವನನ್ನು ಬಿಟ್ಟು ಓದಿಸುವ ತೀರ್ಮಾನ ಹಾಗೆಯೇ ಇವರು ಓದುವುದನ್ನು ಮುಂದುವರೆಸುವುದು ಮುಖ್ಯವೆನಿಸುತ್ತದೆ. "ನಾನು ಎಸ್.ಎಸ್.ಎಲ್.ಸಿ ಪಾಸು ಮಾಡುವವರೆಗೆ ಅಂಗಿ ಮತ್ತು ಚೆಡ್ಡಿ ನನಗಿತ್ತು. ನಾನೆಂದು ಪ್ಯಾಂಟ್ ಧರಿಸಿದವನಲ್ಲ ಮತ್ತು ಕಾಲಿಗೆ ಚಪ್ಪಲಿಯನ್ನು ಹಾಕಿದವನಲ್ಲ."[101] ಇದು ದಲಿತ ಮಕ್ಕಳ ಸ್ಥಿತಿ ಆದರೆ ಬೆಂಗಳೂರಿನ ಜೀವನ ಅವರಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತು.

ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಪಿಯುಸಿಗೆ ಸೇರಿದರು. ಮಹಾತ್ಮ ಗಾಂಧೀ ಹಾಸ್ಟೆಲ್‌ನಲ್ಲಿ ವಸತಿಯ ಅವಕಾಶವು ದೊರೆಯಿತು. ಆ ಹಾಸ್ಟೆಲಿನ ವಿದ್ಯಾರ್ಥಿ ಚಟುವಟಿಕೆಗಳ ಉದ್ಘಟನಾ ಸಮಾರಂಭಕ್ಕೆ ಆಗಿನ ಸಚಿವರಾಗಿದ್ದ ಬಸವಲಿಂಗಪ್ಪನವರು ಭಾಷಣ ಮಾಡಲು ಬಂದಿದ್ದರು. ಅಲ್ಲಿದ್ದ "ಧರ್ಮ ರಕ್ಷಿಸುವ ಧರ್ಮ ರಕ್ಷಿಪುದು" ಎಂಬ ಘೋಷವಾಕ್ಯವನ್ನು ನೋಡಿ ಬಸವಲಿಂಗಪ್ಪನವರು ದಲಿತರು ಸಾವಿರಾರು ವರ್ಷಗಳಿಂದ ಜೀತಗಾರರಾಗಿದ್ದೇವೆ. ಹೊಲಗದ್ದೆಗಳಲ್ಲಿ ಪ್ರಾಣಿಗಳಂತೆ ದುಡಿದಿದ್ದೇವೆ. ಈ ಶ್ರಮಜೀವಿ ಅಸ್ಪೃಶ್ಯರನ್ನು ಧರ್ಮ ಏಕೆ ಕಾಪಾಡುತ್ತಿಲ್ಲ" ಎಂಬ ಪ್ರಶ್ನೆಯನ್ನು ಎತ್ತಿದರು. ಈ ಮಾತುಗಳನ್ನು ಕೇಳುವಾಗ ಹನುಮಂತಯ್ಯನವರಲ್ಲಿ ಹೊಸ ವಿಚಾರಗಳು ಮೂಡಿಬಂದವು. ಹಿಂದೂ ಧರ್ಮದ ನ್ಯವಸ್ಥೆ, ಜಾತಿ ವ್ಯವಸ್ಥೆ ತಾರತಮ್ಯ ಎಲ್ಲವನ್ನು ಕುರಿತು

ವಿವರಿಸಿದ್ದರು. ಬಸವಲಿಂಗಪ್ಪನವರ ಅಂದಿನ ಮಾತುಗಳು ಹನುಮಂತಯ್ಯನವರಲ್ಲಿ ಬದಲಾವಣೆ ತಂದವು.

ಅಂತಿಮ ಬಿಎಸ್ಸಿಯಲ್ಲಿರುವಾಗ ಭಾರತೀಯ ಸ್ಟೇಟ್ ಬ್ಯಾಂಕ್‌ನ ಪರೀಕ್ಷೆಗೆ ಹಾಜರಾಗಿ ಪಾಸಾಗಿದ್ದರು. ಪದವಿ ಮುಗಿಸಿ ಕೆಲಸಕ್ಕೆ ಸೇರುವುದೆಂದು ತೀರ್ಮಾನಿಸಿ ಬ್ಯಾಂಕ್‌ನವರಿಗೆ ಒಂದು ಪತ್ರ ಬರೆದುಕೊಂಡರು. ಹಾಸ್ಟೆಲ್‌ನಲ್ಲಿದ್ದಾಗ ಬಾಂಸೆಪ್ ಸಂಘಟನೆಯ ಒಂದು ಕಮ್ಮಟ ನಡೆಸಿತು. ಇದು ದಲಿತ ನೌಕರರ ಸಂಘಟನೆ ಇದನ್ನು ನಡೆಸಿದವರು ಕಾನ್ಸಿರಾಮ್ ಅವರು. ೧೯೭೭ರಲ್ಲಿ ನಡೆದ ಈ ಕಮ್ಮಟದಲ್ಲಿ ಅವಕಾಶವನ್ನು ಪಡೆದಿದ್ದರು. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಸದಸ್ಯರು ಆಗಿದ್ದರು.

ಆಗ ಹನುಮಂತಯ್ಯನವರು ಆ ಎಲ್ಲಾ ಸಂಘಟನೆ ಮತ್ತು ಹೋರಾಟಗಳಲ್ಲಿ ಆಸಕ್ತಿ ವಹಿಸಿದ್ದರು. ಆದರೆ ತನ್ನ ಮತ್ತು ಮನೆಯವರಿಗಾಗಿ ಕೆಲಸದ ಅನಿವಾರ್ಯತೆಯೂ ಇತ್ತು. ಸ್ಟೇಟ್ ಬ್ಯಾಂಕ್‌ಗೆ ಸೇರುವ ಮೊದಲು ಒಂದು ಸಾವಿರ ರೂಪಾಯಿ ಕಟ್ಟಬೇಕೆಂದರು. ನನ್ನ ಬಳಿ ನೂರು ರೂಪಾಯಿ ಇಲ್ಲದಿರುವಾಗ ಸಾವಿರ ರೂಪಾಯಿ ಎಲ್ಲಿಂದ ತರುವುದೆಂದು ನನ್ನ ಹಳ್ಳಿಗೆ ಹೋಗಿ ತಂದೆ ತಾಯಿಗೆ ವಿಷಯ ತಿಳಿಸಿದೆ. ಅವರಿಗೆ ಕೆಲಸ ಸಿಕ್ಕಿದ ಸುದ್ದಿ ಸಂತೋಷಕೊಟ್ಟರೂ ಸಾವಿರ ರೂಪಾಯಿ ಕಟ್ಟಬೇಕೆಂಬ ವಿಷಯದಿಂದ ಸಂಕಷ್ಟಕ್ಕೀಡಾದರು". ಆಗ ಮ್ಯಾನೇಜರ್ 'ಒಂದು ತಿಂಗಾಳಾದ್ದರಿಂದ ನಿಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ಪ್ರತಿ ತಿಂಗಳ ಸಂಬಳದಲ್ಲಿ ಇನ್ನೂರೈವತ್ತು ರೂಪಾಯಿ ಕಡಿತಗೊಳಿಸಿಕೊಳ್ಳುವಂತೆ ಅರ್ಜಿಯೊಂದನ್ನು ಬರೆದುಕೊಡಿ'[102] ಎಂದರು. ಇದರಿಂದ ಜೀವ ಬಂದಂತಾಗಿ ಕೆಲಸಕ್ಕೆ ಹಾಜರಾದರು.

ಚಳುವಳಿಗಳ ಸಂಪರ್ಕದಲ್ಲಿ ಬಂದಾಗ ಅಂತಿಮ ಬಿ.ಎಸ್ಸಿ ತರಗತಿಯಲ್ಲಿದ್ದರು. ಆಗಲೇ ಬಂಡಾಯ ಸಾಹಿತ್ಯ ಸಂಘಟನೆ ಪ್ರಾರಂಭವಾಗಿತ್ತು. ಎಸ್.ಎಫ್.ಐ ನಲ್ಲೂ ಪದಾಧಿಕಾರಿಯಾಗಿದ್ದರು. 'ಡಿ.ಎಸ್.ಎಸ್.ನ ತಾತ್ವಿಕತೆ ಯಾವುದೇ ಭದ್ರ ಬುನಾದಿ ಇಲ್ಲವೆಂತಲೂ ಚರ್ಚೆಗಳು ನಡೆಯುತ್ತಿದ್ದವು. ಇದರಲ್ಲಿ ಕಮ್ಮಟಗಳು ನಡೆಯುತ್ತಿದ್ದವು.

"ಸಮಾಜದ ಎಲ್ಲ ಬಡವರು ಕೂಡಿ ಮಾಡುವ ಹೋರಾಟ ಮಾತ್ರ ಯಶಸ್ವಿಯಾಗುತ್ತದೆ. ಅದು ಸುಸಂಘಟಿತ ವ್ಯವಸ್ಥೆ ಹೊಂದಿರುವ ಕಮ್ಯುನಿಸ್ಟರ ಜೊತೆ ಸೇರಿ ಹೋರಾಟ ಮಾಡುವುದು ಉಚಿತವಾದುದೆಂದು ಬಹುಸಂಖ್ಯಾತ ದಲಿತ ಹೋರಾಟಗಾರರು ಭಾವಿಸಿದ್ದರು. ಆದರೆ ಕಮ್ಯುನಿಸ್ಟರು ದಲಿತರು ಒಟ್ಟಿಗೆ ಕೂಡಿ ಮಾಡಿದ ಹೋರಾಟಗಳು ಅಪರೂಪವೆಂದೇ ಹೇಳಬೇಕು. ಅತ್ತ ಕಮ್ಯುನಿಸ್ಟ್ ಪಕ್ಷದಲ್ಲಿ ದಲಿತರ ಸಮಸ್ಯೆಗಳ ಬಗ್ಗೆ ಅನುಕಂಪವಿದ್ದರೂ ದಲಿತ ಸಂಘಟನೆ ಜೊತೆ ಸೇರುವುದಕ್ಕೆ ತಾತ್ವಿಕ ವಿರೋಧ ವ್ಯಕ್ತ ಮಾಡುತ್ತಿದ್ದರು".[103] ತಾತ್ವಿಕ ಭಿನ್ನಾಭಿಪ್ರಾಯಗಳು ಇದ್ದ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಹೆಚ್ಚು ಸಕ್ರಿಯನಾದೆ". ಆದರೆ ದಲಿತ ಸಂಘರ್ಷ ಸಮಿತಿಯ ಹೋರಾಟವನ್ನು ಬಂಡಾಯ ಸಾಹಿತ್ಯ ಸಂಘಟನೆಯ ಜೊತೆಯಲ್ಲಿ ಹೇಳುವಂತಿಲ್ಲ. ವಿಚಾರಗಳು ಬೇರೆಯಾಗಿದ್ದವು. ದಲಿತರಲ್ಲಿ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬಂತೆ

ವಿಭಾಗಿಸಿದ ಹಾಗೇ ಆಗುತ್ತದೆ. ಆ ಸಂದರ್ಭದಲ್ಲಿದ್ದ ರೈತ ಸಂಘಟನೆ ಮತ್ತಿತರ ಸಂಘಟನೆಗಳು ಬೇರೆ ಬೇರೆ ಧ್ಯೇಯವನ್ನು ಒಳಗೊಂಡಿದ್ದವು. ದಲಿತಪರವಾದ ಹೋರಾಟಗಳೇ ಮುಖ್ಯವಾಗಿದ್ದವು. ಏಕೆಂದರೆ ಎಲ್ಲರಿಗಿಂತ ಹೆಚ್ಚು ಶೋಷಿತರು ದಲಿತರೇ ಆಗಿದ್ದರು. ಬಂಡಾಯ ಸಂಘಟನೆ ಅಥವಾ ರೈತ ಸಂಘಟನೆಗಿಂತ ದಲಿತ ಸಂಘರ್ಷ ಸಮಿತಿಯ ಹೋರಾಟವೇ ಮುಖ್ಯ. ಏಕೆಂದರೆ ಅವರ ಮೇಲೆ ಹೆಚ್ಚು ದೌರ್ಜನ್ಯ ನಡೆಯುತ್ತಿದ್ದು ಅವರಿಗೆ ಯಾವ ರಕ್ಷಣೆಯೆಂಬುದಿರಲಿಲ್ಲ.

ಇವರ ಸಾಹಿತ್ಯದಲ್ಲಿ ದಲಿತ ಬಂಡಾಯ ಸಾಹಿತ್ಯದ ತಾತ್ವಿಕ ಕಾರಣಗಳಿದ್ದವು ಅವುಗಳನ್ನು ಕಾವ್ಯದಲ್ಲಿ ಮೂಡಿಸಿದ್ದರು. ಅವರು 'ಜನಸಂಖ್ಯೆ ಆಧಾರಿತ ಒಳಮೀಸಲಾತಿಯನ್ನು ದಲಿತ ಸಮುದಾಯಗಳಲ್ಲಿ ಜಾರಿಗೆ ತರಬೇಕು. ಈ ಒಳಮೀಸಲಾತಿ ನ್ಯಾಯ ಸಮ್ಮತವಾದುದ್ದು.[104] ಅದಕ್ಕೆಂದು ಮಾದಿಗ ಜನಾಂಗದ ಒಕ್ಕೂಟದ ಸಂಘಟನೆ ಪ್ರಾರಂಭವಾಯಿತು.

ಅಂಬೇಡ್ಕರ್ ಅವರ ರಾಜಕೀಯ ಅಧಿಕಾರದ ಮಹತ್ವವನ್ನು ಇಲ್ಲಿ ಅಳವಡಿಸಿದರು. 'ತಳಸಮುದಾಯದವರಿಗೆ ಅವರವರ ನಾಯಕನನ್ನು ಆಯ್ಕೆ ಮಾಡಿಕೊಳ್ಳುವ ಹಾಗೂ ಅವರಿಂದ ಜನಾಂಗದ ಅಭಿವೃದ್ಧಿ ಸಾಧ್ಯ ಎಂಬುದು ಅಂಬೇಡ್ಕರ್ ಅವರ ಮಹದಾಸೆಯಾಗಿತ್ತು.

ಹೊಸ ತಲೆಮಾರಿನ ಚಿಂತನೆಗಳು ಸಾಹಿತ್ಯದಲ್ಲೂ ಬರಬೇಕೆಂದು ಬಯಸಿದ್ದ ಯುವ ಚಿಂತಕರ ಗುಂಪು ಪರಿಷತ್ತಿನ ತಟಸ್ಥ ದೋರಣೆಗೆ ವಿರುದ್ಧವಾಗಿ ಕ್ರಾಂತಿಕಾರಕ, ಸುಧಾರಣಾವಾದಿ ಚಿಂತನೆಗಳನ್ನು ಬಿತ್ತುವ, ಬೆಳೆಸುವ ಸಾಹಿತ್ಯ ಸಂಘಟನೆಯನ್ನು ಕಟ್ಟಬೇಕು. ಈ ಸಂಘಟನೆ ಹೊಸ ತಲೆಮಾರಿನ ಚಿಂತನೆಗಳಿಗೆ ವೇದಿಕೆಯಾಗಬೇಕು".[105] ೧೯೭೯ರಲ್ಲಿ ಮೊದಲ ಬಂಡಾಯ ಸಮ್ಮೇಳನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪ್ರಗತಿಪರ ಚಿಂತನೆಯುಳ್ಳ ಲೇಖಕರು, ಎಡಪಂಥೀಯರು, ದಲಿತರು, ವಿದ್ಯಾವಂತರು ಎಲ್ಲರೂ ಸೇರಿದ್ದರು. ಆಳುವ ವರ್ಗಗಳ ಜನವಿರೋಧಿ ನಿಲುವುಗಳನ್ನು ಖಂಡಿಸುತ್ತಾ ಜನಪರ ಆಡಳಿತಕ್ಕಾಗಿ ಒತ್ತಾಯಿಸುತ್ತಿದ್ದರು. ಯಾವುದೇ ಸಂಘಟನೆ ಪ್ರತಿಭಟನೆ, ಧರಣಿ, ಮುಷ್ಕರಗಳನ್ನು ನಡೆಸಿದರೆ ಎಲ್ಲರೂ ಭಾಗವಹಿಸುತ್ತಿದ್ದೆವು".[106] ಎಲ್ಲರಲ್ಲಿಯೂ ಒಂದೇ ರೀತಿಯ ಆಲೋಚನೆ ಇದ್ದು ಅವರೆಲ್ಲರೂ ಒಂದೇ ರೀತಿಯಲ್ಲಿ ವರ್ತಿಸುತ್ತಿದ್ದು, ಎಲ್ಲರೂ ವಿಚಾರವಂತರಾಗಿದ್ದರು. 'ಕರ್ನಾಟಕದಲ್ಲಿ ನಡೆದ ದಲಿತ ಚಳುವಳಿಗೆ ಎದುರಾದ ಬಹುದೊಡ್ಡ ಸವಾಲೆಂದರೆ ಮೀಸಲಾತಿ ವರ್ಗೀಕರಣ ಮತ್ತು ಅಧಿಕಾರ ರಾಜಕಾರಣ. ಅಧಿಕಾರ ರಾಜಕಾರಣ ಮಾಡಬೇಕೊ ಬೇಡವೋ ಎಂಬ ಚರ್ಚೆ ದಲಿತ ಸಂಘಟನೆಯಲ್ಲಿ ಬಿರುಕು ಸಾಧ್ಯ ಮಾಡಿತು.[107] ಬಹು ಜನ ಸಮಾಜ ಪಕ್ಷದ ಅಂಗ ಸಂಸ್ಥೆಯಾಗಿದ್ದ ದಲಿತ ಸಂಘರ್ಷ ಸಮಿತಿಯಲ್ಲಿದ್ದ ನಾಯಕತ್ವ ಈ ಮೀಸಲಾತಿ ವರ್ಗೀಕರಣ ಚಳುವಳಿಯನ್ನು ಕೈಗೆತ್ತಿಕೊಂಡರು."[108] ಇಂದಿಗೂ ಅವರ ಅಗತ್ಯವಿದೆ. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಪ್ರಮುಖ ಪಾತ್ರಧಾರಿಯಾಗಿ ಕಾರ್ಯನಿರ್ವಹಿಸಿದರು. ಈ ಸಂಘಟನೆ ಬಲಗೊಳ್ಳುವಲ್ಲಿ ಹಾಗೂ ಮುಂದುವರಿಯುವಲ್ಲಿ ಕಾರ್ಯ ಪ್ರವೃತ್ತರಾದರು. ಇಂದಿಗೂ ಸಾಹಿತ್ಯ, ಸಂಘಟನೆ, ಚಳುವಳಿ, ರಾಜಕಾರಣ ಹೀಗೆ ಎಲ್ಲ ಕಾರ್ಯಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

**ಅಡಿ ಟಿಪ್ಪಣಿ :**

1. ಮಹಾರಾಷ್ಟ್ರದಲ್ಲಿ ದಲಿತ ಚಳುವಳಿಗಳು, ಕೆ.ಎಸ್, ಹೆಗಡೆ,. ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, 2010, ಪುಟ 95.
2. ಗೌರ್ಮೆಂಟ್ ಬ್ರಾಹ್ಮಣ, ಪ್ರೊ. ಅರವಿಂದ ಮಾಲಗತ್ತಿ, ಚೇತನ ಬುಕ್‌ಹೌಸ್, ಮೈಸೂರು, 2014, ಪುಟ 2
3. ಅದೇ ಪುಟ 9
4. ಅದೇ ಪುಟ 39
5. ಅದೇ ಪುಟ 57
6. ಅದೇ ಪುಟ 108.
7. ಗೌರ್ಮೆಂಟ್ ಬ್ರಾಹ್ಮಣ (ಓದುವ ಮುನ್ನ ಓದುಗರೊಂದಿಗೆ)
8. ಊರುಕೇರಿ ಭಾಗ 1, ಡಾ. ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ, ಎರಡನೇ ಮುದ್ರಣ, 1997, ಪುಟ 10.
9. ಅದೇ, ಪುಟ 18
10. ಅದೇ, ಪುಟ 18
11. ಅದೇ, ಪುಟ 37–38
12. ಅದೇ, ಪುಟ 46–47
13. ಅದೇ, ಪುಟ 47
14. ಅದೇ, ಪುಟ 61
15. ಅದೇ, ಪುಟ 68
16. ಅದೇ, ಪುಟ 70
17. ಅದೇ, ಪುಟ 70
18. ಅದೇ, ಪುಟ 98
19. ಅದೇ, ಪುಟ 100
20. ಅದೇ, ಪುಟ 106
21. ಊರುಕೇರಿ ಭಾಗ 2, ಡಾ. ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ, 2006, ಪುಟ 14
22. ಅದೇ, ಪುಟ 126
23. ಅದೇ, ಪುಟ 132
24. ಅದೇ, ಪುಟ 142
25. ಅದೇ, ಪುಟ 271
26. ಊರುಕೇರಿ ಭಾಗ 3, ಡಾ. ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ, 2018, ಪುಟ 9–10
27. ಅದೇ, ಪುಟ 11
28. ಅದೇ, ಪುಟ 35
29. ಅದೇ, ಪುಟ 49
30. ಅದೇ, ಪುಟ 71
31. ಅದೇ, ಪುಟ 101
32. ಅದೇ, ಪುಟ 104
33. ಮಣೆಗಾರ, ತುಂಬಾಡಿ ರಾಮಯ್ಯ, ತುಂಬಾಡಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ತುಮಕೂರು, 2014, ಪುಟ 5
34. ಅದೇ, ಪುಟ 7
35. ಅದೇ, ಪುಟ 11

36. ಅದೇ, ಪುಟ 15
37. ಅದೇ, ಪುಟ 18
38. ಅದೇ, ಪುಟ 20
39. ಅದೇ, ಪುಟ 21
40. ಅದೇ, ಪುಟ 29
41. ಅದೇ, ಪುಟ 41
42. ಅದೇ, ಪುಟ 56
43. ಅದೇ, ಪುಟ 77
44. ಅದೇ, ಪುಟ 82
45. ಅದೇ, ಪುಟ 82
46. ಅದೇ, ಪುಟ 98
47. ಮುತ್ತಿನ ಜೋಳ, ತುಂಬಾಡಿ ರಾಮಯ್ಯ, ಬೋಧಿಶ್ರೀ ಪ್ರಕಾಶನ, 2007, ಪುಟ 25
48. ಮನವಿಲ್ಲದವರ ಮಧ್ಯೆ, ಕೆ. ಗೋವಿಂದರಾಜು, ಕಿಟಕಿ ಪ್ರಕಾಶನ, ಮೈಸೂರು, 2000. ಪುಟ (ಮೊದಲ ಮಾತುವಿನಿಂದ)
49. ಅದೇ, ಪುಟ 79–80
50. ಅದೇ, ಪುಟ 107
51. ಅದೇ, ಪುಟ 108
52. ಅದೇ, ಪುಟ 115
53. ಅದೇ, ಪುಟ 117
54. ಅದೇ, ಪುಟ 135
55. ಅದೇ, ಪುಟ 135
56. ಅದೇ, ಪುಟ 150
57. ಈಗೇನ್ ಮಾಡೀರಿ? ದು. ಸರಸ್ವತಿ, ಮಾನಸ, ಬೆಂಗಳೂರು, 2001 (ಮೊದಲ ಮಾತು)
58. ಅದೇ, (ಮೊದಲ ಮಾತು)
59. ಅದೇ, ಪುಟ 10
60. ಅದೇ, ಪುಟ 13
61. ಅದೇ, ಪುಟ 19
62. ಅದೇ, ಪುಟ 19
63. ಅದೇ, ಪುಟ 38
64. ಅದೇ, ಪುಟ 42
65. ಅದೇ, ಪುಟ 57
66. ಸಂಭೋಳಿ, ಲಕ್ಷ್ಮಣ್, ಆನಂದಕಂದ ಗ್ರಂಥಮಾಲೆ, 2003, ಪುಟ 3
67. ಅದೇ, ಪುಟ 5
68. ಅದೇ, ಪುಟ 7
69. ಅದೇ, ಪುಟ 64
70. ಅದೇ, ಪುಟ 65
71. ಅದೇ, ಪುಟ 71
72. ಅದೇ, ಪುಟ 74
73. ಅದೇ, ಪುಟ 74
74. ಅದೇ. ಪುಟ 85

75. ಅದೇ, ಪುಟ 89
76. ಅದೇ, ಪುಟ 100
77. ಅದೇ, ಪುಟ 105
78. ಅದೇ, ಪುಟ 106
79. ಮಾತಂಗಿ ದೀವಟಿಗೆ, ಸಮತಾ ದೇಶಮಾನೆ, ಅನ್ನಪೂರ್ಣ ಪಬ್ಲಿಕೇಷನ್ಸ್, 2015, ಪುಟ 1
80. ಅದೇ, ಪುಟ 6
81. ಅದೇ, ಪುಟ 23
82. ಅದೇ, ಪುಟ 50
83. ಅದೇ, ಪುಟ 57
84. ಅದೇ, ಪುಟ 57
85. ಅದೇ, ಪುಟ 69
86. ಅದೇ, ಪುಟ 79
87. ಅದೇ, ಪುಟ 80
88. ಅದೇ, ಪುಟ 86
89. ಅದೇ, ಪುಟ 87
90. ಅದೇ, ಪುಟ 90
91. ಅದೇ, ಪುಟ 98
92. ಅದೇ, ಪುಟ 163
93. ಅದೇ, ಪುಟ 247
94. ಒಂಟಿಕಾಲಿನ ನಡಿಗೆ, ಡಾ. ಎಲ್. ಹನುಮಂತಯ್ಯ, ಚಾರುಮತಿ ಪ್ರಕಾಶನ, 2015, ಪುಟ 1
95. ಅದೇ, ಪುಟ 5
96. ಅದೇ, ಪುಟ 12
97. ಅದೇ, 35
98. ಅದೇ, 50
99. ಅದೇ, 62
100. ಅದೇ, ಪುಟ 83
101. ಅದೇ, ಪುಟ 84
102. ಅದೇ, ಪುಟ 111
103. ಅದೇ, ಪುಟ 115
104. ಅದೇ, ಪುಟ 214
105. ಅದೇ, ಪುಟ 226
106. ಅದೇ, ಪುಟ 228
107. ಅದೇ, ಪುಟ 237
108. ಅದೇ, ಪುಟ 237

ಅಧ್ಯಾಯ – ೪

# ಆತ್ಮಕಥೆಗಳಲ್ಲಿ ದಲಿತ ಸಂವೇದನೆ

ಕನ್ನಡದ ದಲಿತ ಆತ್ಮಕಥೆಗಳಲ್ಲಿ ಒಂದು ಸಮುದಾಯದ ಬದುಕನ್ನು ಪ್ರಾಮಾಣಿಕವಾಗಿ ಚಿತ್ರಿಸಿರುವುದನ್ನು ಕಾಣಬಹುದು, ಇಲ್ಲಿನ ಬಹಳಷ್ಟು ಆತ್ಮಕಥೆಗಳಲ್ಲಿ ದಲಿತ ಸಂವೇದನೆಗಳೇ ತುಂಬಿಕೊಂಡಿವೆ. ತಮ್ಮ ಬದುಕಿನಲ್ಲಿ ಎದುರಿಸಿದ ನೋವು ನಲಿವು ಹಾಗೂ ಸಾಧನೆಯನ್ನು ಮೆಚ್ಚಬೇಕಾದ ಬಗೆ: ಆತ್ಮ ಪ್ರತಿಷ್ಠೆಯ ಕೌಟುಂಬಿಕ ಹಿನ್ನೆಲೆಯ ಬದುಕನ್ನು ನಿವೇದಿಸುವುದು; ತಾನು ಪ್ರತಿಷ್ಠಿತ ವ್ಯಕ್ತಿಗಳೊಂದಿಗೆ ಹಾಗೂ ಅವರ ಸ್ಥಾನದಲ್ಲಿದ್ದು ಬದುಕುವ ರೀತಿಯ ನಿರ್ವಚನ, ಬದುಕಿಗೆ ಗೌರವ ತರಬಲ್ಲ ಪ್ರಸಂಗಗಳನ್ನು ಮಾತ್ರ ಹೇಳಿಕೊಳ್ಳುವುದು; ಬದುಕಿನ ದಾಖಲೀಕರಣದ ಪ್ರತೀಕವಾಗಿ ಅಭಿವ್ಯಕ್ತಿಸುವುದು; ಖಾಸಗಿ ಬದುಕಿನ ನಿರೂಪಣೆಯೇ ಆತ್ಮಕಥನವೆಂಬ ಗ್ರಹಿಕೆ ಇರುವುದು; ಆತ್ಮತೃಪ್ತಿಗಾಗಿ ಆತ್ಮಕಥನದ ಬರಹ, ಬದುಕಿನ ಸಾರ್ಥಕತೆಯ ಕುರುಹಾಗಿ ದಾಖಲೆ; ಆಂಗ್ಲ ವಿದ್ಯಾಭ್ಯಾಸದ ಪರಿಣಾಮ, ಬಂಧುಮಿತ್ರರು, ಗುರುಹಿರಿಯರು ಬೀರಿದ ಪ್ರಭಾವ, ತನಗೆ ಗೊತ್ತಾದುದನ್ನು ಬೇರೆಯವರಿಗೆ ತಿಳಿಸಬೇಕೆಂಬ ಹಂಬಲ ಇಂಥವು ಪ್ರಧಾನವಾಗಿವೆ. ಅಪರೂಪಕ್ಕೆ ಸಾಂದಭಿಕವಾಗಿ ಸಮಾಜದ ಸಣ್ಣತನಗಲ ಬಗ್ಗೆ ನಿರೂಪಿಸಿ ತಿದ್ದುಪಡಿಸಬೇಕೆಂದು ಸಾರುವುದು. ದಿನದ ಚಟುವಟಿಕೆಗಳನ್ನು ದಾಖಲಿಸುವುದು ಅಥವಾ ಬಾಲ್ಯದಿಂದ ವೃದ್ಧಾಪ್ಯದವರೆಗಿನ ಅನುಭವಗಳನ್ನು ಅನುಕ್ರಮವಾಗಿ ಹೇಳುವುದು"[1] ಆತ್ಮಕಥೆಗಳ ಸಂವೇದನೆಯಾಗಿದೆ. ಸಮಾಜದ ಜನರಲ್ಲಿನ ಸಂಸ್ಕೃತಿ ಅಕ್ಷರವನ್ನು ಕಲಿಸುವ ಆಲೋಚನೆಗೆ ಒಳಗಾಗಿ ಸಮಸಮಾಜವನ್ನು ಕಟ್ಟುವ ವಿಚಾರಗಳನ್ನು ಓರೆಗೆ ಹಚ್ಚುವ ಕಾರ್ಯಕ್ಕೆ ತೊಡಗಿತು.

"ದಲಿತ ಆತ್ಮಕಥೆಗಳು ಅವಮಾನ ಮತ್ತು ಸ್ವಾಭಿಮಾನದ ಸ್ಮಾರಕಗಳು. ಇವೇ ಆತ್ಮಕಥೆಗಳ ಅಂತರಾತ್ಮದಿಂದ ಎದ್ದು ಬಂದಿರುವುದು ಕಂಡು ಬರುತ್ತದೆ. ಇವುಗಳ ಹಿಂದಿರುವ ಮೂಲಭೂತವಾದ ಆಶಯವೇ ಈ ಅಸಮಾನತೆಯ ಸಮಾಜವನ್ನು ಸಮಾನತೆಯೆಡೆಗೆ ಕರೆದೊಯ್ಯಬೇಕು ಎನ್ನುವುದಾಗಿದೆ."[2] ಆತ್ಮಕಥೆಯ ಪ್ರಕಾರವು ಹುಟ್ಟಿಕೊಂಡಿರುವ ಕಾರಣವೇ ಸಮಾಜದ ಔನ್ನತ್ಯಕ್ಕಾಗಿ ಮತ್ತು ಎಲ್ಲರ ಹಿತಾಸಕ್ತಿಗಾಗಿ ಎಂಬುದನ್ನು ಮರೆಯಬಾರದು. ದಲಿತರು ಅನುಭವಿಸಿದ ಅಸಮಾನತೆಯ ದಳ್ಳುರಿಯನ್ನು ಆರಿಸಿ ಅದರಲ್ಲೊಂದು ಭವ್ಯವಾದ ಅನುಭೂತಿಯನ್ನು ನೀಡುವ ಅಂಶಗಳೇ ಮುಖ್ಯವಾಗಿವೆ. ಆತ್ಮಕಥೆಗಳಲ್ಲಿ ಸಂವೇದನೆಯೇ ವಿಶಿಷ್ಟವಾಗಿದ್ದು ತಮ್ಮ ಜಾತಿಯಿಂದಾಗಿಯೇ ಗುರುತಿಸಿಕೊಳ್ಳದಿರುವಂಥ ವಿಶಿಷ್ಟ ಅನುಭವವನ್ನು ಮೈಗೂಡಿಸಿಕೊಂಡಿವೆ.

ದಲಿತ ಪ್ರಜ್ಞೆ ಪ್ರಜ್ಞಾ ಪೂರ್ವಕವಾದದ್ದು. ಇದು ಸಾಮಾಜಿಕವಾಗಿ ಎಚ್ಚರಗೊಳ್ಳುವುದಕ್ಕೆ ಪ್ರಾರಂಭವಾದದ್ದು ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರ ದಲಿತಪರ ಸಂವೇದನೆಯಿಂದ. ಅಂಬೇಡ್ಕರ್ ಅವರ ಚಿಂತನೆಯ ಬರಹಗಳು ಹೊಸದೊಂದು ಸಂವೇದನೆಗೆ ನಾಂದಿಯಾಯಿತು. ಅಲ್ಲಿಯವರೆಗೂ ಸುಮ್ಮನಿದ್ದ ಜನತೆ ಕ್ರಾಂತಿಯ ರೂಪವನ್ನು ಪಡೆದುಕೊಂಡರು. ಮೊದಲ ತಲೆಮಾರಿನ ಅಕ್ಷರವಂತರಲ್ಲಿ ಸಮಾಜ ಸುಧಾರಕರು, ಪರಿವರ್ತನಕಾರರು ರೂಪಿಸಿದ ಶೈಕ್ಷಣಿಕ ಚಳುವಳಿ, ಸಾಮಾಜಿಕ ಅಭಿವೃದ್ಧಿ ಚಿಂತನೆ, ಮೀಸಲಾತಿಯ ಅವಕಾಶ, ಮೌಢ್ಯತೆಯನ್ನು ನಿವಾರಿಸಲು ನಡೆಸಿದ ಹೋರಾಟ, ದಲಿತರ ಶಿಕ್ಷಣಕ್ಕಾಗಿ ಶಾಲೆಗಳನ್ನು ತೆರೆದು ವಿದ್ಯೆಯನ್ನು ಕಲಿಸಿದವರ ಚಿಂತನೆಗಳು, ಜಾತಿ ಪದ್ಧತಿ, ಅಸ್ಪೃಶ್ಯತೆಯನ್ನು ಹೋಗಲಾಡಿಸಲು ದುಡಿದರು. ಮಹಿಳೆಯರ ಶಿಕ್ಷಣ, ವಿಧವಾ ವಿವಾಹವನ್ನು ಪ್ರೋತ್ಸಾಹಿಸಿ ಶಾಲೆಗಳನ್ನು ತೆರೆದು ಕಡ್ಡಾಯ ಶಿಕ್ಷಣವನ್ನು ಸಮಾನತೆಯ ಶಿಕ್ಷಣವನ್ನು ನೀಡಿದರು. ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಿ ಹೊಸದೊಂದು ಪದ್ಧತಿಗೆ ನಾಂದಿ ಹಾಡಿದರು. ಹೀಗೆ ಹಲವು ರೀತಿಯ ಕಾಳಜಿಯನ್ನು ಹೊಂದಿದ್ದ, ಬದಲಾವಣೆಗಾಗಿ ಶ್ರಮಿಸಿದವರು ಪ್ರಮುಖವಾಗಿದ್ದರು. ಇವರು ಬುದ್ಧ ಭಗವಾನ್ ಮತ್ತು ಬಸವಣ್ಣನವರ ಸಮಾನತೆ ಮತ್ತು ಸ್ವಾತಂತ್ರ್ಯದ ಚಿಂತನೆಯೊಂದಿಗೆ ಮುಂದುವರೆದು ಅಸಮಾನತೆಯನ್ನು ತೊರೆಯುವ ಕ್ರಾಂತಿಯನ್ನು ರೂಢಿಸಿದರು. ಸಮಾನತೆಯ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಹೋರಾಟದ ಮೂಲಕ ಹುಟ್ಟು ಹಾಕಿದ ಮಹಾತ್ಮ ಜ್ಯೋತಿ ಬಾ ಫುಲೆ ಮತ್ತು ಮಾತೆ ಸಾವಿತ್ರಿ ಬಾಫುಲೆ ಅವರು ಮಾಡಿದ ಶಿಕ್ಷಣದ ಅರಿವು ಮೊದಲ ತಲೆಮಾರಿನಲ್ಲಿದ್ದವರನ್ನು ಬದಲಾಯಿಸಿದವು. ದಲಿತ ಸಂವೇದನೆಯನ್ನು ಜಾಗೃತಗೊಳಿಸಿದವರಲ್ಲಿ ಸಯ್ಯಾಜಿರಾವ್ ಗಾಯಕ್‌ವಾಡ್, ಸಮಾನತೆಯ ಹರಿಕಾರರಾದ ಮೀಸಲಾತಿಯನ್ನು ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದ ಛತ್ರಪತಿ ಶಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಮುಖರಾದರೆ, ದಲಿತರ ಪರವಾದ ಶೈಕ್ಷಣಿಕ, ಸ್ವಾಭಿಮಾನದ ಹೋರಾಟಗಳನ್ನು ಕಟ್ಟಿದವರು ಕೇರಳದ ಮೊದಲ ದಲಿತ ಹೋರಾಟಗಾರರಾದ ಅಯ್ಯನ್‌ಕಾಳಿ, ತಮಿಳುನಾಡಿನ ಅಯೋತಿದಾಸ್, ಪೆರಿಯಾರ್ ರಾಮಸ್ವಾಮಿ ನಾಯ್ಕರ್. ಕರ್ನಾಟಕದಲ್ಲಿ ಕ್ರಾಂತಿಯ ಸಂವೇದನೆಯನ್ನು ಹುಟ್ಟು ಹಾಕಿದವರಲ್ಲಿ ದೇವರಾಯ ಇಂಗಳೆ, ಬಿ.ಶ್ಯಾಮಸುಂದರ್, ಡಿ.ಗೋವಿಂದದಾಸ್, ಕುದ್ಮಾಲ್ ರಂಗರಾವ್, ಆರ್. ಗೋಪಾಲಸ್ವಾಮಿ ಅಯ್ಯರ್, ಕಾಕಾ ಕಾರಖಾನೀಸ್, ಮುಂತಾದವರ ಹೋರಾಟದ ಚಿಂತನೆಗಳು ದಲಿತರಲ್ಲಿನ ಪ್ರಜ್ಞೆಯನ್ನು ಜಾಗೃತಗೊಳಿಸಿದುವು. ದಲಿತಸಾಹಿತ್ಯ ಮತ್ತು ಚಳುವಳಿ ಒಟ್ಟಿಗೆ ಹುಟ್ಟಿಕೊಂಡವು.

ದಲಿತ ಆತ್ಮಕಥೆಗಳು ಮರಾಠಿ ಸಾಹಿತ್ಯದಲ್ಲಿ ಹೆಚ್ಚು ಪ್ರಭಾವಿತರಾಗಿ ರಚನೆಯಾದರೂ ಅವರಲ್ಲಿ ಕಂಡು ಬಂದದ್ದು ದಲಿತ ಸಾಹಿತ್ಯ ಚಳುವಳಿಯ ಅಂಶಗಳೇ. ದಲಿತ ಚಳುವಳಿ ಮತ್ತು ಹೋರಾಟಗಳಲ್ಲಿ ಇದ್ದವರು ದಲಿತ ಸಾಹಿತಿಗಳೇ ಆಗಿದ್ದರು. ಕರ್ನಾಟಕದ ಚಳುವಳಿಯು ದಲಿತ ಆತ್ಮಕಥೆಗಳ ರಚನೆಗೆ ಮೂಲ ಪ್ರೇರಣೆಯಾಗಿ ಅದರಲ್ಲಿನ ದಲಿತ ಸಂವೇದನೆ ಎಲ್ಲಾ ಪ್ರಕಾರಗಳು ರಚನೆಯಾದವು. ಕನ್ನಡ ದಲಿತ ಆತ್ಮಕಥೆಗಳಲ್ಲಿ ಪ್ರಮುಖವಾಗಿರುವುದು ದಲಿತರು ಅನುಭವಿಸಿದ

ಜಾತೀಯತೆ, ಅಸ್ಪೃಶ್ಯತೆ ವರ್ಣವರ್ಗಗಳ ತಾರತಮ್ಯ, ನೋವು ಹಿಂಸೆ ಅವಮಾನಗಳೇ ಆಗಿವೆ. ಹಸಿವು ಎಲ್ಲಾ ಕಡೆಯು ಇದ್ದ ಪ್ರಮುಖವಾದ ಅಂಶವಾಗಿದೆ. ಉತ್ತಮ ಜಾತಿಯವರ ಮದುವೆಗೆ ಹೋಗುವ ಮುನ್ನ ತಲೆಗೆ ತುಂಬ ಎಣ್ಣೆಯನ್ನು ಹಚ್ಚಿಕೊಳ್ಳಲಾಗುತ್ತಿತ್ತು. ಯಾಕೆಂದರೆ ಬಣ್ಣದಲ್ಲಿ ಕೈ ಅದ್ದಿದಾಗ ಮತ್ತೊಂದು ಪಾಳಿಗಾಗಿ ಆ ಅದ್ದಿದ ಕೈ ತಟ್ಟನೇ ಎಣ್ಣೆಗೆ ಒರೆಸಿಕೊಂಡರೆ ಬಣ್ಣ ಹೇಳ ಹೆಸರಿಲ್ಲದೆ ಹೋಗುತ್ತಿತ್ತು. ಹಸಿವನ್ನು ನೀಗಿಸಿಕೊಳ್ಳುವ ಹಾಗೂ ಅನ್ನವನ್ನು ಕಾಣದ ದೈನ್ಯತೆಯಿತ್ತು. ಹಾಗೆಯೇ ಭಾರತೀಯ ಸಂಸ್ಕೃತಿಯಲ್ಲಿ 'ಹಸಿದವರಿಗೆ ಅನ್ನ, ಹೊಟ್ಟೆತುಂಬ ಅನ್ನ ಹಾಕುವುದು' ಮುಖ್ಯವಾಗಿತ್ತು. ಆದರೆ ಇಲ್ಲಿ ಎಲ್ಲರೂ ತಿಂದುಂಡ ನಂತರ ದಲಿತರಾದವರಿಗೆ ಊಟ ಕೊಡುತ್ತಿದ್ದರು. ಆಗಲೂ ಅವರನ್ನು ಕಳ್ಳರಂತೆ ಕಾಣುವ ಅಲ್ಲಿಯೂ ಅವಮಾನಿಸುವ ಸಂದರ್ಭಗಳಿದ್ದವು. 'ಹೊಟ್ಟೆ ತುಂಬಿದವರಿಗೆ ಅನ್ನ ಹಾಕುವ ಸಂಸ್ಕೃತಿ' ನಮ್ಮಲ್ಲಿ ಇಂದಿಗೆ ಗೋಚರಿಸುತ್ತಿದೆ. ಹಸಿದವರು ಬೇಡಿದರೂ ನೀಡದವರು ಹೊಟ್ಟೆ ತುಂಬಿದವರಿಗೆ ಒತ್ತಾಯ ಮಾಡಿ ಹಾಕುತ್ತಾರೆ. ಅವರು ಹೆಚ್ಚಾದದ್ದನ್ನು ತಿಪ್ಪೆಗೆ ಚೆಲ್ಲುವುದನ್ನು ನೋಡುತ್ತಿರುತ್ತೇವೆ. ಶಾಲೆಯಲ್ಲಿ ಕುಳಿತುಕೊಳ್ಳಲು ಜಾಗ ನೀಡದೆ ಹೊರಗೆ ನೆಲದಲ್ಲಿ ಕೂರಿಸುತ್ತಾರೆ ಎಂಬ ಅಂಶ ಎಂಥವರ ಮನಸ್ಸನ್ನೂ ಘಾಸಿಗೊಳಿಸುತ್ತದೆ. 'ತಟ್ಟೆಗೆ ಹೆಚ್ಚಿಗೆ ಹಾಕಿಸಿಕೊಳ್ಳಬಾರದು. ನಿಮಗೆ ತಿನ್ನಲು ಎಷ್ಟು ಸಾಧ್ಯವೋ ಅಷ್ಟನ್ನೇ ನೀಡಿಸಿಕೊಳ್ಳಬೇಕು. ಮನೆಗೆ ಕಟ್ಟಿಕೊಂಡು ಹೋಗಬಾರದು, ಊಟ ಮುಗಿಸಿಹೋಗುವಾಗ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕು.'[3] 'ಗೌಡರ ಜಮೀನಿನಲ್ಲಿ ಸಾಯುವವರೆಗೂ ಜೀತ ಮಾಡುವ ನಮ್ಮ ದಲಿತರ ಮೂಲ ಬಣ್ಣ ಯಾವತ್ತು. ಬಾಡದ ಮೂಲ ಕಪ್ಪು ಬಣ್ಣ'. ಬಣ್ಣದಿಂದಲೇ ದಲಿತರನ್ನು ಗುರುತಿಸುವುದು ಒಂದು ರೀತಿಯ ಸಂವೇದನೆ ಹಾಗೆಯೇ ಅವರು ಮಾಡುವ ಕೆಲಸದಿಂದಲೂ ದಲಿತರನ್ನು ಗುರುತಿಸುವುದು ನಡೆದಿತ್ತು. ಇಲ್ಲೆಲ್ಲವೂ ಕಷ್ಟದ ನೋವಿನ ಬದುಕಿನ ಚಿತ್ರಣ ಅನಾವರಣವಾಗುತ್ತಿದ್ದುದನ್ನು ಗಮನಿಸಬಹುದು. ಪ್ರೀತಿಸಿದವರಿಗೆ ಅಡ್ಡವಾಗುವ ಜಾತಿ ಪ್ರೀತಿ ಮಾಡುವಾಗ ಇರದೆ ಮದುವೆಯ ಸಂದರ್ಭಕ್ಕೆ ತಕ್ಷಣ ಬದಲಾಗುವುದು. ಆದರೆ ಪ್ರೀತಿಸಿದವಳನ್ನು ಹರಿಸಿ ಹಾರೈಸಿ ಕಳುಹಿಸುವುದು ಮನುಷ್ಯತ್ವವನ್ನು ಉಳಿಸಿಕೊಂಡವರು. ಮಾಂಸದ ಗುಪ್ಪೆಯನ್ನು ಕಾಯುವುದು, ದಲಿತ ಹೆಣ್ಣು ಮಕ್ಕಳ ಓಕುಳಿಯಾಟ, ಬಾಡಿಗೆ ಬ್ರಾಹ್ಮಣನಾದದ್ದು, ಮಾರ್ಕ್ಸ್‌ವಾದದ ನೆಪದಲ್ಲಿ ಶೋಷಣೆ, ಬಾಳೆ ಎಲೆಯಲ್ಲಿಯ ಮೇಲುಕೀಳು ಭಾವನೆ, ಇವೆಲ್ಲ ಸಂವೇದನೆಗಳು ಈ ಆತ್ಮಕಥೆಯಲ್ಲಿ ಮೂಡಿಬಂದಿವೆ.

ಊರುಕೇರಿ ಆತ್ಮಕಥೆಯಲ್ಲಿಯೂ ಅವನ ತಾಯಿ ತನ್ನ ಮಗನನ್ನು ಓದಿಸಬೇಕೆಂದು ಬಯಸಿ ಬಲವಂತದಿಂದ ಶಾಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಾಗ ಸ್ಕೂಲಿನಲ್ಲಿ ಅವರಿಗೆ ಮನೆ ತಂದೆ ತಾಯಿ ಕುರಿದನಗಳದೇ ನೆನಪಾಗಿ ಕಣ್ಣೀರು ಸುರಿಸುತ್ತಾರೆ. ಅವುಗಳನ್ನು ನೋಡಿಕೊಳ್ಳಲು ನಾನಿಲ್ಲವಲ್ಲ ಎಂಬ ಚಿಂತೆ. ಎಲ್ಲರಿಗೂ ಒಳಿತು ಮಾಡಬೇಕು ಎಂಬ ಮನೋಭಾವ, ಕಾಪಾಡಬೇಕು ಎಂಬ ಆಲೋಚನೆ ಇವರಲ್ಲಿ ಕಾಣುತ್ತದೆ. "ಮನೆಯಿಂದ ಹಾಸ್ಟೆಲ್‌ಗೆ ಹೋಗುವಾಗ ಹಳೆಯ ಟ್ರಂಕ್, ಹರಿದ ಚಾಪೆ ಎಲ್ಲವನ್ನು ಹೊತ್ತೊಯ್ಯಬೇಕಾದ 'ಕತ್ತಲಿದ್ದಾಗ ಹೊತ್ತೊಯ್ದರೆ ಯಾರೂ ನೋಡುವುದಿಲ್ಲ"[4] ಎಂದುಕೊಳ್ಳುವರು. ತಮ್ಮ ಸ್ಥಿತಿಗೆ ಕೊರಗದೆ, ಬದಲಾವಣೆಗಾಗಿ

ಹಂಬಲಿಸುವುದನ್ನು ಇಲ್ಲಿ ಕಾಣಬಹುದು. ದಲಿತರನ್ನು ಒಗ್ಗೂಡಿಸುವ ಅಕ್ಷರ ಕಲಿಸುವ, ಅವರಿಗಾಗಿ ಹೋರಾಟ ಮಾಡಬೇಕೆನ್ನುವ ಸರ್ಕಾರದ ಮೂಲಕ ಸವಲತ್ತುಗಳನ್ನು ಕೊಡಿಸುವ ಚಿತ್ರಣ ಅವರ ಊರುಕೇರಿಯ ಆತ್ಮಕಥೆಗಳಲ್ಲಿ ಇರುವ ಚಿತ್ರಣ. ಈ ದೇಶದ ಬಡವರಲ್ಲಿ ಜನಸಾಮಾನ್ಯರಲ್ಲಿ ನನ್ನನ್ನು ಒಬ್ಬನಾಗುವಂತೆ ಮಾಡಿ, ಗಣ್ಯ ಸಮೂಹದಿಂದ ಬೇರ್ಪಡಿಸುವ ನನ್ನ ಆಕಾರ, ವೇಷಭೂಷಣದ ಬಗ್ಗೆ ಅಪಾರ ಅಭಿಮಾನ ಉಂಟಾಗುತ್ತದೆ.[5] ಬೀದಿಯಲ್ಲಿ ನಿದ್ದೆ ಮಾಡಿದರೂ ಯಾವ ಸಂಕೋಚವೂ ಇಲ್ಲದೆ ವರ್ತಿಸುವುದು ಊರುಕೇರಿ ಭಾಗ ಎರಡರ ವಿಶೇಷತೆ. ಪೊರಕೆ ಎತ್ತಿ ಹಿಡಿದು ಸಂತೋಷವನ್ನು ವ್ಯಕ್ತಪಡಿಸಿದ ತಾಯಿಗೆ ಮಗನ ಕೃತಜ್ಞತೆ, ಹಸಿವಿನಿಂದ ಕಂಗೆಟ್ಟುಹೋಗುವ ಸಂದರ್ಭ ಇವೆಲ್ಲವೂ ದಲಿತ ಸಂವೇದನೆಯ ಚಿತ್ರಣವನ್ನು ಕೊಡುತ್ತವೆ. ದಲಿತರ ಹಿತಾಸಕ್ತಿಗೆ ಬಡವರ ಆರ್ತನಾದಕ್ಕೆ ಸದಾ ಸ್ಪಂದಿಸುವ ಚಿಂತಿಸುವ ಸಂವೇದನಾ ಗುಣ ಇವರಿಗೆ ಚಿಕ್ಕಂದಿನಿಂದಲೂ ಬಂದಿರುವುದನ್ನು ಕಾಣಬಹುದು.

ತುಂಬಾಡಿ ರಾಮಯ್ಯನವರದು ದ್ವೇಷ, ಪ್ರತಿಕಾರಗಳಿಲ್ಲದೆ ರೋಷಾವೇಷವಿಲ್ಲದೆ ನೇರವಾಗಿ ಹೇಳುವ ಸಂವೇದನೆಯಾಗಿದೆ. 'ಮಣೆಗಾರ ಕೃತಿ' ಕಲಾತ್ಮಕ ಕೃತಿ ಜನಜೀವನದೊಂದಿಗೆ ದಲಿತರ ವಿಶೇಷತೆಗಳನ್ನು ಅವರಲ್ಲಿರುವ ಕಲೆಯನ್ನು ವಿವರಿಸುತ್ತಾ ಹೋಗುತ್ತಾರೆ. "ದಲಿತರ ಹಸಿದ ಹೊಟ್ಟೆಗಳನ್ನು ತುಂಬಿಸಲು ಅಪ್ಪ ಅಮ್ಮಂದಿರು ದಶಾವತಾರವೆತ್ತಿದಂತೆ ಬೆಳಗ್ಗೆಯೊಂದು ಕೆಲಸ, ಮಧ್ಯಾಹ್ನ ಇನ್ನೊಂದು ಕೆಲಸ, ಸಂಜೆಗೆ ಮತ್ತೊಂದು ಕೆಲಸವನ್ನು ಎಡಬಿಡದೆ ಮಾಡುತ್ತಿದ್ದ ಅಪ್ಪನ ಹಲವು ಅವತಾರಗಳಲ್ಲಿ ಚಪ್ಪಲಿ ಹೊಲಿಯುವುದು ಪ್ರಮುಖವಾದದ್ದು"[6] ದಲಿತರಲ್ಲಿ. ಕುಟುಂಬ ನಿರ್ವಹಣೆ ಕಷ್ಟವಾದರೂ ತಮ್ಮ ಕುಟುಂಬ ಮತ್ತು ಮಕ್ಕಳನ್ನು ಸಾಕಲು ಅವರ ತಂದೆ ಮಾಡುತ್ತಿದ್ದ ಕೆಲಸಕಾರ್ಯವನ್ನು ವಿವರಿಸುತ್ತಾರೆ. ಆ ವಯಸ್ಸಿಗೆ ಅವರಿಗೆ ತಂದೆಯ ಕಷ್ಟದ ಅರಿವಾಗಿತ್ತು. ದೇವರನ್ನು ಮುಟ್ಟುವ ಅವಕಾಶ ದೊರತದ್ದು, ದಲಿತ ಹೆಣ್ಣು ಮಕ್ಕಳು ಅನಾಥ ಮಗುವಿಗೆ ಹಾಲೂಣಿಸಿದ್ದು, ಇವೆಲ್ಲವೂ ಗ್ರಾಮೀಣ ಬದುಕಿನ ಸಂವೇದನೆಯಾಗಿದೆ.

ದು. ಸರಸ್ವತಿಯವರು ತಮ್ಮ ಬದುಕಿನಲ್ಲಿದ್ದ ನಂಬಿಕೆಗಳನ್ನು ಯಾವ ಅಡೆತಡೆಗಳಿಲ್ಲದೆ ಬದುಕಬೇಕೆಂಬ ನಿರ್ಧಾರಕ್ಕೆ ಬರುತ್ತಾರೆ. ಅವರೆಲ್ಲರ ತಿರಸ್ಕಾರದ ನೋಟದ ನಡುವೆ ಬದುಕಬೇಕಾದ ಸಂದರ್ಭವಿತ್ತು. ಅವರಲ್ಲಿದ್ದ ಸತ್ಯ ಮತ್ತು ಸಂಕಟದಿಂದ ಹೊರಗೆ ಬರುವಂತಾಯಿತು. ಅವರಲ್ಲಿದ್ದ ಮಹತ್ವದ ಚಿಂತನೆಗಳು ಅವಮಾನದ ಸಂಕಟದಿಂದ ಹೊರಗೆ ಬರುವಂತಾಯಿತು. ಅವರಲ್ಲಿನ ಮುಗ್ಧತೆ ನಂತರವೂ ಮುಂದುವರೆದಿದೆ ಎಂಬುದಕ್ಕೆ ಅವರು ತಮ್ಮನ್ನು ತೊಡಗಿಸಿಕೊಂಡಿರುವುದೇ ಸಾಕ್ಷಿಯಾಗಿದೆ. 'ದುಡಿದರೂ ನೆಮ್ಮದಿಯಿಲ್ಲ ಬದುಕಿಗೂ ಮಹತ್ವವಿಲ್ಲವೆಂಬಂತಾಗಬಾರದು. ಏಕೆಂದರೆ ದಲಿತರಲ್ಲಿ ಮಂಚೂಣಿಗೆ ಬರುವವರು ಕೆಲವರು ಮಾತ್ರ, ಅವರಿಗೂ ಇಂತಹ ಸಮಸ್ಯೆಗಳು ಎದುರಾಗುತ್ತಿರುತ್ತವೆ. "ಅಯ್ಯರಿಗೆ ಕೆಟ್ಸೇಸರು ತರುವ ಯಾವ ಕೆಲ್ಸಾನು ಮಾಡ್ಬೇಡ ಕಣಪ್ಪ ಅಂದ್ಲು." "ಅವ್ವ ಒಮ್ಮೆ ವಾಪಸ್ಸು ಬಂದಾಗ ಹೇಳಬೇಕು, ನೀ ಹೇಳಿದಂತೆ ಒಂದು ದಿನವೂ ದೀಪ ಅರದಂತೆ ನೋಡಿಕೊಂಡೆ"[8] ಎಂದುಕೊಳ್ಳುತ್ತಾರೆ. "ಅಪ್ಪ ಯಾವಾಗಲೂ ಹೇಳುತ್ತಿದ್ದದ್ದು ದೇಹವಿದ್ದ ಮೇಲೆ ಉಣ್ಣಬೇಕು. ಊಟಕ್ಕೆ ಸಂಪಾದಿಸಬೇಕು. ಸಂಪಾದಿಸಲು ದುಡಿಯಬೇಕು"[9]

ಎನ್ನುವ 'ಮಗು ನಾನು ಇದೇ ಸಂಸ್ಥೆಲಿ ಮೂವತ್ತು ವರ್ಷ ಯಾವ ಕಪ್ಪು ಚುಕ್ಕೆ ಇಲ್ದೆ ಕೆಲ್ಸಾ ಮಾಡಿ ಒಳ್ಳೆ ಹೆಸರು ತಗೊಂಡಿದೀನಿ, ನೀನು ಹಂಗೆ ಇರಬೇಕು ಚಾಲಾಕಿತನದಿಂದ ನಿಬಾಯಿಸಬೇಕು, ಸಾಧನೆ ಮಾಡಿದರೆ ಬೆಲೆಯುಂಟು"[9] ಎನ್ನುವ ಹಿರಿಯರ ಮಾತುಗಳು ನೆನಪಿದ್ದರು ಅದು ನಡೆಯುವವರ ಘಳಿಗೆಗೆ ತಡೆಯುಂಟಾಗಿ ಎಲ್ಲವೂ ಬದಲಾಗುತ್ತದೆ. ಅಂದುಕೊಳ್ಳದೆ ಇರುವುದು ನಡೆದಾಗ ಮನೆಯವರ ತಿರಸ್ಕಾರದ ಜೊತೆಗೆ ಸುತ್ತಲಿನವರ ನೋಟವನ್ನು ಎದುರಿಸಬೇಕಾಗಿತ್ತು.

ಹಲವು ಸಂಕಟಗಳ ಸರಮಾಲೆಯನ್ನು ಹಾಕಿಕೊಂಡರೂ ಎಲ್ಲರ ಬದುಕು ಅದರೊಳಗೆ ಮುಂದುವರೆಯುತ್ತಿರುತ್ತದೆ. 'ಮನವಿಲ್ಲದವರ ಮಧ್ಯೆ' ಆತ್ಮಕಥೆಯಲ್ಲಿ ಸಂವೇದನಾಶೀಲ ಮನಸ್ಸಿನ ತೊಳಲಾಟವೇ ಗೋಚರಿಸುತ್ತಿದೆ. ಮುಗ್ಧ ಜನರ ನೋವು, ಅವರ ಸುತ್ತಲಿನವರೇ ಅವರನ್ನು ಶೋಷಿಸುವ ಹಿಂಸಿಸುವ ಸಂದರ್ಭವನ್ನು ಕಾಣಬಹುದು. ದಲಿತರು ಶೋಷಿತರೇ ಆದರೂ ಸಮಾಜದಲ್ಲಿ ಮೇಲುಜಾತಿಯ ಜನರು ಮಾತ್ರವೇ ಶೋಷಣೆ ಮಾಡಿರುವುದು ಕಾಣುತ್ತದೆ. ದಲಿತರೇ ದಲಿತರನ್ನು ಶೋಷಿಸುವ, ಅವಮಾನಿಸುವ ಚಿತ್ರಣ ಈ ಆತ್ಮಕಥೆಯಲ್ಲಿ ಮೂಡಿಬಂದಿದೆ.

ಸಂಭೋಳಿ ಕೃತಿಯಲ್ಲಿ ದಲಿತ ಸಂವೇದನೆ ಜಾಗೃತಾವಸ್ಥೆಯಲ್ಲಿರುವುದನ್ನು ಕಾಣಬಹುದು. ಲಕ್ಷ್ಮಣ್ ಅವರಿಗೆ ಸಮುದಾಯದ ಬಗೆಗಿನ ಕಾಳಜಿಯಿತ್ತು. ತಮ್ಮ ಸ್ಥಿತಿಗೆ ಎಲ್ಲೂ ಅವರಿಗೆ ಸಿಟ್ಟು ಬರುವುದು ಕಾಣುವುದಿಲ್ಲ. ಎಲ್ಲವನ್ನು ಸಹಿಸಿಕೊಂಡು ಹೆಜ್ಜೆ ಹೆಜ್ಜೆಗೂ ಗಟ್ಟಿಯಾಗುತ್ತಾ ಹೋಗುವುದನ್ನು ಕಾಣಬಹುದು. ತಾವು ಅನುಭವಿಸಿದ ನೋವು ಹೆಚ್ಚು ಅಂದುಕೊಳ್ಳುವವರಿಗೆ, ಮತ್ತೊಬ್ಬರ ನೋವನ್ನು ಕಂಡಾಗ ತಮ್ಮ ಸ್ಥಿತಿಗೆ ಸಮಾಧಾನವಾಗಬಹುದು. ದಲಿತ ಸಂಘರ್ಷ ಸಮಿತಿಯ ಹೋರಾಟಗಳಲ್ಲಿ ಸಕ್ರಿಯವಾಗಿದ್ದು, ದೌರ್ಜನ್ಯ ನಡೆಯುವಲ್ಲಿ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದರ ಅನುಭವವನ್ನು ಹೇಳುವಾಗ ಅವರಲ್ಲಿ ಸಮುದಾಯದ ಬಗ್ಗೆ ವಿಶೇಷ ಕಾಳಜಿ ಇದ್ದುದು ಅರಿವಾಗುತ್ತದೆ. ದೀನ ದಲಿತರ ಉದ್ಧಾರಕ್ಕೆ ಮನಸ್ಸು ಮಾಡುವ ಈ ಎಲ್ಲಾ ಚಿಂತನೆಗಳು ದಲಿತ ಸಂವೇದನೆಯಿಂದಲೇ ಸಾಧ್ಯವಾಗುತ್ತದೆ. ಹಸಿವಿಗಾಗಿ, ಬದುಕಿಗಾಗಿ ಮಾಡಿದ ಹೋರಾಟವೇ ದಲಿತರ ಬದುಕಿನ ಚಿತ್ರಣ. ಎಲ್ಲರ ಪರವಾಗಿ ಶ್ರಮಿಸುವುದು ಕೆಲವು ಹೋರಾಟಗಾರರಿಗೆ ಇರುವ ಸಂವೇದನೆಯಾಗಿದೆ.

ಉತ್ತರ ಕರ್ನಾಟಕದ ಜನರ ಬದುಕು ವಿಭಿನ್ನವಾಗಿತ್ತು. ಅಲ್ಲಿನ ಬದುಕು ಬೇರೆಯಾಗಿತ್ತು. ಅಲ್ಲಿ ಬಡತನ ಅನಕ್ಷರತೆಯ ಜೊತೆಗೆ ಮಹಿಳೆಯರ ಸಮಸ್ಯೆಗಳು ಹೆಚ್ಚಾಗಿದ್ದವು. ದಲಿತರ ಮನೆಯಲ್ಲಿ ಹಿರಿಯ ಮಗಳಾಗಿ ಹುಟ್ಟುವ ಮಗಳನ್ನು ದೇವದಾಸಿಯರನ್ನಾಗಿ ಮಾಡಲಾಗುತ್ತಿತ್ತು. ಆದರೆ ಈ ಕಷ್ಟದ ನಡುವೆಯೇ ಅವರು ಬದುಕು ಸಾಗಿಸಬೇಕಾಗಿತ್ತು. 'ಮಾತಂಗಿ ದೀವಟಗೆ'ಯಲ್ಲಿ ಈ ಚಿತ್ರಣವನ್ನು ಕಾಣುತ್ತೇವೆ. ಕಿತ್ತು ತಿನ್ನುವ ಬಡತನ ಮನೆತುಂಬಾ ಮಕ್ಕಳಿದ್ದಾಗಲೂ ತಾಯಿ ರತ್ನಮ್ಮ ಅವರೆಲ್ಲರ ಹೊಟ್ಟೆ ತುಂಬಿಸಲು ದುಡಿಯುತ್ತಿದ್ದರು. ತರಕಾರಿ ಹಣ್ಣುಗಳನ್ನು ರಸ್ತೆಯ ಪಕ್ಕದಲ್ಲಿಟ್ಟುಕೊಂಡು ಮಾರುವುದು ಅವರ ಕಾಯಕವಾಗಿತ್ತು.

ಬಡವರ ಮನೆಯ ಸಂಕಷ್ಟಗಳಿಗೆ ಕೊನೆಯೇ ಇಲ್ಲ. ಆದರೂ ಛಲದ ಬದುಕು ಅವರದಾಗಿತ್ತು. 'ನಮಗೆ ಮಲಗಲು ಜಾಗ ಸಾಕಾಗುತ್ತಿರಲಿಲ್ಲ. ಅವ್ವಾ ನಮಗೆಲ್ಲಾ ಬಿಸಿ ಬಿಸಿ ರೊಟ್ಟಿ ಉಣಿಸಿ

ಓದಿಕೊಳ್ಳಲು ಹೇಳುತ್ತಾ ಮಲಗಲು ನಮಗೆಲ್ಲಾ ಹಾಸಿಗೆ ಕೊಡುತ್ತಿದ್ದಳು. ಹಾಸಿಗೆ ಹೊದಿಕೆಯಲ್ಲಿ ಯಾವಾಗಲೂ ವಿಚಿತ್ರವಾದ ಪರಿಮಳ ಬರುತ್ತಿತ್ತು. ಅದು ಒಂದು ವರ್ಷದಲ್ಲಿ ಮೂರು ಬಾರಿ ಮಾತ್ರ ಕೌದಿಗಳನ್ನು ಒಗೆಯುತ್ತಿದ್ದರು'.[10] ದಲಿತರ ನಿಜವಾದ ಸ್ಥಿತಿಯನ್ನು ಇಲ್ಲಿ ಹೇಳುತ್ತಿದ್ದಾರೆ. ಬಡತನದಲ್ಲಿ ಪ್ರೀತಿಗೆ ಕೊರತೆಯಿಲ್ಲವೆಂಬಂತೆ ತಂದೆ ತಾಯಿ ಮಕ್ಕಳನ್ನು ಜೋಪಾನ ಮಾಡುತ್ತಿದ್ದರು. 'ಬೇವಿನ ಬೀಜ ಹಣ್ಣಾದವುಗಳನ್ನು ಎಸೆಯುತ್ತಿದ್ದರು.' ಅವನ್ನು "ಅವರುಗಳು ಹೋದ ಬಳಿಕ ನನ್ನ ಅಂಗಿಯಿಂದ ಚೆನ್ನಾಗಿ ಒರೆಸಿ ತಿನ್ನುತ್ತಿದ್ದೆ. ಅವುಗಳು ಸಿಹಿಯಾಗಿರುತ್ತಿದ್ದವು". "ಹಸಿವಿನಿಂದಲೋ ನೋವಿನಿಂದಲೋ ಗೊತ್ತಿಲ್ಲ ನಮಗೆ ಯಾವುದರಲ್ಲೂ ಕಹಿಯ ಅರಿವು ಆಗಲಿಲ್ಲವೆಂಬುದು ಸತ್ಯ.'[11] ಹಸಿವು ರುಚಿಯನ್ನು ಕೇಳುವುದಿಲ್ಲ ಹಸಿವನ್ನು ನೀಗಿಸಿಕೊಳ್ಳಲು ಅವುಗಳನ್ನು ತಿನ್ನುವುದನ್ನು ಮಾಡುತ್ತಿದ್ದರು. ದಲಿತರೆಲ್ಲರ ಸ್ಥಿತಿ ಇದೇ ಆಗಿತ್ತು. ದಲಿತರ ಸಂವೇದನೆಯಲ್ಲಿನ ಇವುಗಳ ಮಾತ್ರ ನಡೆದಿರುತ್ತಿದ್ದವು'. "ನಾವು ಹುಟ್ಟಿದ್ದು ಕೊಳಚೆ ಪ್ರದೇಶವಿದ್ದರೂ ನಮ್ಮಲ್ಲಿ ಯಾವ ಕೊಳೆ ಇರಲಿಲ್ಲ. ಲಿಂಗವಂತರಿಗಿಂತ ಮಡಿವಂತಿಕೆಯಲ್ಲಿ ಒಂದು ಕೈ ಮೇಲು ಎನ್ನುವಂತೆ ನಮ್ಮ ತಾಯಿ ತಂದೆಯರು ಸಂಸ್ಕಾರದ ಲೇಪನವನ್ನು ನಮಗೆಲ್ಲರಿಗೂ ನಿತ್ಯವು ಮಾಡುತ್ತಿದ್ದರು.[12] ದಲಿತರಾದರೂ ಅವರ ತಂದೆ ತಾಯಿಯಲ್ಲಿದ್ದ ಸಂಸ್ಕಾರ ಮಕ್ಕಳನ್ನು ರಕ್ಷಿಸುತ್ತಿತ್ತು. ಇವೆಲ್ಲವೂ ದಲಿತ ಆಸ್ಮಿತೆಯ ಪ್ರತೀಕಗಳಾಗಿದ್ದವು.

ಒಂಟಿಕಾಲಿನ ನಡಿಗೆ ದಲಿತ ಸಂವೇದನೆಗೆ ಮತ್ತೊಂದು ಉದಾಹರಣೆ. ಸ್ವಂತ ಜಮೀನನ್ನು ಹೊಂದುವ ಆಸೆಯಿಂದ ಅವರ ತಾತ ಶ್ಯಾನುಭೋಗರನ್ನು 'ಸ್ವಾಮಿ, ನನಗೆ ಜಮೀನಿಲ್ಲ ಅಂಬೋದು ತಮಗೆ ಗೊತ್ತೇ ಇದೆ. ನನಗೆ ಎರಡೆಕರೆ ಜಮೀನು ಮಾಡಿಸಿ ಕೊಡಿ. ನಾನು ನನ್ನ ಮಕ್ಕಳು ನಿಮ್ಮ ಹೆಸರು ಹೇಳಿಕೊಂಡು ಜೀವನ ಮಾಡ್ತೀವಿ'.[13] ದಲಿತರು ಶತಮಾನಗಳ ಕಾಲ ಭೂ ಒಡೆಯರಾಗದೆ ಬೇರೆಯವರಲ್ಲಿ ದುಡಿದು ಬದುಕುವುದೇ ಅವರ ನಿಜ ಸ್ಥಿತಿಯಾಗಿತ್ತು. ಅದಕ್ಕಾಗಿ ಅವರ ಮೈಸೂರು ಮಹಾರಾಜರಿಂದ ಮಂಜೂರು ಮಾಡಿಸಿಕೊಳ್ಳಲು ದೊಡ್ಡಬಳ್ಳಾಪುರದಿಂದ ಮೈಸೂರಿನವರೆಗೂ ಕಾಲುನಡಿಗೆಯಲ್ಲಿ ಹೊಲವನ್ನು ಪಡೆದು ಬರುತ್ತಾರೆ. ಎಂದರೆ ಅವರ ಬದುಕು ಯಾವ ಹಂತದಲ್ಲಿತ್ತು ಎಂಬುದು ತಿಳಿಯುತ್ತದೆ. ಹೈಸ್ಕೂಲಿನಲ್ಲಿದ್ದಾಗ ಹನುಮಂತಯ್ಯನವರು ಸ್ಪರ್ಧೆಯಲ್ಲಿ ಬಹುಮಾನ ಬಂದದ್ದನ್ನು ಸ್ವೀಕರಿಸಲು ಹೋಗುವಾಗ ಅವರಿಗೆ ತಮ್ಮ ಚಡ್ಡಿ ಹರಿದದ್ದು ನೆನಪಿರುತ್ತದೆ. ಅವರ ತಾಯಿಗೆ ಹೇಳಿದಾಗ ' ಪಕ್ಕದ ಮನೆಯ ನಮ್ಮ ಚಿಕ್ಕಪ್ಪನ ಮಗನ ಚಡ್ಡಿಯನ್ನು ಕೊಡಿಸುತ್ತೇನೆ ಹೋಗಿ ಬಾ' ಎನ್ನುತ್ತಾರೆ. ಆದರೆ ಅವರು ಯೋಚಿಸಿ ಬೆಳಗಾಗುತ್ತಲೆ 'ಅವರ ಹಳೆಯ ಚಡ್ಡಿ ಕೇಳುವುದು ಬೇಡ ಇದರಲ್ಲೇ ಹೋಗಿ ಬಾ'[14] ಎಂದು ಕಳುಹಿಸುತ್ತಾರೆ. ಬಹುಮಾನ ಬಂದ ಪುಸ್ತಕವನ್ನು ಒಂದು ಕೈಯಲ್ಲಿ ಹರಿದ ಚಡ್ಡಿಯನ್ನು ಕಾಣದಂತೆ ಮತ್ತೊಂದು ಕೈಯಲ್ಲಿ ಹಿಡಿದು ನಿಂತಿದ್ದರು. ಏನಾದರೂ ಹರಿದ ಚಡ್ಡಿಯನ್ನು ವೇದಿಕೆಯ ಮೇಲೆ ಯಾರಿಗೂ ಕಾಣದಂತೆ ಹಿಡಿದದ್ದು ದಲಿತರ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ವ್ಯಕ್ತಪಡಿಸುತ್ತವೆ. ಸ್ವಾಭಿಮಾನದ ಮಾತುಗಳು ಎಲ್ಲರಿಗೂ ಮಾದರಿಯೆನಿಸುತ್ತದೆ.

ಬೆಸಗರಹಳ್ಳಿ ರಾಮಣ್ಣನವರು ಅನಾರೋಗ್ಯದಿಂದ ಹಾಸಿಗೆಯಲ್ಲಿದ್ದಾಗ ಅವರನ್ನು ನೋಡಲು ಹೋದ ಹನುಮಂತಯ್ಯನವರಿಗೆ 'ನೀನು ಈ ಹಾಲನ್ನು ಒಂದು ಗುಟುಕನ್ನಾದರೂ ಕುಡಿದು ಎಂಜಲು ಮಾಡಿಕೊಡಬೇಕು. ಇಲ್ಲವಾದರೆ ನಾನು ಹಾಲನ್ನೇ ಕುಡಿಯುವುದಿಲ್ಲ' ಎಂದು ಹಠ ಮಾಡುತ್ತಾರೆ. ಮುಂದುವರೆದು 'ಇಲ್ಲಪ್ಪಾ ನಿಮಗೆ (ಅಸ್ಪೃಶ್ಯರಿಗೆ) ಸಾವಿರಾರು ವರ್ಷಗಳಿಂದ ನಾವು ಅನ್ಯಾಯ ಮಾಡಿದ್ದೇವೆ. ಆ ಅನ್ಯಾಯಕ್ಕೆ ಪ್ರಾಯಶ್ಚಿತ್ತವಾಗಬೇಕು. ನೀನು ಎಂಜಲು ಮಾಡಿದರೆ ಮಾತ್ರ ನಾನು ಹಾಲು ಕುಡಿಯುತ್ತೇನೆ' ಎಂದು ಹಠ ಮಾಡಿದರು.[15] ಇದು ಮನುಷ್ಯತ್ವದ ಸಂವೇದನೆ. ದಲಿತರನ್ನು ಕಂಡು ಮೈಲಿಗೆಯಾಗುತ್ತದೆ ಎಂದುಕೊಳ್ಳುವವರ ನಡುವೆ ಇಂಥ ವ್ಯಕ್ತಿಗಳು ಇದ್ದರು ಎಂಬುದೂ ಮುಖ್ಯವಾಗುತ್ತದೆ.

ದಲಿತ ಸಂವೇದನೆ ಎಂಬುದು ಪ್ರತಿಯೊಬ್ಬರಲ್ಲೂ ಕಾಣುವ ಅಂಶವಾಗಿದೆ. ದಲಿತರು ಮತ್ತು ದಲಿತೇತರರು ದಲಿತ ಸಂವೇದನೆಗೆ ಒಳಗಾಗುತ್ತಿದ್ದರು. ದಲಿತ ಸಂವೇದನೆ ಎಂಬುದು ಮನುಷ್ಯನಲ್ಲಿನ ಮಾನವೀಯ ಅನುಬಂಧಗಳನ್ನು ತಿಳಿಸುತ್ತವೆ.

**ಅಡಿ ಟಿಪ್ಪಣಿ :**

1. ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂ–5. ಪುಟ–713
2. ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂ–5, ಅದೇ, ಪುಟ–714
3. ಗೌರ್ಮೆಂಟ್ ಬ್ರಾಹ್ಮಣ, ಪ್ರೊ. ಅರವಿಂದ ಮಾಲಗತ್ತಿ, ಚೇತನ ಬುಕ್ ಹೌಸ್, ಮೈಸೂರು, ಪುಟ 4
4. ಊರುಕೇರಿ ಭಾಗ 1, ಡಾ. ಸಿದ್ಧಲಿಂಗಯ್ಯ, ಅಂಕಿತ ಪ್ರಕಾಶನ, ಎರಡನೇ ಮುದ್ರಣ, 1997
5. ಊರುಕೇರಿ ಭಾಗ 2, ಡಾ. ಸಿದ್ಧಲಿಂಗಯ್ಯ, ಅಂಕಿತ ಪ್ರಕಾಶನ, 2006, ಪುಟ 28
6. ಮಣೆಗಾರ, ತುಂಬಾಡಿ ರಾಮಯ್ಯ, ತುಂಬಾಡಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್, ತುಮಕೂರು, 1999, ಪುಟ 13
7. ಈಗೇನ್ ಮಾಡೀರಿ? ದು. ಸರಸ್ವತಿ, ಮಾನಸ, ಬೆಂಗಳೂರು, 2001, ಪುಟ 32
8. ಅದೇ, ಪುಟ 34
9. ಅದೇ, ಪುಟ 34
10. ಮಾತಂಗಿ ದೀವಟಿಗೆ, ಸಮತಾ ದೇಶಮಾನೆ, ಅನ್ನಪೂರ್ಣ ಪಬ್ಲಿಷಿಂಗ್, ಬೆಂಗಳೂರು, 2015, ಪುಟ 112
11. ಅದೇ, ಪುಟ 114
12. ಅದೇ, ಪುಟ 123
13. ಒಂಟಿಕಾಲಿನ ನಡಿಗೆ, ಡಾ. ಎಲ್. ಹನುಮಂತಯ್ಯ, ಚಾರುಮತಿ ಪ್ರಕಾಶನ, ಬೆಂಗಳೂರು, 2015, ಪುಟ 6
14. ಅದೇ, ಪುಟ 82
15. ಅದೇ, ಪುಟ 194

ಅಧ್ಯಾಯ – ೫

# ಸಮಾರೋಪ

ಸ್ವಾತಂತ್ರ್ಯಾನಂತರದ ಭಾರತೀಯ ಸಮಾಜವು ಸಂಘರ್ಷ ಕೇಂದ್ರಿತವಾಯಿತು. ಇದಕ್ಕೆ ಕಾರಣ ಇಲ್ಲಿನ ಹಲವು ರೀತಿಯ ಪ್ರಭಾವ ಪ್ರೇರಣೆಗಳು ಅಡೆತಡೆಗಳು, ಅಮಾನವೀಯತೆ, ಅಜ್ಞಾನ, ಮೌಢ್ಯತೆ, ಜಾತೀಯತೆ, ಸ್ವಾತಂತ್ರ್ಯದ ಅರ್ಥವಿಲ್ಲದ, ಸಮಾನತೆಯ ಹೆಸರಿಲ್ಲದ ಸಹೋದರತ್ವದ ಸಂಬಂಧಗಳಿಲ್ಲದ ಬದುಕು ನಡೆಯುತ್ತಿತ್ತು. ಸಾಮಾಜಿಕವಾದ ದೃಷ್ಟಿಕೋನಗಳು ಬದಲಾವಣೆಯಾಗಿ ಜನರು ನೋಡುನೋಡುತ್ತಿದ್ದಂತೆ ವಿಚಿತ್ರವಾಗಿ ವರ್ತಿಸಲು ಪ್ರಾರಂಭಿಸಿದರು. ಪ್ರಾದೇಶಿಕ ಅಸಮಾನತೆ, ಕೋಮುವಾದ, ಜಾಗತೀಕರಣ, ಎಲ್ಲವೂ ಸೇರಿ ಜನಜೀವನ ಅಸ್ತವ್ಯಸ್ತವಾದದ್ದಂತು ಸತ್ಯ.

ನಮ್ಮ ದೇಶದಲ್ಲಿ ವಿಶಿಷ್ಟವಾದ ಸಂಸ್ಕೃತಿಯಿದೆ. ಆ ಸಂಸ್ಕೃತಿಯು ಸಾಹಿತ್ಯ, ಕಲೆ, ಜಾನಪದ ಇತ್ಯಾದಿ ಪ್ರಕಾರಗಳಿಂದಾಗಿದೆ. ಕನ್ನಡ ಸಾಹಿತ್ಯವು ಸಂಸ್ಕೃತಿಯ ಚೌಕಟ್ಟಿಕೆ ಒಳಪಟ್ಟಿದೆ. ಸಾಹಿತ್ಯದ ಎಲ್ಲ ಪ್ರಕಾರಗಳು ಜಾನಪದದ ಶೈಲಿ ಹಾಗೂ ಸಂಸ್ಕೃತಿಯ ನೆಲೆಯಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ. ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖವೆನಿಸುವ ಪ್ರಕಾರವೆಂದರೆ ಆತ್ಮಕಥೆಗಳು. ಕಾವ್ಯ, ಕಥೆ, ನಾಟಕ, ಕಾದಂಬರಿಗಳೆಲ್ಲವೂ ವ್ಯಕ್ತಿ ಮತ್ತು ವಸ್ತು ವಿಷಯದ ಸುತ್ತಲು ನಡೆತ್ತಿರುತ್ತವೆ. ಆತ್ಮಕಥೆಗಳು ಬರೆಯುವವನ ಬದುಕಿನ ನೇರವಾದ ಚಿತ್ರಣವನ್ನು ಕಟ್ಟಿಕೊಡುತ್ತದೆ. ಅದರಲ್ಲಿಯೂ ದಲಿತ ಚಿತ್ರಣವನ್ನು ಕಟ್ಟಿಕೊಡುತ್ತದೆ.

ದಲಿತ ಆತ್ಮಕಥೆಗಳು ಕನ್ನಡ ಸಾಹಿತ್ಯಕ್ಕೆ ಹೊಸದೊಂದು ರೂಪವನ್ನು ತಂದುಕೊಟ್ಟಿತು. ದಲಿತ ಕಾವ್ಯಕ್ಕೆ ಸಿಕ್ಕಷ್ಟೇ ಮಾನ್ಯತೆ ದಲಿತ ಆತ್ಮಕಥೆಗಳಿಗೂ ದೊರೆಯಿತು. ಇದಕ್ಕೆ ಮಹಾರಾಷ್ಟ್ರವೇ ಮೂಲ. ದಲಿತ ಸಾಹಿತ್ಯ ಚಳುವಳಿ ಕಾವ್ಯ ಕಾದಂಬರಿ ಆತ್ಮಕಥೆಗಳು ಈ ಭಾಗದಲ್ಲಿಯೇ ಹೆಚ್ಚು ಮಹತ್ವ ಪಡೆದುಕೊಂಡಿದೆ. ಅಕ್ಷರವಂಚಿತ ದಲಿತ ಸಮುದಾಯ ಶತಮಾನಗಳ ಕಾಲ ಕತ್ತಲಲ್ಲಿದ್ದು ಸಾಮಾಜಿಕ ನ್ಯಾಯದ ಪರಿಕಲ್ಪನೆ, ಶಿಕ್ಷಣ, ಜ್ಞಾನವನ್ನು ಪಡೆದುಕೊಂಡ ನಂತರ ಸಾಮಾಜಿಕವಾದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರಾರಂಭಿಸಿದ್ದರು. ಈ ಎಲ್ಲಾ ದಲಿತರ ಆತ್ಮಕಥೆಗಳಲ್ಲಿ ಪ್ರಮುಖವಾಗಿ ಜಾತೀಯತೆ ಮತ್ತು ಅಸ್ಪೃಶ್ಯತೆಯ ಅನುಭವವನ್ನು ಹಾಗೂ ಹಸಿವು ಬಡತನ, ಅವಮಾನಗಳ ಚಿತ್ರಣ ಹಾಗೂ ಹಲವು ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದ ಪುರುಷರು ಮತ್ತು ಮಹಿಳೆಯರು ಕಾಣಸಿಗುತ್ತಿದ್ದರು. ಈ ಸಮಾಜದ ವ್ಯವಸ್ಥೆಯನ್ನು ಬದಲಾಯಿಸುವ

ನಿಟ್ಟಿನಲ್ಲಿ ಚಿಂತಕರ ಸುಧಾರಕರ ಚಿಂತನೆಗಳು ಜಾರಿಗೊಳ್ಳುವಲ್ಲಿ ಒಂದಷ್ಟು ಅಡೆತಡೆಯು ಆಗುತ್ತಿದ್ದು, ಅವಕಾಶವಂಚಿತರು, ಹಕ್ಕುಗಳ ವಂಚಿತರು, ವಸತಿಗಳಿಲ್ಲದೆ, ಯಾವ ಸವಲತ್ತುಗಳಿಲ್ಲದೆ ಬದುಕುತ್ತಿದ್ದಾರೆ. ಬಾಬಾಸಾಹೇಬ್ ಡಾ. ಅಂಬೇಡ್ಕರ್ ಅವರು ಸಹ ಇದೇ ರೀತಿಯ ನೋವಿಗೆ ಒಳಗಾದವರು. ತಮಗಾದ ನೋವು ತಮ್ಮ ಸಮುದಾಯಕ್ಕೆ ಆಗಬಾರದೆಂದು ಬಯಸಿದರು. ಮುಂದಿನ ಜನಾಂಗ ಮತ್ತು ಮಹಿಳೆಯರು ಎಲ್ಲಾ ಅವಕಾಶಗಳನ್ನು ಪಡೆದುಕೊಳ್ಳಬೇಕು ಎಂಬ ಆಲೋಚನೆ ಮಾಡತೊಡಗಿದರು. ತಳಸಮುದಾಯಕ್ಕೆ ದೊರೆಯಬೇಕಾದ ಹಕ್ಕುಗಳನ್ನು ಸಂವಿಧಾನದ ಮೂಲಕ ಜಾರಿಯಾಗುವಂತೆ ನೋಡಿಕೊಂಡರು. ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರ ನಿರಂತರ ಹೋರಾಟ, ಅಧ್ಯಯನ, ಚಿಂತನೆಗಳು, ಚಳುವಳಿಗಳು, ಪತ್ರಿಕೆಗಳಲ್ಲಿ ಬರೆದ ಲೇಖನಗಳು, ಪುಸ್ತಕಗಳ ರಚನೆ ಮುಂದಿನ ತಲೆಮಾರಿಗೆ ಮಾದರಿಯಾದವು. ಅಂಬೇಡ್ಕರ್ ಅವರ ಪ್ರಭಾವಕ್ಕೆ ಒಳಗಾದ ಅಕ್ಷರ ಕಲಿತ ಮೊದಲ ತಲೆಮಾರಿನವರು ಹಾಗೂ ಅವರೊಂದಿಗೆ ಚಳುವಳಿಯಲ್ಲಿ ಭಾಗವಹಿಸುತ್ತಿದ್ದವರು ಹಾಗೂ ಅವರ ಮಾರ್ಗದರ್ಶನದಲ್ಲಿ ಸಾಮಾಜಿಕ ಚಳುವಳಿಯನ್ನು ಪ್ರಾರಂಭಿಸಿದರು. ಸಮಕಾಲೀನ ಚಿಂತನೆಗಳನ್ನು, ಸಮಸ್ಯೆಗಳ ಅನಾವರಣವನ್ನು ತಮ್ಮ ಕೃತಿಗಳ ಮೂಲಕ ತರಲು ಪ್ರಾರಂಭಿಸಿದರು. ಅಂಬೇಡ್ಕರ್ ಅವರ ಚಿಂತನೆಗೆ ಅನುಗುಣವಾಗಿ ನಾಟಕಗಳು, ಕಥೆಗಳು, ಲೇಖನಗಳು ಪತ್ರಿಕೆಗಳಲ್ಲಿ ಮುದ್ರಿತವಾದವು. ಇವುಗಳನ್ನು ಅಳವಡಿಸಿಕೊಂಡ ಜನರಲ್ಲಿ ಬದಲಾವಣೆಗಳಾದವು. ಅಂಬೇಡ್ಕರ್ ಅವರ ಜೊತೆ ಜೊತೆಗೆ ಬೇರೆ ಬೇರೆ ಭಾಗಗಳಲ್ಲಿದ್ದ ಜನರು ಪ್ರಭಾವಿತರಾಗಿ ಸಾಹಿತ್ಯದ ಮುಖೇನ ಧ್ವನಿ ಎತ್ತಲು ಪ್ರಾರಂಭಿಸಿದರು. ಅದರಿಂದಾಗಿ ವಿಭಿನ್ನ ಹಾಗೂ ವಿಶಿಷ್ಟವಾದ ಸಾಹಿತ್ಯ ಪ್ರಕಾರಗಳು ಪ್ರಾರಂಭಗೊಂಡವು. ೧೯೭೦-೮೦ ರ ದಶಕದಲ್ಲಿ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಚಳುವಳಿಗಳು ಮುಂದಿನ ತಲೆಮಾರಿಗೆ ನಾಂದಿಯಾದವು. ದಲಿತ ಸಾಹಿತ್ಯ ಮತ್ತು ಚಳುವಳಿಗೆ ಹಿನ್ನೆಲೆಯಾಗಿ ಇದ್ದದ್ದು ಅಂಬೇಡ್ಕರ್ ಅವರ ವಿಚಾರಗಳಾಗಿದ್ದವು. ಅವರ ಬರಹ ಮತ್ತು ಭಾಷಣಗಳು ಎಲ್ಲರನ್ನು ತಟ್ಟುತ್ತಿದ್ದವು. ಅಲ್ಲಿಯವರೆಗೆ ಬದಲಾವಣೆಯ ಬಗೆಗೆ ಯೋಚಿಸದ ಜನತೆ ನಂತರದಲ್ಲಿ ಅವರಲ್ಲಿಯೂ ಪರಿವರ್ತನೆಗಳಾಗಿದ್ದವು. ಅಂಬೇಡ್ಕರ್ ಅವರ ಮಾತುಗಳನ್ನು ತಪ್ಪದೇ ಅನುಸರಿಸಲು ಪ್ರಾರಂಭಿಸಿದರು. ಶಿಕ್ಷಣದ ಮಹತ್ವವನ್ನು ಅರಿತುಕೊಂಡರು ಎಲ್ಲರೂ ಸಂಘಟಿತರಾಗಿ ಹೋರಾಟಗಳಿಗೆ ಬೆಂಬಲವಾಗಿ ನಿಂತರು. ಅವರೊಂದಿಗಿನ ಚಿಂತನೆಗಳನ್ನು ಅರ್ಥೈಸಿಕೊಂಡು ಹೋರಾಟ ಮುಂದುವರೆಸಿದವರು ತಮಗನಿಸಿದ್ದನ್ನು ಬರೆಯಲು ಪ್ರಾರಂಭಿಸಿದ್ದರು. ಆತ್ಮಕಥೆಗಳು ಒಬ್ಬೊಬ್ಬ ಹೋರಾಟಗಾರರ ಬದುಕಿನ ಚಿತ್ರಣವಾಗಿ ನಮ್ಮ ಕೈಯಲ್ಲಿದೆ.

ಕನ್ನಡ ದಲಿತ ಆತ್ಮಕಥೆಗಳು ಅಂಬೇಡ್ಕರ್ ಅವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ದಲಿತಪರ ಹೋರಾಟಗಳಲ್ಲಿ ತೊಡಗಿಕೊಂಡವರ ಕಥನಗಳಾಗಿವೆ. ಹೋರಾಟದಲ್ಲಿ ತೊಡಗಿಕೊಂಡವರು ಮತ್ತು ಪ್ರಭಾವಿತರಾದವರು ಕಥನಗಳನ್ನು ರಚಿಸಿದ್ದಾರೆ. ಇವರೆಲ್ಲರೂ ದಲಿತರಾಗಿದ್ದು ಸಮಾಜದಲ್ಲಿ ಬದುಕಲು ಅವರು ಹೆಜ್ಜೆ ಹೆಜ್ಜೆಗೂ ಅನುಭವಿಸಿದ ನೋವಿನ ಚಿತ್ರಣ ಆತ್ಮಕಥೆಗಳಲ್ಲಿದೆ. ಇವರೆಲ್ಲರೂ ಅಸ್ಪೃಶ್ಯತೆಯ ನೋವನ್ನು ಅನುಭವಿಸಿದವರು ಹಾಗೂ

ಆ ಕಾಲಕ್ಕೆ ಹುಟ್ಟಿದ ದಲಿತ ಸಂಘರ್ಷ ಸಮಿತಿಯ ಹುಟ್ಟು ಬೆಳವಣಿಗೆಯಲ್ಲಿದ್ದು ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು ಡಾ.ಸಿದ್ಧಲಿಂಗಯ್ಯನವರು. ಅವರದು ಹೋರಾಟದ ಬದುಕು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದು ನಗರ ಪ್ರದೇಶದಲ್ಲಿ ಬದುಕನ್ನು ಕಟ್ಟಿಕೊಳ್ಳಲು ಹವಣಿಸಿದ ರೀತಿಯೇ ನಿರಂತರ ಹೋರಾಟವಾಗಿತ್ತು. ಅವರು ಚಿಕ್ಕಂದಿನಲ್ಲಿಯೇ ಹೋರಾಟಗಳ ಬದುಕನ್ನು ರೂಢಿಸಿಕೊಂಡವರು. ಅವರು ಓದಿದ ಅಂಬೇಡ್ಕರ್ ಚಿಂತನೆಗಳು, ಹೋರಾಟಗಳು, ಕುವೆಂಪು ಅವರ ಪ್ರತಿಭಟನಾ ಸಾಹಿತ್ಯ ಎಲ್ಲವೂ ಅವರಲ್ಲಿ ಹೋರಾಟದ ಮನೋಭಾವವನ್ನು ಹುಟ್ಟುಹಾಕಿದವು. ಜೊತೆಗೆ ಬಡತನ, ತಂದೆ ತಾಯಿ ಕೂಲಿ ಮಾಡಿ ತಮ್ಮ ಮಕ್ಕಳನ್ನು ಸಲಹುತ್ತಿದ್ದ ರೀತಿಯನ್ನು ಅರ್ಥೈಸಿಕೊಂಡು ವಿದ್ಯಾರ್ಥಿ ದೆಸೆಯಲ್ಲಿಯೇ ತಣ್ಣಗಿದ್ದ ಅವರೊಳಗಿದ್ದ ಪ್ರತಿಭಟನೆ ನಿಧಾನವಾಗಿ ಕಾಣಿಸಲು ತೊಡಗುತ್ತದೆ. ಅವೆಲ್ಲವೂ ಕಾವ್ಯದ ರೂಪ ಪಡೆದು ಅವರ ಹಾಡುಗಳೇ ಹೋರಾಟಕ್ಕೆ ಶಕ್ತಿಯಾಗುತ್ತವೆ. 'ನಾನು ಸಿರಿವಂತರಂತೆ ಕಾಣದೆ ಸಾಮಾನ್ಯ ಮನುಷ್ಯರ ಜೊತೆಗಿರುವಂತೆ ಮಾಡಿದ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುತ್ತಾರೆ. ಅವರು ಊರುಕೇರಿ ಮೂರು ಭಾಗಗಳಲ್ಲಿಯೂ ವಿಭಿನ್ನತೆಗಳಿವೆ. ಸಮಾಜದ ನಡುವಿನ ಬದುಕು ಅವರದಾಗಿರುವುದರಿಂದ ವೈಯಕ್ತಿಕ ಬದುಕಿನ ಚಿತ್ರಣವಾಗದೆ ಸಂಘರ್ಷದ ಬದುಕಿನ ಚಿತ್ರಣವಾಗಿ ಅವರ ಆತ್ಮಕಥನ ಊರುಕೇರಿಯಲ್ಲಿ ಮೂಡಿಬಂದಿದೆ. ಅವರೇ ಹೇಳುವ ಹಾಗೆ ಊರುಕೇರಿಯ ಮೂರು ಭಾಗಗಳಲ್ಲಿ ನಾನು ನೆಪಕ್ಕಾಗಿ ಇದ್ದರೂ, ನಾನು ಭೇಟಿ ಮಾಡಿದ ಜನ, ನೋಡಿದ ಘಟನೆಗಳು, ನನಗೆ ಸಹಾಯ ಮಾಡಿದವರು ನನ್ನನ್ನು ಪ್ರೀತಿಯಿಂದ ಕಂಡವರು ಇಲ್ಲಿ ಅಕ್ಷರ ರೂಪ ಪಡೆದಿದ್ದಾರೆ. ನನ್ನ ಬದುಕು ಕೃತಜ್ಞತೆಯ ಸಮುದ್ರವೆಂದರೂ ಸಾಲದು. ಹಲವರು ಒತ್ತಾಸೆ ಕರುಣೆ ಮಾನವೀಯತೆಯಿಂದ ನಾನು ನಾಲ್ಕು ಜನರ ಕಣ್ಣಿಗೆ ಬಿದ್ದೆ. ನನ್ನನ್ನು ಬೆಳೆಸಿದವರು, ನನಗೆ ಮಾರ್ಗದರ್ಶನ ಮಾಡಿದವರು ನನ್ನ ಮನಸ್ಸಿನಿಂದ ಎಂದೂ ಮಾಸಿ ಹೋಗಲಾರರು' (ಊರುಕೇರಿ ಭಾಗ–೩ ರ. ಮುನ್ನುಡಿಯಿಂದ) ಪ್ರತಿಯೊಬ್ಬರದೂ ಕೃತಜ್ಞತೆಯ ಬದುಕು, ತಂದೆ ತಾಯಿ ಗುರುಗಳು, ಮಾರ್ಗದರ್ಶಕರು ಎಲ್ಲರನ್ನು ಇಲ್ಲಿನ ಆತ್ಮಕಥೆಗಳು ನೆನಪಿಸುತ್ತವೆ.

ಎಲ್ಲಾ ಆತ್ಮಕಥೆಗಳು ಪ್ರಮುಖವಾಗಿ ಹಸಿವು, ಬಡತನದೊಂದಿಗೆ ಜಾತೀಯತೆ ಮತ್ತು ಅಸ್ಪೃಶ್ಯತೆಯ ಚಿತ್ರಣವನ್ನು ನೀಡುತ್ತವೆ. 'ಗೌರ್ಮೆಂಟ್ ಬ್ರಾಹ್ಮಣದಲ್ಲಿ ಲೇಖಕರು ಹೇಳುವಂತೆ 'ಮಾನವ ಸಮಾಜದಲ್ಲಿ ಮನುಷ್ಯ ಸಂಬಂಧಗಳೆಲ್ಲ ಸತ್ತು ಹೋಗಿವೆ. ಸರಕಾರದ ಮೀಸಲಾತಿ ದೊರೆಯುತ್ತಿದ್ದುದರಿಂದ ಅವರೆಲ್ಲ ಗೌರ್ಮೆಂಟ್ ಬ್ರಾಹ್ಮಣ'ರಾಗುತ್ತಿದ್ದರು. ಈ ಶೀರ್ಷಿಕೆಯೇ ಕೆಲವರನ್ನು ಆಕರ್ಷಿಸಿದರೆ ಮತ್ತೆ ಕೆಲವರನ್ನು ಕುಹಕದಿಂದ ನೋಡುವಂತೆ ಮಾಡುತ್ತದೆ. ಸರಕಾರದ ಸಹಾಯ ಪಡೆಯುವವರನ್ನು ಅವರಿಗಿದ್ದ ಮೀಸಲಾತಿಯ ಅನುಷ್ಠಾನವನ್ನು ಕಂಡು ಅವರೆಲ್ಲರೂ ಸರ್ಕಾರದ ಮಕ್ಕಳು ಎಂಬಂತೆ ಹೇಳುತ್ತಿದ್ದರು. ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವರು ಎಂಬ ಆಲೋಚನೆಯನ್ನು ಮಾಡದ ಜನ ಅವರನ್ನು ಸರ್ಕಾರದ ಸವಲತ್ತುಗಳನ್ನು ಪಡೆಯುತ್ತಿರುವುದರಿಂದ 'ಗೌರ್ಮೆಂಟ್ ಮಕ್ಕಳು' ಎಂದು ಕರೆದು ಹೀಯ್ಯಾಳಿಸುತ್ತಿದ್ದರು ಎನ್ನುವುದನ್ನು ಆತ್ಮಕಥನದಲ್ಲಿ ಕಾಣಬಹುದು.

'ಮಣೆಗಾರ' ಕೃತಿಯು ಇದಕ್ಕೆ ಹೊರತಾಗಿಲ್ಲ. ಈ ಆತ್ಮಕಥೆಯು ಸಾಂಸ್ಕೃತಿಕವಾಗಿ ಉತ್ತಮವಾದ ಆತ್ಮಕಥೆ. ಇದರಲ್ಲಿ ಲೇಖಕರು ಹೆಚ್ಚಾಗಿ ಸಮುದಾಯದಲ್ಲಿನ ಕಲೆಗಳ ಮಹತ್ವವನ್ನು ಹೇಳುತ್ತಾರೆ. ಅದರಲ್ಲಿಯೂ ದಲಿತರ ಕಲೆಗಳಾದ 'ತಮಟೆ' ಎಲ್ಲರಿಗೂ ಎಲ್ಲಾ ಕಾಲಕ್ಕೂ ಮಹತ್ವವನ್ನು ಪಡೆದುಕೊಂಡಿದೆ. ದಲಿತರಲ್ಲಿನ ವಿಶೇಷವಾದ ಕಲೆಗಳು ಗ್ರಾಮೀಣ ಬದುಕಿನಲ್ಲಿ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು. 'ಸಂಭೋಳಿ' ಕಥನವು ದಲಿತ ಸಮುದಾಯದ ನೋವು ಅವರ ಮೇಲೆ ನಡೆಯುತ್ತಿದ್ದ ಅಮಾನವೀಯತೆಯನ್ನು ಹೇಳುತ್ತದೆ. ಈ ಶೀರ್ಷಿಕೆಯೇ ದಲಿತರ ಇತಿಹಾಸವನ್ನು ಅವರು ಅದರಲ್ಲಿ ಅನುಭವಿಸುವ ನೋವನ್ನು ಚಿತ್ರಿಸುತ್ತದೆ. ಸಂಭೋಳಿ ದಲಿತರೆಲ್ಲರ ಸಂಕೇತವಾಗಿದೆ. ದಲಿತರ ಆಸ್ಮಿತೆಯೇ ಸಂಭೋಳಿಯಾಗಿದೆ. ಈ ಪದವನ್ನು ತಮ್ಮ ಶೀರ್ಷಿಕೆಯಲ್ಲಿ ತಂದಿರುವುದು ಲಕ್ಷಣ್ ಅವರ ವಿಶಿಷ್ಟ ವ್ಯಕ್ತಿತ್ವ. ಸಂಭೋಳಿಯ ಕೋಲನ್ನು ಹಿಡಿದು ಸಾಗುವ ಸ್ಥಿತಿ ಇಂದಿಗೂ ಇದೆ. ಅದು ಬೇರೆಯವರಿಗೆ ಕಾಣಿಸದಿದ್ದರೂ ಅದು ಅವರ ನಡವಳಿಕೆಯಲ್ಲಿ ಗೋಚರಿಸುತ್ತದೆ. ಏಕೆಂದರೆ ದಲಿತರು ಈಗಲೂ ಅಸ್ಪೃಶ್ಯತೆಯ ಅಮಾನವೀಯವಾದ ನಡವಳಿಕೆಗೆ ಒಳಗಾಗುತ್ತಿರುವ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಅಕ್ಷರ ವಂಚಿತರು ಅನುಭವಿಸುತ್ತಿದ್ದ ನೋವು ಒಂದು ಕಡೆಯಾದರೆ ಅಕ್ಷರ ಜ್ಞಾನಪಡೆದವರದು ಮತ್ತೊಂದು ಸ್ಥಿತಿಯಾಗಿದೆ.

'ಈಗೇನ್ ಮಾಡೀರಿ' ಆತ್ಮಕಥನವೂ ಇದೇ ಆಶಯವನ್ನು ಹೊಂದಿದೆ. ದಲಿತರಾದದ್ದು ಒಂದು ಇಕ್ಕಟಿನ ಸಂದರ್ಭವಾದರೆ ನಂಬಿಕೆ, ಮಾನವೀಯತೆಗಳಿಂದ ಅವರನ್ನೆಲ್ಲಾ ಕಾಣದಿರುವುದು ಸಹ ಮತ್ತೊಂದು ಅಮಾನವೀಯತೆಯಾಗಿದೆ. ಇಲ್ಲಿರುವ ಚಿತ್ರಣವು ಬೇರೆ ಬೇರೆ ದಿಕ್ಕಿನತ್ತ ಸಾಗುವ ದಲಿತರ ಬದುಕನ್ನು ಚಿತ್ರಿಸಿದೆ. ಮಾಡದಿರುವ ತಪ್ಪನ್ನು ಜನರೆಲ್ಲ ಅವರ ಮೇಲೆ ಹೊರಿಸಿದಾಗ ಅನುಭವಿಸಬೇಕಾದ ಹಾಗೂ 'ಮನವಿಲ್ಲದವರ ಮಧ್ಯೆ' ಬದುಕಬೇಕಾದ ಸ್ಥಿತಿಗೆ ಅವರು ತಲುಪಿದ್ದರು. ಗೋವಿಂದರಾಜು ಮನುಷ್ಯನೇ ಅಲ್ಲ ಮೃಗನೆಂದು ತನ್ನ ಹೆಂಡತಿಯನ್ನು ತಂದೆ, ತಾಯಿ, ತಮ್ಮ, ತಂಗಿಯೊಂದಿಗೆ ಸೇರಿ ಹೊಡೆದು ಸಾಯಿಸಿ ಸುಟ್ಟು ಹಾಕಿದ್ದಾನೆ ಎಂದು ಇಡೀ ಊರಿನ ಜನ ಅವರನ್ನು ಹೀಯ್ಯಾಳಿಸುವಾಗ ಏನೂ ಮಾತಾಡದೆ ನಿಲ್ಲುತ್ತಾರೆ. ಅವರಿಗೆ ತಂದೆ ತಾಯಿಯ ಸ್ಥಿತಿಗೆ ನೋವಾಗುತ್ತದೆ. ಜೈಲಿನಲ್ಲಿರುವಾಗ, ಎಲ್ಲರ ನಿಂದನೆಗಳು, ಅವಮಾನಗಳನ್ನು ಸಹಿಸಿ ಬಿಡುಗಡೆಯಾಗಿ ಮತ್ತೆ ಊರಿಗೆ ಬಂದು ಅದೇ ಮನೆಯಲ್ಲಿ ವಾಸಿಸುವ ಅವರಲ್ಲಿ ಇದ್ದದ್ದು ಒಂದೇ ಆಲೋಚನೆ 'ನಾನು ತಪ್ಪು ಮಾಡಿಲ್ಲ' ವೆಂಬುದಾಗಿತ್ತು. ಆದರೆ ದಲಿತರಲ್ಲಿನ ಮತ್ತೊಂದು ಸ್ಥಿತಿ ಇದಾಗಿದೆ. ಹಾಗಯೇ ಛಲದ ಬದುಕಿಗೆ ಉದಾಹರಣೆಗಾಗಿ ಈ ಆತ್ಮಕಥನವಿದೆ. 'ಮಾತಂಗಿ ದೀವಟಿಗೆ" ಆತ್ಮಕಥನವು ಸಮಾಜ ಮತ್ತು ಸಮುದಾಯದ ಚಿತ್ರಣವನ್ನು ನೀಡುತ್ತದೆ. ಇದರಲ್ಲಿ ದಲಿತ ಮಹಿಳೆಯರ ನೋವಿನ ಕಥನವಿದೆ. ಬದುಕಿಗೆ ಹಂಬಲಿಸುವ ಹಾಗೂ ತನ್ನ ಮನೆ ಮಕ್ಕಳು ಎಂದು ಅವರ ಅಭಿವೃದ್ಧಿಗಾಗಿ ಶ್ರಮಿಸುವ ಚಿತ್ರಣವಿದೆ. 'ಒಂಟಿಕಾಲಿನ ನಡಿಗೆ' ಯು ದಲಿತರ ಬದುಕಿನ ವಿವಿಧ ಅವಸ್ಥಾಂತರಗಳನ್ನು ಹೇಳುತ್ತದೆ. ಎಲ್ಲರದು ಬದುಕು. ಆದರೆ ಅದನ್ನು ಕಟ್ಟಿಕೊಳ್ಳುವಲ್ಲಿ ಅವರ ಬವಣೆಗಳನ್ನು ಹೇಳುತ್ತಾ ಹೋಗುತ್ತದೆ.

ಒಟ್ಟಿನಲ್ಲಿ ಕನ್ನಡ ದಲಿತ ಆತ್ಮಕಥೆಗಳೆಲ್ಲ ಸಂಘರ್ಷದ ಬದುಕಿನಲ್ಲೇ ಸಾಗುತ್ತವೆ. ಅವರೆಲ್ಲರ ಜೀವನವು ಸಮಾಜದಲ್ಲಿ ಅವರ ಗುರುತಿಸುವಿಕೆಯ ಹಾದಿಯಲ್ಲಿ ಸಾಗಿಬಂದಿದೆ. ಹಲವರ ಪ್ರೀತಿ ಕರುಣೆ, ಒತ್ತಾಸೆ, ಬೆಂಬಲ ಪ್ರೋತ್ಸಾಹಗಳೊಂದಿಗೆ ಕೃತಜ್ಞತೆಯನ್ನು ಜೊತೆಯಾಗಿಸಿಕೊಂಡು ಅವರು ಸಾಗಿದ್ದಾರೆ. ಅವರೆಲ್ಲರ ಬದುಕಿನ ಮುಂದುವರಿಕೆಗೆ ಕಾರಣವಾದವರನ್ನು ಸ್ಮರಿಸುವುದನ್ನೂ ಮರೆತಿಲ್ಲ. ದಲಿತರಾದ ಇವರಿಗೆ ಸಮಾಜದ ಬಗೆಗೆ ಹಾಗೂ ದಲಿತ ಸಮುದಾಯದ ಬಗೆಗೆ ಈಗಲೂ ಕಾಳಜಿಯಿದೆ. ನೊಂದ ನೋವನ್ನು ಮರೆತಿಲ್ಲ. ಬೇರೆಯವರ ನೋವಿಗೆ ಸ್ಪಂದಿಸುವುದನ್ನು ಬಿಟ್ಟಿಲ್ಲ. 'ನೊಂದ ನೋವ ನೋಯದವರೆತ್ತ ಬಲ್ಲರು' ಎಂಬಂತೆ ಇವರೆಲ್ಲರೂ ದಲಿತ ಸಮುದಾಯಕ್ಕೆ ಸ್ಪಂದಿಸುತ್ತಿದ್ದಾರೆ. ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರ ವಿಚಾರಗಳನ್ನು ಮುಂದುವರೆಸುತ್ತಾ, ಎಲ್ಲರಿಗೂ ಅವರನ್ನು ಪರಿಚಯಿಸುತ್ತಾ ಸಾಗುತ್ತಿದ್ದಾರೆ. ಬಾಬಾಸಾಹೇಬರ ಕನಸು ನನಸು ಮಾಡುವ ಭವಿಷ್ಯದ ಕನಸು ಇವರಿಗಿದೆ. ಅಧಿಕಾರ, ಆಡಳಿತದ ಅವಕಾಶವನ್ನು ಪಡೆಯುವ ಅವರದು ವಿಭಿನ್ನ ಚಿಂತನೆಯಾಗಿದೆ. ಅಂದು 'ಜಾತಿಯಾಧಾರಿತ ರಾಜಕೀಯ ಕಲ್ಪನೆ ಜನಾಂಗದ ಅಭಿವೃದ್ಧಿಯಲ್ಲಿ ಸೇರಿತ್ತು. ಆದರೆ ಇಂದು ಜಾತಿಯನ್ನಿಟ್ಟುಕೊಂಡು ರಾಜಕೀಯ ನಾಯಕರು ಪಕ್ಷಗಳಲ್ಲಿ ಮಂತ್ರಿಗಳಾಗಿದ್ದಾರೆ. ಜನಾಂಗದ ಅಭಿವೃದ್ಧಿಕಾರ್ಯಗಳು ಎಷ್ಟು ನಡೆಯುತ್ತಿವೆ ಎಂಬುದನ್ನು ತಿಳಿಯಬೇಕು. ಇದಕ್ಕೆ ಎಲ್ಲರ ಸಹಕಾರಬೇಕು. ಎಲ್ಲರೂ ಜಾತಿಭೇದವನ್ನು ಒಳಪಂಗಡಗಳ ಚಿಂತನೆಯನ್ನು ಬಿಟ್ಟು ಎಲ್ಲರೂ ಒಂದೇ ಎಂಬ ಭಾವವನ್ನು ವ್ಯಕ್ತಪಡಿಸಬೇಕು. ಆಗ ಸಮಾಜ ಮತ್ತು ಸಮುದಾಯಗಳು ಸಮ ಸಮಾಜದಲ್ಲಿ ಮುಂದೆ ಸಾಗುತ್ತವೆ.

ಬುದ್ಧ, ಬಸವ, ಅಂಬೇಡ್ಕರ್ ಅವರು ಸಮಾನತೆಯ ತತ್ವ ಮತ್ತು ಸಿದ್ಧಾಂತಗಳ ನೆಲೆಯಲ್ಲಿ ಹೋರಾಟ ಮಾಡಿದವರು. ಸಮಾಜದ ಅಭಿವೃದ್ಧಿಯಾಗಬೇಕಾದರೆ ಜಾತಿ ನಿರ್ಮೂಲನೆಯಾಗಬೇಕು. 'ಮನುಷ್ಯರೆಲ್ಲರೂ ಒಂದೇ' ಎಂಬ ಭಾವನೆಯಲ್ಲಿ ಬದುಕಬೇಕು. ಚಾತುರ್ವರ್ಣ ಪದ್ಧತಿಯು ನಮ್ಮ ದೇಶದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿರುವುದರಿಂದ ನಮ್ಮ ಸಮಾಜದಲ್ಲಿ ಸಮಾನತೆ ಸಾಧ್ಯವಾಗಿಲ್ಲ. ಯಾರೂ ಜಾತಿಯಿಂದ ವ್ಯಕ್ತಿಗೆ ಮಹತ್ವವನ್ನು ಕೊಡಬಾರದು. ವ್ಯಕ್ತಿಯನ್ನು ಗೌರವಿಸಬೇಕು ಎಂಬುದು ಬುದ್ಧ ಮತ್ತು ಬಸವಣ್ಣನವರ ಆಲೋಚನೆಯಾಗಿತ್ತು. ಅಂಬೇಡ್ಕರ್ ಅವರು ಅದನ್ನು ಮುಂದುವರೆಸಿ ಸಾಮಾಜಿಕ ಬದಲಾವಣೆಯಾಗಬೇಕು ಎಂದರೆ ಶಿಕ್ಷಣವನ್ನು ಕಲಿಯಬೇಕು. ಅದರಿಂದ ಅವರಲ್ಲಿ ಜಾಗೃತಿಯುಂಟಾಗಿ ಜನಾಂಗದ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂಬ ಅಭಿಪ್ರಾಯ ಹೊಂದಿದ್ದರು. ರಾಜಕೀಯ ಅಧಿಕಾರ ದಲಿತರಿಗೆ ದೊರೆತಾಗ ಅವರ ಬದುಕಿನಲ್ಲೂ ಭರವಸೆಯ ಜ್ಞಾನದ ಜ್ಯೋತಿ ಬೆಳಗುತ್ತದೆ ಎಂದು ಯೋಚಿಸಿದ್ದರು. ನಿರಂತರವಾದ ಶ್ರಮ ಅವರನ್ನು ಈ ಹಂತಕ್ಕೆ ತಂದು ನಿಲ್ಲಿಸಿತ್ತು. ಅಂಬೇಡ್ಕರ್ ಅವರ ಚಿಂತನೆಗಳಿಂದ ಪ್ರಭಾವಿತರಾಗಿ ಅವರನ್ನೇ ಕುರಿತು ಬರೆದ ಕವಿತೆ

> 'ನಾಡನಡುವಿನಿಂದ ಸಿಡಿದ ನೋವಿನ ಕೂಗೆ
> ಆಕಾಶದ ಅಗಲಕ್ಕೂ ನಿಂತ ಆಲವೆ.
> ಕೋಟಿ ಕೋಟಿ ಕಪ್ಪು ಜನರ ಮೊಟ್ಟ ಮೊದಲ ಮಾತೆ

ನೀರಿನಾಚೆ ಮೋಡದಾಚೆ ಮೊಳಗಿದಂತ ಘೋಷವೆ
ಮಲಗಿದ್ದವರ ಕೂರಿಸಿದೆ ನಿಲಿಸುವವರು ಯಾರೋ
ಛಲದ ಜೊತೆಗೆ ಬಲದ ಪಾಠ ಕಲಿಸುವವರು ಯಾರೋ?'

ಎಂಬ ಅಂಬೇಡ್ಕರ್ ಅವರ ಬಗೆಗಿನ ಕವಿತೆಯು ಹುಟ್ಟಿಕೊಂಡಿತು. ದಲಿತ ಸಮಾಜ ಬದಲಾವಣೆಗಾಗಿ ಹಂಬಲಿಸುತ್ತಿತ್ತು. ಎಲ್ಲರ ಹೋರಾಟಗಳನ್ನು ಕಂಡು ಅವರು ಕಟ್ಟಿದ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಂಬೇಡ್ಕರ್ ಅವರ ಚಿಂತನೆಯಲ್ಲಿ ಎಲ್ಲವೂ ನಡಿದಿತ್ತು. ಇಲ್ಲಿನ ಜನರನ್ನು ಕುರಿತು ಕುವೆಂಪು ಅವರು ಹೇಳಿದ

ಇಲ್ಲಿ ಯಾರೂ ಮುಖ್ಯರಲ್ಲ
ಯಾರೂ ಅಮುಖ್ಯರಲ್ಲ.
ಯಾವುದೂ ಯಃಕಶ್ಚಿತವಲ್ಲ !
ಇಲ್ಲಿ ಯಾವುದಕ್ಕೂ ಮೊದಲಿಲ್ಲ;
ಯಾವುದಕ್ಕೂ ತುದಿಯಿಲ್ಲ;
ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ
ಕೊನೆ ಮುಟ್ಟುವುದೂ ಇಲ್ಲ !
ಇಲ್ಲಿ ಅವರ ಸಾವೂ ಸಾವಧಾನದ ಬೆನ್ನೇರಿದ !
ಇಲ್ಲಿ ಎಲ್ಲಕ್ಕೂ ಇದೆ ಅರ್ಥ ;
ಯಾವುದೂ ಅಲ್ಲ ವ್ಯರ್ಥ ;
ನೀರೆಲ್ಲವೂ ತೀರ್ಥ.

ಇದು ಎಲ್ಲ ಸಂದರ್ಭಕ್ಕೂ ಸಲ್ಲುವ ಕಾವ್ಯ ಆಗಿದೆ. ಸಾಹಿತ್ಯದ ವಿವಿಧ ಕ್ಷೇತ್ರದ ಜ್ಞಾನಶಿಸ್ತುಗಳಲ್ಲಿ ಆತ್ಮಕಥೆಗಳು ಅಸ್ತಿತ್ವವನ್ನು ಉಳಿಸಿಕೊಂಡು ವಿಸ್ತಾರವಾಗಿ ಬೆಳೆಯುತ್ತಿವೆ. ಎಲ್ಲಾ ಕಾಲದ ಸ್ಥಿತ್ಯಂತರಗಳನ್ನು ಆತ್ಮಕಥೆಗಳಲ್ಲಿ ಕಾಣಬಹುದಾಗಿದೆ. 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂಬ ಅಂಬೇಡ್ಕರ್ ಅವರ ವಾಣಿಯಂತೆ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಬದುಕಬೇಕಾಗುತ್ತದೆ. ಹಾಗೆಯೇ ಅವರು ಸಮಾಜ, ಜನಾಂಗ, ಸಮುದಾಯ ಎಲ್ಲದರ ಆಲೋಚನೆಯನ್ನು ಉಳಿಸಿಕೊಳ್ಳಬೇಕು. ಪ್ರತಿಯೊಬ್ಬರು ಸಮಾಜದ ಅಭಿವೃದ್ಧಿಯೊಂದಿಗೆ ಸಾಗಬೇಕಾಗುತ್ತದೆ.

## ಮೂಲ ಆಕರಗಳು :

### ಆತ್ಮಕಥೆಗಳು


1. ಗೌರ್ಮೆಂಟ್ ಬ್ರಾಹ್ಮಣ – ಪ್ರೊ.ಅರವಿಂದ ಮಾಲಗತ್ತಿ, ಚೇತನ ಬುಕ್ ಮೈಸೂರು – 1994
2. ಊರುಕೇರಿ ಭಾಗ 1 – ಡಾ.ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ – 1996

   ಊರುಕೇರಿ ಭಾಗ 2– ಡಾ.ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ – 2006

   ಊರುಕೇರಿ ಭಾಗ 3– ಡಾ.ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ. – 2018
3. ಮಣೆಗಾರ – ತುಂಬಾಡಿ ರಾಮಯ್ಯ, ತುಂಬಾಡಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್, ತುಮಕೂರು– 1999

   ಮುತ್ತಿನಜೋಳ – ತುಂಬಾಡಿ ರಾಮಯ್ಯ, ಬೋಧಿಶ್ರೀ, ಪ್ರಕಾಶನ, ತುಮಕೂರು–2007
4. ಮನವಿಲ್ಲದವರ ಮಧ್ಯೆ – ಕೆ,ಗೋವಿಂರಾಜು, ಕಿಟಕಿ ಪ್ರಕಾಶನ ಮೈಸೂರು–2000
5. ಈಗೇನ್ ಮಾಡೀರಿ ? – ದು. ಸರಸ್ವತಿ, ಮಾನಸ, ಬೆಂಗಳೂರು – 2001
6. ಸಂಭೋಳಿ – ಲಕ್ಷಣ್, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ–2003
7. ಮಾತಂಗಿ ದೀವಟಿಗೆ – ಸಮತಾ ದೇಶಮಾನೆ, ಅನ್ನಪೂರ್ಣ ಪಬ್ಲಿಷಿಂಗ್, ಬೆಂಗಳೂರು–2015
8. ಒಂಟಿಕಾಲಿನ ನಡಿಗೆ – ಡಾ. ಎಲ್. ಹನುಮಂತಯ್ಯ. ಚಾರುಮತಿ ಪ್ರಕಾಶನ, ಬೆಂಗಳೂರು–2015

# ಆಧಾರ ಗ್ರಂಥಗಳು


1. ದಲಿತಯುಗ ಮತ್ತು ಕನ್ನಡ ಸಾಹಿತ್ಯ – ಪ್ರೊ. ಅರವಿಂದ ಮಾಲಗತ್ತಿ. ಚೇತನ ಬುಕ್ ಹೌಸ್. ಮೈಸೂರು, 1999
2. ಪ್ರೊ. ಬಿ. ಕೃಷ್ಣಪ್ಪ ಚಳುವಳಿಗಳು ಮತ್ತು ಬರಹಗಳು – ಪ್ರೋ. ಬಿ. ಕೃಷ್ಣಪ್ಪ. ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್ (ರಿ), ಬೆಂಗಳೂರು– 2000
3. ದಲಿತ ಚಿಂತನೆ – ಸಂ : ಮೊಗಳ್ಳಿ ಗಣೇಶ್ – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2002.
4. ಸಂಘರ್ಷ ಅಂಬೇಡ್ಕರ್ ಜೀವನ – ಸಾಧನೆ. ಸಂಗ್ರಹ : ಮಂಗ್ಳೂರ ವಿಜಯ. ಸಂಬುದ್ಧ ಪ್ರಕಾಶನ ಬೆಂಗಳೂರು. 2002.
5. ದಲಿತ ಮಾರ್ಗ – ಸಂ. ಡಾ. ಅರವಿಂದ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2002
6. ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ – ಡಾ. ಅರವಿಂದ ಮಾಲಗತ್ತಿ ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು, 2003.
7. ದಲಿತ ಸಂವೇದನೆ ಸಂಗ್ರಹ ಲೇಖನಗಳು – ರಂಗರಾಜ ವನದುರ್ಗ, ಸಿವಿಜಿ ಪಬ್ಲಿಕೇಷನ್ಸ್, 2004
8. ಬಂಡಾಯ–ದಲಿತ ಚಳುವಳಿ ಮತ್ತು ಸಾಹಿತ್ಯ – ಪುರುಷೋತ್ತಮ ಬಿಳಿಮಲೆ. ಅಭಿನವ, ಬೆಂಗಳೂರು, 2005.
9. ಮೊದಲ ತಲೆಮಾರಿನ ದಲಿತ ಸಾಹಿತಿಗಳು, (ಸಂ.) ಡಾ. ಎಂ.ಎಸ್. ಶೇಖರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, 2006.
10. ಕನ್ನಡ ಸಾಂಸ್ಕೃತಿಕ ಲೋಕ, ಡಾ. ಶಿವರಾಮ ಅಸುಂಡಿ, ಸಚಿನ್ ಪಬ್ಲಿಷರ್ಸ್, 2007
11. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ – ಡಾ. ಜಿ. ನಾರಾಯಣ ಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2008
12. ದಲಿತ ಸಾಹಿತ್ಯ ಚಳುವಳಿ – ಸಂ : ಡಾ. ಮಲ್ಲಿಕಾ ಘಂಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. 2008
13. ವಕಾಲತ್ತು – ಸಂ.ಡಾ.ಎಂ.ನಾಗರಾಜು, ನಿರಂತರ; ವಿಜಯನಗರ, ಬೆಂಗಳೂರು–2009
14. ಮಹಾರಾಷ್ಟ್ರ ದಲಿತ ಚಳುವಳಿಗಳು –ಕೆ.ಎಸ್. ಹೆಗಡೆ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು, 2010.
15. ಅಂಬೇಡ್ಕರ್ ವಾದ ಮತ್ತು ಪ್ರಸ್ತುತ ದಲಿತರು – ಡಾ. ಎನ್. ಚಿನ್ನಸ್ವಾಮಿ ಸೋಸಾಲೆ, ಸಪ್ನ ಬುಕ್ ಹೌಸ್, ಬೆಂಗಳೂರು, 2012.
16. ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ – ಡಾ. ಶಿವಕುಮಾರ, ಸುಮೇದ, ಪ್ರಕಾಶನ, ಗುಲ್ಬರ್ಗಾ, 2012.
17. ಜಾಗತೀಕರಣ ಮತ್ತು ದಲಿತರು – ಡಾ. ಆನಂದ್ ತೇಲ್ತುಂಬ್ಡೆ. ಅನು : ನಾ. ದಿವಾಕರ, ಲಡಾಯಿ ಪ್ರಕಾಶನ, ಗದಗ, 2013.

18. ದಲಿತರು : ಭೂತ ಭವಿಷ್ಯ – ಸಂ : ಡಾ. ಎಚ್. ಎಸ್. ಅನುಪಮಾ, ಬಸೂ. ಲಡಾಯಿ ಪ್ರಕಾಶನ, ಗದಗ, 2013.
19. ದಲಿತ ಸಾಹಿತ್ಯ ದರ್ಶನ – ಸಂ.ಡಾ. ವಿ.ಮುನಿವೆಂಕಟಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2014
20. ದಲಿತ ಸಮಾಜ ಇಂದಿನ ಸವಾಲುಗಳ – ಹಿಂದಿ ಮೂಲ ಡಾ. ಜೆಯಾಲಾಲ ಆರ್ಯ. ಕನ್ನಡಕ್ಕೆ ಆರ್.ಪಿ. ಹೆಗಡೆ. ಲಡಾಯಿ ಪ್ರಕಾಶನ, ಗದಗ, 2014.
21. ಡಾ. ಬಾಬಾಸಾಹೇಬ್ ಜೀವನ ಮತ್ತು ಜೀವನ ಧ್ಯೇಯ – ಇಂಗ್ಲೀಷ್ ಮೂಲ : ಧನಂಜಯ್ ಕೀರ್, ಕನ್ನಡ : ಎಂ.ಎಸ್. ಮಾಧವರಾವ್, ಸಂ.ಡಿ.ಕೆ. ಕುಮಾರಯ್ಯ. ಗೋಕುಲ್ ಪ್ರಕಾಶನ, ಹಾಸನ ಜಿಲ್ಲೆ, 2014.
22. ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, 2014
23. ಜಾತಿ ಮೀಮಾಂಸೆ – ಮೊಗಳ್ಳಿ ಗಣೇಶ್, ಅಭಿನವ, ಬೆಂಗಳೂರು, 2015.
24. ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು – ದೇವಯ್ಯ ಹರವೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2015.
25. ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು – ಡಾ. ಎನ್. ಚಿನ್ನಸ್ವಾಮಿ ಸೋಸಾಲೆ. ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 2015.
26. ಅಂಬೇಡ್ಕರ್ ಸ್ಮೃತಿ – ಸಂಸ್ಕೃತಿ, ಇಂಗ್ಲೀಷ್ : ನಾನಕ್‌ಚಂದ್ ರತ್ತು, ಕನ್ನಡಕ್ಕೆ : ರಾಹು, ಸುಮೇಧ ಪ್ರಕಾಶನ, ಕಲಬುರ್ಗಿ, 2015
27. ದಲಿತ ಸಾಹಿತ್ಯ ಸಾಂದಯ್ಯ ಪ್ರಜ್ಞೆ – ಮರಾಠಿ ಡಾ.ಶರಣ ಕುಮಾರ್ ಲಿಂಬಾಳೆ – ಕನ್ನಡಕ್ಕೆ ಡಾ. ವಿಠಲ್ ರಾವ್. ವಿ .ಗಾಯಕವಾಡ್, ಯಾಜಿ ಪ್ರಕಾಶನ, ಹೊಸಪೇಟೆ, 2016
28. ದಲಿತ ಸಂವೇದನೆ – ಅಪ್ಪಗೆರೆ ಸೋಮಶೇಖರ್, ಲಡಾಯಿ ಪ್ರಕಾಶನ, ಗದಗ, 2016.
29. ಕರ್ನಾಟಕ ಸಮಗ್ರ ದಲಿತ ಚರಿತ್ರೆ – ಸಂಪಾದಕರು – ರಚನೆ – ಡಾ. ಎನ್.ಚಿನ್ನಸ್ವಾಮಿ ಸೋಸಾಲೆ. ನವಕರ್ನಾಟಕ ಪ್ರಕಾಶನ, 2016.
30. ಕರ್ನಾಟಕ ಸಬಾಲ್ಟ್ರನ್ ಓದುಮಾಲಿಕೆ, **ದಲಿತ ನೋಟ** ಸಂಪುಟ–2 –ಯೋಜನಾ ಸಂಪಾದಕರು – ಡಾ. ಮೇಟಿ ಮಲ್ಲಿಕಾರ್ಜುನ. ಸಂ : ಡಾ. ಡೊಮಿನಿಕ, ಡಿ. ಡಾ.ಬಿ.ಎಲ್. ರಾಜು, ಕರ್ನಾಟಕ ಸಾಹಿತ್ಯ ಅಕಾಡೆಮಿ, 2017
31. ದಲಿತ ಅಭಿವೃದ್ಧಿ ಸಾಹಿತ್ಯ – ಸಂಸ್ಕೃತಿ – ಡಾ. ಶ್ರೀನಿವಾಸ ಗಿಳಿಯಾರು, ಚಿಂತನ ಬಯಲು ಪ್ರಕಾಶನ, ಬಂಟ್ವಾಳ ತಾಲೂಕು, 2017.
32. ಕನ್ನಡ ದಲಿತ ಸಾಹಿತ್ಯ, ಸಂಪುಟ: 4 – ಪ್ರಸಂ. ಪ್ರೊ. ಎಚ್.ಟಿ. ಪೋಟೆ, ಸಂ: ಡಾ. ಹಣಮಂತ ಬಿ. ಮೇಲಕೇರಿ, ಡಾ. ಜೈಶೇನ ಪ್ರಸಾದ ರೇವಣಪ್ಪ, ಕನ್ನಡ ಅಧ್ಯಯನ ಸಂಸ್ಥೆ. ಗುಲ್ಬರ್ಗಾ, 2018.
33. ಬಾಬಾಸಾಹೇಬ್ ಡಾ. ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳ ಸಂಪುಟ 1, 2, 3, 5, ಕುವೆಂಪು ಭಾಷಾಭಾರತಿ.